ॐ



ಮುನಿಶ್ರೀ ನೇಮಿಚಂದ್ರ ಸಿದ್ಧಾಂತದೇವ ವಿರಚಿತ


ದ್ರವ್ಯಸಂಗ್ರಹ



ಶಾಸ್ತ್ರದಾನ



ಪೆರಾಡಿಬೀಡಿನ ಭಗವಾನ್ ೧೦೦೮ ಶ್ರೀ ಪಾರ್ಶ್ವನಾಥ ಸ್ವಾಮಿ



ಪೆರಾಡಿಬೀಡಿನಲ್ಲಿ ಆರಾಧಿಸುವ ಮಾತೆ ಶ್ರೀ ಪದ್ಮಾವತಿ ದೇವಿ

ಅನುಕ್ರಮಣಿಕೆ

ಮುನಿಶ್ರೀ ನೇಮಿಚಂದ್ರ ಸಿದ್ಧಾಂತದೇವ ವಿರಚಿತ

ದ್ರವ್ಯಸಂಗ್ರಹ

ದಿ| ಡಾ. ಬಿ. ಯಶೋವರ್ಮ

'ನಿನಾದ', ಉಜಿರೆ – ಇವರ ಸ್ಮರಣಾರ್ಥ

ಶಾಸ್ತ್ರದಾನ

ಪ್ರಕಾಶಕರು

ಶ್ರೀಮತಿ ಸೋನಿಯಾ ವರ್ಮ ಮತ್ತು ಮಕ್ಕಳು

'ನಿನಾದ', ಉಜಿರೆ, ದ.ಕ.

ಸಂಯೋಜನೆ

ಡಾ| ಎಸ್. ಡಿ. ಶೆಟ್ಟಿ, ಗಂಧಕುಟಿ, ಉಜಿರೆ

ಶ್ರೀ ಮಲ್ಲಿನಾಥ ಜೈನ್, ಧರ್ಮಸ್ಥಳ

ಮುದ್ರಕರು : ಮಂಜುಶ್ರೀ ಪ್ರಿಂಟರ್ಸ್, ಉಜಿರೆ



ಡಾ| ಬಿ. ಯಶೋವರ್ಮ

'ನಿನಾದ', ಉಜಿರೆ

ಜನನ : 05–12–1955 ನಿಧನ : 23–05–2022

ಸತ್ತ್ವೇಷು ಮೈತ್ರೀಂ ಗುಣಿಷು ಪ್ರಮೋದಂ । ಕ್ಲಿಷ್ಟೇಷು ಜೀವೇಷು ಕೃಪಾಪರತ್ವಂ ॥
ಮಾಧ್ಯಸ್ಥ ಭಾವಂ ವಿಪರೀತವೃತ್ತೌ । ಸದಾ ಮಮಾತ್ಮಾ ವಿದಧಾತು ದೇವ ॥

ಮುನ್ನುಡಿ

■ ಮುನಿರಾಜ ರೆಂಜಾಳ

ಬಂಧುಗಳೇ,

ನಿಮ್ಮ ಕೈಯಲ್ಲಿರುವ ಈ ಶಾಸ್ತ್ರದಾನ ಗ್ರಂಥ ಬಹಳ ಅಮೂಲ್ಯವಾದುದು. ಹಾಗಾದರೆ ಈ ಗ್ರಂಥದಲ್ಲಿ ಯಾವ ವಿಚಾರವಿದೆ? ಎಂಬ ಕುತೂಹಲ ನಿಮಗಿರಬಹುದು. ಅದಕ್ಕಾಗಿ ಕೆಲವು ಮಾತುಗಳನ್ನು ಹೇಳಲು ಹೊರಟಿದ್ದೇನೆ ಕೇಳಿ.

ಜೈನ ಧರ್ಮ ಇಡೀ ಜಗತ್ತಿನಲ್ಲಿ ಅತ್ಯಂತ ವಿಶಿಷ್ಟವೂ, ವಿಭಿನ್ನವೂ ಆದ ಶ್ರೇಷ್ಠ ಧರ್ಮ. ಅದು ನಮ್ಮ ಧರ್ಮ ಎಂಬುದು ನಮಗೆಲ್ಲಾ ಹೆಮ್ಮೆ. ನಿಮಗೆ ಗೊತ್ತಿರಬಹುದು ಜೈನ ಸಿದ್ಧಾಂತಗಳು ವಿಜ್ಞಾನದ ದೃಷ್ಟಿಯಿಂದಲೂ ಸತ್ಯವೆಂದು ನಿರೂಪಿಸಲ್ಪಟ್ಟಿವೆ. ಮುಖ್ಯವಾಗಿ ನಮ್ಮ ಜೈನಧರ್ಮ ನಮ್ಮನ್ನು ಸೃಷ್ಟಿಸುವ, ಪಾಲಿಸುವ ದೇವರು ಇದ್ದಾನೆ ಎಂಬುದನ್ನು ಒಪ್ಪುವುದಿಲ್ಲ. ಹಾಗೆಂದು 'ದೇವರೇ ಇಲ್ಲ' ಎಂದು ಹೇಳುವ ಧರ್ಮವೂ ನಮ್ಮದಲ್ಲ. ತೀರ್ಥಂಕರರೇ ಮೊದಲಾದ ನಮ್ಮ ದೇವರು ನಮಗೆ ಜೀವನದ ಆದರ್ಶಗಳನ್ನು ಪ್ರೇರೇಪಿಸುವ ಮಾರ್ಗದರ್ಶಕರೇ ವಿನಃ ನಮಗೆ ಸುಖ–ದುಃಖಗಳನ್ನು ಕೊಡುವವರು ಅಲ್ಲ. ಇನ್ನು ನಮ್ಮ ಸುಖ–ದುಃಖಗಳಿಗೆ ನಮ್ಮ ಪೂರ್ವಾರ್ಜಿತ ಪಾಪ–ಪುಣ್ಯಗಳೇ ಕಾರಣ ವಿನಃ ಬೇರೆ ಯಾರೂ ಅಲ್ಲ ಎನ್ನುತ್ತದೆ ಜೈನಧರ್ಮ. ಈಗ ಬೇರೆಯವರಂತೆ ನಮಗೆ ಸೃಷ್ಟಿಕರ್ತ ದೇವರಿಲ್ಲ ಎಂದ ಮೇಲೆ, ಈ ಜಗತ್ತಿನ ಸಕಲ ಜೀವರಾಶಿಗಳ ಉತ್ಪತ್ತಿಗೆ ಕಾರಣರು ಯಾರು ಎಂಬ ಪ್ರಶ್ನೆ ಮೂಡುತ್ತದೆ. ಇದಕ್ಕಿರುವ ಉತ್ತರವೇ 'ಷಡ್ದ್ರವ್ಯಗಳು'.

ಅನಾದಿಯೂ ಅನಂತವೂ ಆದ ಈ ಜಗತ್ತು ಜೀವ, ಅಜೀವ (ಪುದ್ಗಲ), ಧರ್ಮ, ಅಧರ್ಮ, ಆಕಾಶ ಮತ್ತು ಕಾಲ – ಎಂಬ ಆರು ದ್ರವ್ಯಗಳಿಂದ ಮಾಡಲ್ಪಟ್ಟಿದೆ ಎನ್ನುತ್ತದೆ ಜೈನಧರ್ಮ. ತಟ್ಟನೆ ನೀವು ಈ ಆರು ದ್ರವ್ಯಗಳನ್ನು ಯಾರು ಸೃಷ್ಟಿ ಮಾಡಿದರು? ಎಂದು ಕೇಳುತ್ತೀರಿ. ಇದಕ್ಕೆ ಉತ್ತರವಾಗಿ ಈ ಷಡ್ದ್ರವ್ಯಗಳನ್ನು ಯಾರೂ ಸೃಷ್ಟಿ ಮಾಡಿಲ್ಲ; ಬದಲಾಗಿ ಹೇಗೆ ಬೇರೆಯವರು ಸೃಷ್ಟಿಕರ್ತ ದೇವರನ್ನು, ಆತ ಸ್ವಯಂಭೂ, ಅನಾದಿ–ಅನಂತ ಎನ್ನುತ್ತಾರೋ ಹಾಗೆಯೇ ಈ ಆರು ದ್ರವ್ಯಗಳೂ ಸ್ವಯಂಭೂ (ಅಂದರೆ ತನ್ನಿಂದ ತಾನೇ ಸೃಷ್ಟಿಯಾಗಿರುವುದು), ಅನಾದಿ–ಅನಂತ ಎನ್ನುತ್ತದೆ ಜೈನ ಧರ್ಮ. ಈ ಆರು ದ್ರವ್ಯಗಳಿಗೆ ಸಂಬಂಧಿಸಿದ ಹಲವು ವಿಚಾರಗಳನ್ನು ತಿಳಿಸುವ ಸುಂದರ ಪುಸ್ತಕವೇ ಈ 'ದ್ರವ್ಯ ಸಂಗ್ರಹ'.

ಮುಂದೆ ಪುಸ್ತಕವನ್ನು ನೀವೇ ಓದುತ್ತೀರಿ. ಆದರೂ ಅದರ ಸಾರಾಂಶವನ್ನು ಒಂದಿಷ್ಟು ಇಲ್ಲಿ ಹೇಳಿಬಿಡುತ್ತೇನೆ. ದ್ರವ್ಯಗಳಲ್ಲಿ ಮೊದಲ ದ್ರವ್ಯ 'ಜೀವ'. ಜಗತ್ತಿನಲ್ಲಿ ಇದೇ ಬಹಳ ಮುಖ್ಯವಾದುದು. ಈ ಜೀವವನ್ನೇ ರೂಢಿಯಲ್ಲಿ 'ಆತ್ಮ', 'ಪ್ರಾಣ', 'ಚೈತನ್ಯ' ಎಂಬಿತ್ಯಾದಿ ಬೇರೆ ಬೇರೆ ಶಬ್ದಗಳಲ್ಲಿ ಹೇಳುತ್ತೇವೆ. ಅಂದರೆ ಚೈತನ್ಯಯುಕ್ತವಾದ, ಇಂದ್ರಿಯ, ಬಲ, ಆಯು, ಶ್ವಾಸೋಚ್ಛ್ವಾಸ ಎಂಬ ನಾಲ್ಕು ಪ್ರಾಣಗಳಿಂದ ಕೂಡಿದ ಆತ್ಮವನ್ನೇ 'ಜೀವದ್ರವ್ಯ' ಎನ್ನುವುದು. ಯಾರಾದರೂ ಮರಣ ಹೊಂದಿದಾಗ– 'ಅವರ ಜೀವ ಹೋಯಿತು' ಎನ್ನುತ್ತೇವೆ. ಅಂದರೆ ಅರ್ಥವೇನು? ಅವರ ಪುದ್ಗಲ ಶರೀರದೊಳಗೆ ಇರುವ 'ಆತ್ಮ' ಅಥವಾ ಚೈತನ್ಯ ಅಥವಾ ನಾಲ್ಕು ಪ್ರಾಣಗಳು ಹೊರಟು ಹೋಗುವುದನ್ನೇ 'ಮರಣ' ಎನ್ನುತ್ತೇವೆ. ಸಕಲ ಜೀವರಾಶಿಗಳ

ಒಳಗಿರುವ ಈ ಅಸಂಖ್ಯಾತ ಆತ್ಮಗಳನ್ನು ಯಾರೂ ಸೃಷ್ಟಿಸಿದ್ದಲ್ಲ. ನಿಗೋದದಲ್ಲಿ ತಾನಾಗಿಯೇ ಹುಟ್ಟಿಕೊಂಡು ಮೋಕ್ಷದ ಕಡೆಗೆ ಸಾಗುತ್ತದೆ ಈ ಆತ್ಮಚೈತನ್ಯ. ನಾವು-ನೀವು ಎಲ್ಲರೂ ಹೀಗೆಯೇ ಇಲ್ಲಿಗೆ ಬಂದವರು. ಈ ಜೀವದ್ರವ್ಯದ ಸ್ಥಿತಿ-ಗತಿಗಳ ಸುಂದರವಾದ ವಿವರಣೆ ಈ ದ್ರವ್ಯಸಂಗ್ರಹ ಗ್ರಂಥದಲ್ಲಿದೆ.

ಇನ್ನು ಎರಡನೇ ದ್ರವ್ಯ ಅಜೀವ (ಪುದ್ಗಲ). ಜೀವಕ್ಕೆ ಆಸರೆಯಾಗುವುದು ಅಜೀವ. ಉದಾಹರಣೆಗೆ ನಮ್ಮ ಶರೀರ ಆತ್ಮನಿಗೆ ಆಶ್ರಯ ನೀಡಿದೆ. ಜೀವ ಇಲ್ಲದೇ ಹೋದರೆ ಈ ಶರೀರ ಅಜೀವ. ಮರಣದ ಸಂದರ್ಭದಲ್ಲಿ ಇದು ಸರಿಯಾಗಿ ತಿಳಿಯುತ್ತದೆ. ಜೀವ ಹೊರಟು ಹೋದಾಗ ಶರೀರ ಅಜೀವವಾಗಿ ಇಲ್ಲಿಯೇ ಉಳಿಯುತ್ತದೆ. ಈ ಪುದ್ಗಲರೂಪಿ ಅಜೀವ ಶರೀರ ಕರ್ಮದ ಫಲದಿಂದ ನಿರ್ಮಾಣವಾಗುತ್ತದೆ. ಇದನ್ನು ಯಾರೂ ಮಾಡುವುದಿಲ್ಲ. ಕರ್ಮಗಳ ಪರಿಣಾಮದಿಂದ ತಾನಾಗಿಯೇ ರಚನೆಯಾಗುತ್ತದೆ. ಆದ್ದರಿಂದಲೇ ಕರ್ಮಗಳನ್ನೆಲ್ಲಾ ನಾಶಪಡಿಸಿ ಮೋಕ್ಷ ಪಡೆದ 'ಸಿದ್ಧ' ಪರಮೇಷ್ಠಿಗಳಿಗೆ ಶರೀರ ಇರುವುದಿಲ್ಲ.

ಇನ್ನೆರಡು ದ್ರವ್ಯಗಳು ಧರ್ಮ ಮತ್ತು ಅಧರ್ಮ. ಕೇವಲ ಆತ್ಮ ಮತ್ತು ಶರೀರದಿಂದಷ್ಟೇ ಈ ಜಗತ್ತು ನಡೆಯುವುದಿಲ್ಲ. ಜೀವ - ಅಜೀವದೊಂದಿಗೆ ಸೇರಿ ಚಲಿಸತೊಡಗಿದಾಗ, ಅದರ ಚಲನೆಗೆ ಸಹಾಯಕವಾಗುವುದೇ ಧರ್ಮದ್ರವ್ಯ. ಇದನ್ನು ಮೀನಿನ ಚಲನೆಗೆ ಸಹಾಯಕವಾಗುವ ನೀರಿನಂತೆ ಎಂದು ಆಚಾರ್ಯರು ವಿವರಿಸುತ್ತಾರೆ. ಆದರೆ ಪುದ್ಗಲ ಶರೀರದೊಂದಿಗೆ ಸೇರಿದ ಜೀವ ಯಾವಾಗಲೂ ಚಲಿಸುತ್ತಲೇ ಇದ್ದರೂ ಕಷ್ಟವೆ. ಚಲನೆಯಂತೆ ನಿಲ್ಲುವುದೂ ಅವಶ್ಯಕ. ಹೀಗೆ ನಿಲ್ಲುವುದಕ್ಕೆ ನೆರವಾಗುವುದು ಅಧರ್ಮ ದ್ರವ್ಯ. ಇಲ್ಲಿ ಶಬ್ದಾರ್ಥವನ್ನು ಯಾರೂ ಗೊಂದಲ ಮಾಡಿಕೊಳ್ಳಬಾರದು. ಧರ್ಮ ಎಂದರೆ ಒಳ್ಳೆಯದು, ಅಧರ್ಮ ಎಂದರೆ ಕೆಟ್ಟದ್ದು ಎಂಬ ಅರ್ಥ ಇಲ್ಲಿ ಅನ್ವಯಿಸುವುದಿಲ್ಲ. ಇಲ್ಲಿ ಧರ್ಮ ಮತ್ತು ಅಧರ್ಮಗಳು ಜೀವಾತ್ಮ ಪುದ್ಗಲದೊಂದಿಗೆ ಸೇರಿ ಕ್ರಿಯಾಶೀಲವಾದಾಗ ಚಲನೆಗೂ ನಿಲ್ಲುವುದಕ್ಕೂ ಸಹಾಯಕವಾಗುವ ಎರಡು ದ್ರವ್ಯಗಳಷ್ಟೆ. ಸಿದ್ಧಲೋಕವು ಸೇರಿದಂತೆ ಧರ್ಮದ್ರವ್ಯ ಇರುವಲ್ಲಿಯವರೆಗೆ ಮಾತ್ರ ಆತ್ಮ ಚಲಿಸುತ್ತದೆ. ಅದರಾಚೆಗೆ ಹೋಗುವುದಿಲ್ಲ.

ಮತ್ತೊಂದು ದ್ರವ್ಯ ಆಕಾಶ. ಆಕಾಶ ಎಂದರೆ ಅವಕಾಶ ಎಂದರ್ಥ. ಜೀವ ಅಜೀವದೊಂದಿಗೆ ಸೇರಿ ಧರ್ಮದ್ರವ್ಯದ ಸಹಾಯದಿಂದ ಚಲಿಸುವುದು ಅಧರ್ಮ ದ್ರವ್ಯದ ನೆರವಿನಿಂದ ನಿಲ್ಲುವುದು ಈ ಆಕಾಶ ದ್ರವ್ಯ ಒದಗಿಸುವ ಅವಕಾಶ ಪ್ರದೇಶದಲ್ಲಿ ಮಾತ್ರ. ಆಕಾಶ ದ್ರವ್ಯವಿಲ್ಲದೆ ಇರುತ್ತಿದ್ದರೆ ಚಲಿಸುವುದಕ್ಕೂ ನಿಲ್ಲುವುದಕ್ಕೂ ಅವಕಾಶವೇ ಇರುತ್ತಿರಲಿಲ್ಲ. ಇನ್ನು ಕೊನೆಯ ದ್ರವ್ಯ ಕಾಲ. ಇಡೀ ಜಗತ್ತಿನಲ್ಲಿ ಪರಿವರ್ತನೆಯನ್ನು ಉಂಟುಮಾಡುವುದೇ ಕಾಲ ದ್ರವ್ಯ. ಕಾಲದ ಕಾರಣದಿಂದಲೇ ಎಲ್ಲರೂ, ಎಲ್ಲವೂ ಬದಲಾಗುತ್ತಿರುತ್ತದೆ. ಮಗು ಮುದುಕನಾಗುವುದು, ಗಿಡ ಮರವಾಗುವುದು, ಹೀಗೆ ಜಗತ್ತಿನಲ್ಲಿ ಎಲ್ಲಾ ಬೆಳವಣಿಗೆಗಳು ಕಾಲದ್ರವ್ಯದಿಂದಾಗಿ ಉಂಟಾಗುತ್ತದೆ. ಹೀಗೆ ಜೀವ, ಅಜೀವ, ಧರ್ಮ-ಅಧರ್ಮ, ಆಕಾಶ ಮತ್ತು ಕಾಲ ಎಂಬ ಷಡ್ದ್ರವ್ಯಗಳಿಗೆ ಸಂಬಂಧಿಸಿದಂತೆ ನಾವು ತಿಳಿದುಕೊಳ್ಳಲೇಬೇಕಾದ ಮುಖ್ಯ ಸಂಗತಿಗಳನ್ನು ಈ ದ್ರವ್ಯ ಸಂಗ್ರಹ ಪುಸ್ತಕದಲ್ಲಿ ಮುನಿಶ್ರೀ ನೇಮಿಚಂದ್ರ ಸಿದ್ಧಾಂತ ಚಕ್ರವರ್ತಿಗಳು ಸಂಕ್ಷಿಪ್ತವಾಗಿಯೂ ಸುಂದರವಾಗಿಯೂ ತಿಳಿಸಿದ್ದಾರೆ.

ಇಷ್ಟಕ್ಕೆ ಮುಗಿಯುವುದಿಲ್ಲ. ಈ ಆರು ದ್ರವ್ಯಗಳಿಗೆ ಸಂಬಂಧಿಸಿದಂತೆ ಇನ್ನೂ ಕೆಲವು ಮಹತ್ವದ ವಿಷಯಗಳಿವೆ. ಜೈನ ಸಿದ್ಧಾಂತ ಕೇವಲ ಷಡ್ದ್ರವ್ಯಗಳಿಗಷ್ಟೆ ಸೀಮಿತವಾಗಿಲ್ಲ. ಅವುಗಳಿಗೆ ಪೂರಕವಾಗಿ ಪಂಚಾಸ್ತಿಕಾಯ, ಸಪ್ತ ತತ್ವಗಳು ಹಾಗೂ ನವ ಪದಾರ್ಥಗಳ ಕುರಿತಾದ ಮಹತ್ವದ ಸಂಗತಿಗಳನ್ನು ಜೈನರಾಗಿ ನಾವು ತಿಳಿದುಕೊಳ್ಳಲೇಬೇಕು. ವಿಷಯದ ಪೂರ್ಣ ಅರಿವಿನ ದೃಷ್ಟಿಯಿಂದ ಅವುಗಳನ್ನು ಈ ಗ್ರಂಥದಲ್ಲಿ ವಿಶ್ಲೇಷಿಸಿದ್ದಾರೆ.

ಜೀವ, ಅಜೀವ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ಎಂಬ ಈ ಆರು ದ್ರವ್ಯಗಳಲ್ಲಿ ಕಾಲವನ್ನು ಹೊರತುಪಡಿಸಿ ಉಳಿದ ಐದನ್ನು 'ಪಂಚ ಅಸ್ತಿ ಕಾಯಗಳು' ಎಂದು ಕರೆಯುತ್ತೇವೆ. 'ಅಸ್ತಿ' ಎಂದರೆ ಇರುವುದು. 'ಕಾಯ' ಎಂದರೆ ಹೆಚ್ಚಿನ ಪ್ರದೇಶಗಳನ್ನು ಆವರಿಸಿಕೊಂಡಿರುವುದು. ಕಾಲ ದ್ರವ್ಯವು ಪ್ರದೇಶಗಳನ್ನು ಆವರಿಸಿಕೊಂಡಿಲ್ಲ. ಆದ್ದರಿಂದ ಜೀವ, ಅಜೀವ, ಧರ್ಮ, ಅಧರ್ಮ, ಆಕಾಶಗಳನ್ನು ಪಂಚಾಸ್ತಿ ಕಾಯಗಳು ಎಂದಿದ್ದಾರೆ. ಇನ್ನೊಂದು ವಿಚಾರ ಸಪ್ತ ತತ್ವಗಳದ್ದು. ಜೈನ ಧರ್ಮ ಕರ್ಮಸಿದ್ಧಾಂತ ಪ್ರಧಾನವಾದ ಧರ್ಮ. ಅದು ಒಂದೆಡೆ ನಮ್ಮನ್ನು ಹುಟ್ಟಿಸುವ, ಪಾಲಿಸುವ ದೇವರು ಇಲ್ಲ ಎಂದು ಹೇಳುತ್ತಲೇ ಇನ್ನೊಂದೆಡೆ ನಮ್ಮ ಎಲ್ಲಾ ಸುಖ-ದುಃಖಗಳಿಗೆ ನಾವೇ ಸಂಪಾದಿಸಿದ ಕರ್ಮ ಒಂದೇ ಕಾರಣ ಎನ್ನುತ್ತದೆ. ಪ್ರತಿಯೊಂದು ಜೀವವು ಹೇಗೆ ಕರ್ಮವನ್ನು ಸಂಪಾದಿಸುತ್ತದೆ ಮತ್ತು ಕರ್ಮದಿಂದ ಹೇಗೆ ಬಿಡುಗಡೆಗೊಂಡು ಮೋಕ್ಷವನ್ನು ಪಡೆಯಬಹುದು ಎಂಬುದರ ವಿವರಣೆ ನೀಡುವುದೇ ಸಪ್ತ ತತ್ವಗಳು.

ಜೀವ, ಅಜೀವ (ಪುದ್ಗಲ), ಆಸ್ರವ, ಬಂಧ, ಸಂವರ, ನಿರ್ಜರ, ಮೋಕ್ಷ ಇವೇ ಸಪ್ತ ತತ್ವಗಳು. ಒಂದು ಜೀವಾತ್ಮ ಪುದ್ಗಲ ಶರೀರದೊಂದಿಗೆ ಸೇರಿ ಕ್ರಿಯಾಶೀಲವಾಗುತ್ತದೆ. ಅಂದರೆ ನಮ್ಮ ಆತ್ಮ ನಮ್ಮ ಶರೀರದ ಜೊತೆ ಸೇರಿ ಮಾಡುವ ಆಲೋಚನೆಗಳು, ಆಡುವ ಮಾತುಗಳು, ಮಾಡುವ ಕೆಲಸಗಳು ಕರ್ಮದ ಉತ್ಪತ್ತಿಗೆ ಕಾರಣವಾಗುತ್ತವೆ. ನಾವೇ ಮಾಡಲಿ ಬೇರೆಯವರಿಂದ ಮಾಡಿಸಲಿ ಅಥವಾ ಮಾಡುವವರಿಗೆ ಒಪ್ಪಿಗೆಯನ್ನು, ಪ್ರೋತ್ಸಾಹವನ್ನು ಕೊಡಲಿ, ಕರ್ಮ ಉತ್ಪತ್ತಿಯಾಗುತ್ತದೆ. ಒಳ್ಳೆಯದಾದರೆ ಪುಣ್ಯಕರ್ಮ, ಕೆಟ್ಟದಾದರೆ ಪಾಪಕರ್ಮ. ಹೀಗೆ ಉತ್ಪತ್ತಿಯಾದ ಕರ್ಮ ಆತ್ಮನ ಬಳಿಗೆ ಬರುವುದನ್ನು ಆಸ್ರವವೆಂದೂ, ಆತ್ಮನಿಗೆ ಅಂಟಿಕೊಳ್ಳುವುದನ್ನು ಬಂಧವೆಂದೂ ಹೇಳುತ್ತೇವೆ. ಒಂದುವೇಳೆ ಜ್ಞಾನನಾದವನು ಆತ್ಮನಿಗೆ ಕರ್ಮ ಅಂಟದಂತೆ ಎಚ್ಚರಿಕೆ ವಹಿಸಿದರೆ ಅದನ್ನು ಸಂವರವೆಂದೂ, ಅಂಟಿದ ಕರ್ಮಗಳನ್ನು ನಾಶಪಡಿಸಲು ತೊಡಗಿದರೆ ನಿರ್ಜರವೆಂದೂ ಹೇಳಿ, ಕೊನೆಗೆ ಕರ್ಮಗಳೆಲ್ಲವೂ ನಾಶವಾಗಿ ಆತ್ಮ ಪರಿಶುದ್ಧವಾದರೆ ಮೋಕ್ಷವೆಂದೂ ಹೇಳಲಾಗುತ್ತದೆ. ಇವೆಲ್ಲವೂ ಹೇಗೆ ನಡೆಯುತ್ತವೆ ಎಂಬ ವಿಚಾರಗಳ ವಿಶ್ಲೇಷಣೆಯೇ ಸಪ್ತ ತತ್ವಗಳು ವಿಭಾಗದಲ್ಲಿದೆ.

ಇದಕ್ಕೆ ಆಚಾರ್ಯರು ಒಂದು ಸರಳ ಸುಂದರ ಉದಾಹರಣೆಯನ್ನು ನೀಡುತ್ತಾರೆ. ಈ ಜಗತ್ತು ಒಂದು ಸಮುದ್ರವಿದ್ದಂತೆ. ಹುಟ್ಟು ಮತ್ತು ಸಾವು ಅದರ ಎರಡು ದಡಗಳು. ನಮ್ಮ ಜೀವದ ಪ್ರಯಾಣ ದೋಣಿಯಂತೆ ಸಾಗುತ್ತದೆ. ಆಗ ದೋಣಿಯಲ್ಲಿ ರಂಧ್ರವಾದರೆ ನೀರು ಒಳಗೆ ಬರುತ್ತದೆ. ಇದೇ ಆಸ್ರವ. ಅನಂತರ ಬಂದ ನೀರು ದೋಣಿಯೊಳಗೆ ನಿಲ್ಲುತ್ತದೆ. ಅದೇ ಬಂಧ. ನಾವು ಎಚ್ಚರಿಕೆಯಿಂದ ನೀರು ಒಳ ಬರದಂತೆ ರಂಧ್ರವನ್ನು ಮುಚ್ಚಿದರೆ ಅದೇ ಸಂವರ.

ಆಮೇಲೆ ಈಗಾಗಲೇ ಒಳಗೆ ಸಂಗ್ರಹವಾಗಿರುವ ನೀರನ್ನು ಹೊರಗೆ ಚೆಲ್ಲಿದರೆ ಅದು ನಿರ್ಜರೆ. ನೀರನ್ನು ಪೂರ್ಣ ಖಾಲಿ ಮಾಡಿದೆವೆಂದರೆ ಅದೇ ಮೋಕ್ಷ. ಹೀಗೆ ಸಪ್ತ ತತ್ವವನ್ನು ವಿವರಿಸಿದ್ದಾರೆ. ಈ ದ್ರವ್ಯ ಸಂಗ್ರಹ ಗ್ರಂಥದಲ್ಲಿ ನಮ್ಮ ಆತ್ಮಕಲ್ಯಾಣಕ್ಕೆ ಸಂಬಂಧಿಸಿದ ಈ ಸಪ್ತತತ್ವಗಳ ವಿಚಾರಗಳನ್ನು ಸೂಕ್ಷ್ಮರೂಪದಲ್ಲಿ ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಇಷ್ಟೇ ಅಲ್ಲದೆ ಈ ಸಪ್ತತತ್ವಗಳಿಗೆ ಪಾಪ ಮತ್ತು ಪುಣ್ಯ ಎಂಬ ಸಂಗತಿಗಳನ್ನು ಸೇರಿಸಿ ನವ ಪದಾರ್ಥಗಳೆಂದು ಗುರುತಿಸಲಾಗಿದೆ. ಇದರ ಬಗ್ಗೆಯೂ ಗ್ರಂಥದಲ್ಲಿ ವಿವರಣೆ ಇದೆ.

ಬಂಧುಗಳೇ, ಒಳ್ಳೆಯ ವಿಚಾರಗಳನ್ನು ಆಲೋಚಿಸುವ, ಆಚರಿಸುವ, ಅವಕಾಶ ಇರುವ ಶ್ರೇಷ್ಠ ಜನ್ಮ ಮಾನವಜನ್ಮ. ಅದು ನಮಗೆ ಲಭಿಸಿದೆ. ಅದರಲ್ಲಿಯೂ ಜೈನರಾಗಿ ಹುಟ್ಟಿರುವುದು ನಮ್ಮ ಮಹಾಭಾಗ್ಯ. ಇದನ್ನು ಹೇಗೆ ಸದುಪಯೋಗಪಡಿಸಿಕೊಳ್ಳಬೇಕು ಎಂಬುದನ್ನು ಈ ದ್ರವ್ಯಸಂಗ್ರಹ ಗ್ರಂಥ ತಿಳಿಸುತ್ತದೆ. ಜೈನ ಸಿದ್ಧಾಂತ ಸಂಗ್ರಹ ಎಂದೇ ಕರೆಯಲ್ಪಡುವ ಈ ಪುಸ್ತಕ ಆತ್ಮಕಲ್ಯಾಣ ಸಾಧಿಸಬೇಕು ಎಂದು ಬಯಸುವವರಿಗೆ ಪ್ರವೇಶ ದ್ವಾರ ತೆರೆಯುವ ಗ್ರಂಥ. ನಮ್ಮ ನಮ್ಮ ಆತ್ಮಗಳು ಇದುವರೆಗೆ ಅದೆಷ್ಟೋ ಜನ್ಮಗಳನ್ನೆತ್ತಿ ಶರೀರ ಸುಖಭೋಗಗಳನ್ನು ಅನುಭವಿಸಿ ಬಂದಿವೆ. ಆದರೆ ಆತ್ಮನ ಸುಖದ ಬಗ್ಗೆ ಯೋಚಿಸಲೇ ಇಲ್ಲ. ಈಗ ಮನುಷ್ಯ ಜನ್ಮದ ಅಪೂರ್ವ ಅವಕಾಶವನ್ನು ಉಪಯೋಗಿಸಿಕೊಂಡು ಆತ್ಮ ಗೆದ್ದು ನಿಲ್ಲುವ ಬಗ್ಗೆ ಯೋಚಿಸದೇ ಇದ್ದರೆ ಮತ್ತೆಲ್ಲೂ ಯೋಚಿಸಲು ಆಗುವುದಿಲ್ಲ. ಹೀಗಾಗಿ ಆತ್ಮಕಲ್ಯಾಣದ ಕುರಿತು ಸರಿಯಾದ ಮಾರ್ಗದಲ್ಲಿ ಯೋಚಿಸಬೇಕು ಎಂದು ಬಯಸುವುದಾದರೆ ಈ ದ್ರವ್ಯ ಸಂಗ್ರಹ ಗ್ರಂಥವನ್ನು ಶ್ರದ್ಧೆಯಿಂದ ಓದಬೇಕು. ಮತ್ತೆ ಮತ್ತೆ ಆಲೋಚಿಸಬೇಕು, ಆಚರಿಸಬೇಕು. ಇಂತಹ ಸದುದ್ದೇಶದಿಂದಲೇ ಈ ಶಾಸ್ತ್ರದಾನ ಕೃತಿಯನ್ನು ನಿಮ್ಮ ಕೈಯಲ್ಲಿ ಇರಿಸಿದ್ದಾರೆ. ಇದನ್ನು ಓದಿ ನಿಮ್ಮ ಜೀವನ ಸಾರ್ಥಕವಾದರೆ ಶಾಸ್ತ್ರದಾನ ಮಾಡಿದವರ ಶ್ರಮವೂ ಸಾರ್ಥಕ.

ಜೈ ಜಿನೇಂದ್ರ

***

ಬಿನ್ನಹ ...

ನಮ್ಮ ಬಾಳಿನ ನಂದಾದೀಪವಾಗಿದ್ದ ಡಾ. ಬಿ. ಯಶೋವರ್ಮರವರು ಮೇ. 23–2022ರಂದು ನಿಧನರಾದ ಪ್ರಯುಕ್ತ ಅವರ ಆತ್ಮಕ್ಕೆ ಚಿರಶಾಂತಿ ಕೋರುತ್ತ ಅವರ ಸ್ಮರಣಾರ್ಥ 'ದ್ರವ್ಯ ಸಂಗ್ರಹ' ಎಂಬ ಗ್ರಂಥವನ್ನು ಶಾಸ್ತದಾನವಾಗಿ ಪ್ರಕಟಿಸುತ್ತಿದ್ದೇವೆ. ಈ ಶಾಸ್ತ್ರದಾನ ಕೃತಿಯನ್ನು ಸಂಯೋಜನೆಗೊಳಿಸುವಲ್ಲಿ ಸಹಕರಿಸಿದ ಡಾ. ಎಸ್. ಡಿ. ಶೆಟ್ಟಿ, ಡಾ. ಬಿ. ಪಿ. ಸಂಪತ್ ಕುಮಾರ, ಶ್ರೀ ಮುನಿರಾಜ ರೆಂಜಾಳ, ಶ್ರೀ ಮಲ್ಲಿನಾಥ್ ಜೈನ್ ಇವರಿಗೆ ನಮ್ಮ ಕೃತಜ್ಞತೆಗಳು. ಪುಸ್ತಕವನ್ನು ಸಕಾಲದಲ್ಲಿ ಸುಂದರವಾಗಿ ಮುದ್ರಿಸಿಕೊಟ್ಟ ನಮ್ಮ ಮಂಜುಶ್ರೀ ಪ್ರಿಂಟರ್ಸ್‌ನ ವ್ಯವಸ್ಥಾಪಕರು ಮತ್ತು ಸಿಬ್ಬಂದಿವರ್ಗದವರಿಗೆ ವಂದನೆಗಳು.

ಸದ್ಧರ್ಮ ಬಂಧುಗಳಾದ ತಾವು ಈ ಕೃತಿಯ ಸದುಪಯೋಗ ಪಡಿಸಿಕೊಳ್ಳಬೇಕಾಗಿ ಕೋರುತ್ತೇವೆ.

ಪ್ರಕಾಶಕರು

ದಿನಾಂಕ : 08-06-2022

ಮುನಿ ನೇಮಿಚಂದ್ರ ಸಿದ್ಧಾಂತ ದೇವ-ವಿರಚಿತ

ದ್ರವ್ಯ ಸಂಗ್ರಹಃ

ಮೊದಲನೆಯ ಅಧ್ಯಾಯ

ಮಂಗಲಾಚರಣೆ

ಜೀವಮಜೀವಂ ದವ್ವಂ । ಜಿಣವರವಸಹೇಣ ಜೇಣ ಣಿದ್ದಿಟ್ಠಂ ।
ದೇವಿಂದವಿಂದವಂದಂ । ವಂದೇ ತಂ ಸವ್ವದಾ ಸಿರಸಾ ॥ ೧ ॥

ಸಂಸ್ಕೃತಚ್ಛಾಯಾ

ಜೀವಮಜೀವಂ ದ್ರವ್ಯಂ । ಜಿನವರವೃಷಭೇಣ ಯೇನ ನಿರ್ದಿಷ್ಟಂ ।
ದೇವೇಂದ್ರವೃಂದವಂದ್ಯಂ । ವಂದೇ ತಂ ಸರ್ವದಾ ಶಿರಸಾ ॥ ೧ ॥

ಅರ್ಥ: ಯಾವ ಋಷಭನಾಥ ಭಗವಾನರು ಜೀವ ಮತ್ತು ಅಜೀವ ದ್ರವ್ಯಗಳ ಬಗ್ಗೆ ವಿವರಿಸಿರುವರೋ ಅವರಿಗೆ ನಾನು (ನೇಮಿಚಂದ್ರ ಸಿದ್ಧಾಂತ ದೇವ) ಯಾವಾಗಲೂ ತಲೆ ತಗ್ಗಿಸಿ ನಮಸ್ಕರಿಸುತ್ತೇನೆ.

ಜೀವೋ ಉವಓಗಮಓ । ಅಮುತ್ತಿ ಕತ್ತಾ ಸದೇಹ ಪರಿಮಾಣೋ ।
ಭೋತ್ತಾ ಸಂಸಾರತ್ಥೋ । ಸಿದ್ಧೋ ಸೋ ವಿಸ್ಸಸೋಢ್ಢಗಈ ॥ ೨ ॥

ಜೀವ ಉಪಯೋಗಮಯಃ । ಅಮೂರ್ತಿಃ ಕರ್ತಾ ಸ್ವದೇಹ ಪರಿಮಾಣಃ।
ಭೋಕ್ತಾ ಸಂಸಾರಸ್ಥಃ । ಸಿದ್ಧಃ ಸ ವಿಸ್ರಸೋರ್ಧ್ವಗತಿಃ ॥ ೨ ॥

ಅರ್ಥ: ಈ ಜೀವವು ಪ್ರಾಣಯುಕ್ತವಾಗಿದೆ, ಆದ್ದರಿಂದ ಜೀವವಾಗಿದೆ. ತಿಳಿಯುವ, ನೋಡುವ ಗುಣವುಳ್ಳದ್ದಾಗಿರುವುದರಿಂದ ಉಪಯೋಗ ಮಯಿಯಾಗಿದೆ. ಅಮೂರ್ತಿಕವಾಗಿದೆ, ಕರ್ತಾ ಆಗಿದೆ, ತನ್ನ ಶರೀರ ಪ್ರಮಾಣದ್ದಾಗಿದೆ, ಸಂಸಾರಿಯಾಗಿದೆ ಸಿದ್ಧ ಆಗಿದೆ ಮತ್ತು ಸ್ವಭಾವದಿಂದ ಊರ್ಧ್ವ ಗಮನ ಸ್ವಭಾವದ್ದಾಗಿದೆ.

೧. ಜೀವ ಸ್ವರೂಪ ವರ್ಣನೆ

ತಿಕ್ಕಾಲೇ ಚದುಪಾಣಾ । ಇಂದಿಯಬಲಮಾಉ ಆಣಪಾಣೋ ಯ ।
ವವಹಾರಾ ಸೋ ಜೀವೋ। ಣಿಚ್ಚಯಣಯದೋ ದು ಚೇದಣಾ ಜಸ್ಸ ॥ ೩ ॥

ತ್ರಿಕಾಲೇ ಚತುಃಪ್ರಾಣಾಃ । ಇಂದ್ರಿಯಂ ಬಲಮಾಯುರಾನಪ್ರಾಣಶ್ಚ ।
ವ್ಯವಹಾರಾತ್ ಸ ಜೀವಃ। ನಿಶ್ಚಯನಯತಸ್ತುಚೇತನಾ ಯಸ್ಯ ॥ ೩ ॥

ಅರ್ಥ: ವ್ಯವಹಾರನಯದಿಂದ ಯಾವುದಕ್ಕೆ ಮೂರೂ ಕಾಲಗಳಲ್ಲಿ ಇಂದ್ರಿಯ, ಬಲ, ಆಯುಷ್ಯ ಮತ್ತು ಶ್ವಾಸೋಚ್ಛ್ವಸ ಈ ನಾಲ್ಕು ಪ್ರಾಣಗಳಿವೆಯೋ ಮತ್ತು ನಿಶ್ಚಯನಯದಿಂದ ಯಾವುದಕ್ಕೆ ಚೈತನ್ಯವಿದೆಯೋ ಅದು ಜೀವವಾಗಿದೆ.

೨. ಉಪಯೋಗಮಯತ್ವ ವರ್ಣನೆ

ಉವಓಗೋ ದುವಿಯಪ್ಪೋ । ದಂಸಣಣಾಣಂ ಚ ದಂಸಣಂ ಚದುಧಾ ।
ಚಕ್ಖು ಅಚಕ್ಖೂ ಓಹೀ । ದಂಸಣಮಥ ಕೇವಲಂ ಣೇಯಂ ॥ ೪ ॥

ಉಪಯೋಗೋ ದ್ವಿವಿಕಲ್ಪೋ । ದರ್ಶನಜ್ಞಾನಂ ಚ ದರ್ಶನಂ ಚತುರ್ಧಾ ।
ಚಕ್ಷುರಚಕ್ಷುರವಧಿರ್ದರ್ಶನಮಥ ಕೇವಲಂ ಜ್ಞೇಯಂ ॥ ೪ ॥

ಅರ್ಥ: ಉಪಯೋಗವು ಎರಡು ಪ್ರಕಾರವಿದೆ. 1. ದರ್ಶನೋಪಯೋಗ 2. ಜ್ಞಾನೋಪಯೋಗ. ಇದರಲ್ಲಿ ದರ್ಶನೋಪಯೋಗವು ನಾಲ್ಕು ಪ್ರಕಾರವಾಗಿದೆ. 1. ಚಕ್ಷುದರ್ಶನೋಪಯೋಗ 2. ಅಚಕ್ಷುದರ್ಶನೋಪಯೋಗ 3. ಅವಧಿದರ್ಶನೋಪಯೋಗ 4. ಕೇವಲ ದರ್ಶನೋಪಯೋಗ.
ಒಂದು ವಸ್ತುವಿನ ಸಾಮಾನ್ಯ ಅಂಶವನ್ನು ಗ್ರಹಿಸುವುದಕ್ಕೆ ದರ್ಶನೋಪಯೋಗವೆನ್ನುವರು. ಆ ವಸ್ತುವಿನ ಅಂಶವನ್ನು ಗ್ರಹಿಸುವುದು ಜ್ಞಾನೋಪಯೋಗವಾಗುತ್ತದೆ. ಇದರಲ್ಲಿ ಚಕ್ಷುದರ್ಶನವೆಂದರೆ ಚಕ್ಷು ಇಂದ್ರಿಯದಿಂದ ಉತ್ಪನ್ನವಾಗುವ ಮೊದಲಜ್ಞಾನ. ಅಚಕ್ಷು ದರ್ಶನವೆಂದರೆ, ಉಳಿದ ಇಂದ್ರಿಯಗಳಾದ ಸ್ಪರ್ಶ, ರಸ, ಘ್ರಾಣ, ಕೇಳುವುದು ಹಾಗೂ ಮನಸ್ಸಿನಿಂದ ಆಗುವ ಜ್ಞಾನವೆಂದು ವಿವರಿಸಬಹುದು.

ಣಾಣಂ ಅಟ್ಠವಿಯಪ್ಪಂ । ಮದಿಸುದ ಓಹೀ ಅಣಾಣಣಾಣಾಣಿ ॥
ಮಣಪಜ್ಜವಕೇವಲಮವಿ । ಪಚ್ಚಕ್ಖಪರೋಕ್ಖಭೇಯಂ ಚ ॥ ೫ ॥

ಜ್ಞಾನಮಷ್ಟವಿಕಲ್ಪಂ । ಮತಿಶ್ರುತಾವಧಯ ಅಜ್ಞಾನಜ್ಞಾನಾನಿ ।
ಮನಃಪರ್ಯಯಃ ಕೇವಲಮಪಿ । ಪ್ರತ್ಯಕ್ಷಪರೋಕ್ಷಭೇದಂ ಚ ॥ ೫ ॥

ಅರ್ಥ: ಜ್ಞಾನೋಪಯೋಗವು ಅಜ್ಞಾನ ಮತ್ತು ಜ್ಞಾನ ರೂಪದಿಂದ ಎಂಟು ಪ್ರಕಾರವಾಗಿದೆ. 1. ಕುಮತಿ ಜ್ಞಾನ 2. ಕುಶ್ರುತ ಜ್ಞಾನ 3. ಕುಅವಧಿ ಜ್ಞಾನ 4. ಮತಿ ಜ್ಞಾನ 5. ಶ್ರುತ ಜ್ಞಾನ 6. ಅವಧಿ ಜ್ಞಾನ 7. ಮನಃಪರ್ಯಾಯ ಜ್ಞಾನ ಮತ್ತು 8. ಕೇವಲ ಜ್ಞಾನ.
ಪ್ರತ್ಯಕ್ಷ, ಪರೋಕ್ಷಗಳ ಭೇದದಿಂದ ಉಂಟಾಗುವ ಜ್ಞಾನಗಳಿವು. ಇಂದ್ರಿಯಗಳ ಸಹಾಯವಿಲ್ಲದೇ ಕೇವಲ ಆತ್ಮನಿಂದಲೇ ಆಗುವ ಜ್ಞಾನ ಪ್ರತ್ಯಕ್ಷವಾದರೆ, ಇಂದ್ರಿಯ ಮತ್ತು ಆಲೋಕ (ಪ್ರಕಾಶ)ಗಳ ಸಹಾಯದಿಂದ ಆಗುವ ಜ್ಞಾನ ಪರೋಕ್ಷ ಜ್ಞಾನವಾಗಿದೆ.

ಅಟ್ಠ ಚದು ಣಾಣದಂಸಣ । ಸಾಮಣ್ಣಂ ಜೀವಲಕ್ಖಣಂ ಭಣಿಯಂ ॥
ವವಹಾರಾ ಸುದ್ಧಣಯಾ । ಸುದ್ಧಂ ಪುಣ ದಂಸಣಂ ಣಾಣಂ ॥ ೬ ॥

ಅಷ್ಟಚತುರ್ಜ್ಞಾನದರ್ಶನೇ । ಸಾಮಾನ್ಯಂ ಜೀವಲಕ್ಷಣಂ ಭಣಿತಂ ।
ವ್ಯವಹಾರಾತ್ ಶುದ್ಧನಯಾತ್ । ಶುದ್ಧಂ ಪುನರ್ದರ್ಶನಂ ಜ್ಞಾನಂ ॥ ೬ ॥

ಅರ್ಥ : ವ್ಯವಹಾರ ನಯದಿಂದ ಎಂಟು ಪ್ರಕಾರದ ಜ್ಞಾನ ಮತ್ತು ನಾಲ್ಕು ಪ್ರಕಾರದ ದರ್ಶನ ಇವು ಜೀವದ ಲಕ್ಷಣವೆಂದು ಹೇಳಲಾಗಿದೆ. ಶುದ್ಧ ನಿಶ್ಚಯನಯದಿಂದ ಶುದ್ಧ ದರ್ಶನ ಜ್ಞಾನವು ಜೀವದ ಲಕ್ಷಣಗಳಾಗಿವೆ.

೩. ಅಮೂರ್ತಿತ್ವ ವರ್ಣನೆ

ವಣ್ಣ ರಸ ಪಂಚ ಗಂಧಾ । ದೋ ಫಾಸಾ ಅಟ್ಠ ಣೆಚ್ಚಯಾ ಜೀವೇ
ಣೋ ಸಂತಿ ಅಮುತ್ತಿ ತದೋ। ವವಹಾರಾ ಮುತ್ತಿ ಬಂಧಾದೋ ॥ ೭ ॥

ವರ್ಣಾ ರಸಾಃ ಪಂಚ ಗಂಧೌ । ದ್ವೌ ಸ್ಪರ್ಶಾ ಅಷ್ಟನಿಶ್ಚಯಾಜ್ಜೀವೇ ॥
ನೋ ಸಂತ್ಯಮೂರ್ತಿಸ್ತತೋ। ವ್ಯವಹಾರಾನ್ಮೂರ್ತಿರ್ಬಂಧತಃ ॥ ೭ ॥

ಅರ್ಥ: ನಿಶ್ಚಯನಯದಿಂದ ಜೀವದಲ್ಲಿ ಐದು ವರ್ಣ, ಐದು ರಸ, ಎರಡು ಗಂಧ ಮತ್ತು ಎಂಟು ಸ್ಪರ್ಶಗಳು ಇಲ್ಲ. ಆದ್ದರಿಂದ ಅದು ಅಮೂರ್ತಿಕವಾಗಿದೆ. ವ್ಯವಹಾರನಯದಿಂದ ಕರ್ಮಬಂಧದ ದೃಷ್ಟಿಯಿಂದ ಜೀವವು ಮೂರ್ತಿಕವಾಗಿದೆ.

೪. ಕರ್ತೃತ್ವ ವರ್ಣನೆ

ಪುಗ್ಗಲಕಮ್ಮಾದೀಣಂ । ಕತ್ತಾ ವವಹಾರದೋ ದು ಣಿಚ್ಚಯದೋ ॥
ಚೇದಣಕಮ್ಮಾಣಾದಾ । ಸುದ್ಧಣಯಾ ಸುದ್ಧಭಾವಾಣಂ ॥ ೮ ॥

ಪುದ್ಗಲಕರ್ಮಾದೀನಾಂ । ಕರ್ತಾ ವ್ಯವಹಾರತಸ್ತು ನಿಶ್ಚಯತಃ ॥
ಚೇತನಕರ್ಮಣಾಮಾತ್ಮಾ । ಶುದ್ಧನಯಾಚ್ಛುದ್ಧಭಾವಾನಾಂ ॥ ೮ ॥

ಅರ್ಥ: ಆತ್ಮನು ವ್ಯವಹಾರ ನಯದಿಂದ ಜ್ಞಾನಾವರಣಾದಿ ಕರ್ಮಗಳ ಕರ್ತನಾಗಿದ್ದಾನೆ. ಅಶುದ್ಧ ನಿಶ್ಚಯನಯದಿಂದ ರಾಗಾದಿ ಭಾವ ಕರ್ಮಗಳ ಕರ್ತನಾಗಿದ್ದಾನೆ ಹಾಗೂ ಶುದ್ಧ ನಿಶ್ಚಯನಯದಿಂದ ಶುದ್ಧಭಾವಗಳ ಕರ್ತನಾಗಿದ್ದಾನೆ.

೫. ಸ್ವದೇಹ ಪರಿಮಾಣತ್ವ ವರ್ಣನೆ

ಅಣುಗುರುದೇಹಪಮಾಣೋ । ಉವಸಂಹಾರಪ್ಪಸಪ್ಪದೋ ಚೇದಾ ।
ಅಸಮುಹದೋ ವವಹಾರಾ । ಣಿಚ್ಚಯಣಯದೋ ಅಸಂಖದೇಸೋವಾ ॥ ೯ ॥

ಅಣುಗುರುದೇಹಪ್ರಮಾಣಃ । ಉಪಸಂಹಾರಪ್ರಸರ್ಪಾಭ್ಯಾಂ ಚೇತಯಿತಾ ।
ಅಸಮುದ್ಘಾತಾದ್ವ್ಯವಹಾರಾತ್। ನಿಶ್ಚಯನಯತೋಽಸಂಖ್ಯದೇಶೋ ವಾ ॥ ೯ ॥

ಅರ್ಥ : ಸಮುದ್ಘಾತವು ಏಳು ಪ್ರಕಾರ. ವೇದನಾ, ಕಷಾಯ, ವಿಕ್ರಿಯಾ, ಮಾರಣಾಂತಿಕ, ತೈಜಸ, ಆಹಾರಕ ಮತ್ತು ಕೇವಲಿ. ಉದಾಹರಣೆಗೆ ಶರೀರದಲ್ಲಿ ತುಂಬಾ ವೇದನೆ ಆದಾಗ ಅದು ತನ್ನ ಮೂಲ ಶರೀರವನ್ನು ಬಿಡದೆ ಆತ್ಮನ ಪ್ರದೇಶಗಳು ಶರೀರದ ಹೊರಗೆ ವ್ಯಾಪಿಸುವುದು. ಇದರಿಂದ ನೋವು ಶಮನವಾಗುವುದು. ಕಜ್ಜಿಯು ಹಣ್ಣಾಗುವ ಮೊದಲು ತುಂಬಾ ನೋವು ಇರುತ್ತದೆ. ಔಷಧ ಹಚ್ಚಿದಾಗ ಒಮ್ಮೆ ಉರಿ ಜಾಸ್ತಿಯಾದರೂ ಅದು ಹಣ್ಣಾಗಿ ರಕ್ತ, ಕೀವು ಹೊರಗೆ ಹೋದ ಮೇಲೆ ನೋವು ಶಮನವಾಗುತ್ತದೆ. ಇದನ್ನು ವೇದನಾ ಸಮುದ್ಘಾತವೆನ್ನುತ್ತಾರೆ.

೬. ಭೋಕ್ತೃತ್ವ ವರ್ಣನೆ

ವವಹಾರಾ ಸುಹದುಕ್ಖಂ । ಪುಗ್ಗಲಕಮ್ಮಫಲಂ ಪಭುಂಜೇದಿ ।
ಆದಾ ಣಿಚ್ಚಯಣಯದೋ । ಚೇದಣಭಾವಂ ಖು ಆದಸ್ಸ ॥ ೧೦ ॥

ಅಣುಗುರುದೇಹಪ್ರಮಾಣಃ । ಪುದಲಕರ್ಮಫಲಂ ಪ್ರಭುಜ್ತಾ೯ೀ ।
ಆತ್ಮಾನಿಶ್ಚಯನಯತಃ । ಚೇತನಾಭಾವಂ ಖಲು ಆತ್ಮನಃ ॥ ೧೦ ॥

ಅರ್ಥ : ಆತ್ಮನು ವ್ಯವಹಾರನಯದಿಂದ ಸುಖ-ದುಃಖ ರೂಪದ ಪುದ್ಗಲ ಕರ್ಮಗಳ ಫಲವನ್ನು ಭೋಗಿಸುತ್ತಾನೆ ಮತ್ತು ನಿಶ್ಚಯನಯದಿಂದ ಅವನು ಶುದ್ಧ ಜ್ಞಾನ, ಶುದ್ಧ ದರ್ಶನಗಳನ್ನೇ ಭೋಗಿಸುತ್ತಾನೆ.

೭. ಸಂಸಾರಸ್ಥತ್ವ ವರ್ಣನೆ

ಪುಢವಿ ಜಲತೇಯವಾಊ । ವಣಪ್ಫದೀ ವಿವಿಹಥಾವರೇಇಂದೀ ।
ಬಿಗತಿಗಚದುಪಂಚಕ್ಖಾ । ತಸಜೀವಾ ಹೋಂತಿ ಸಂಖಾದೀ ॥ ೧೧ ॥

ಪೃಥವೀಜಲತೇಜೋವಾಯು। ವನಸ್ಪತಯೋ ವಿವಿಧಸ್ಥಾವರೈಕೇಂದ್ರಿಯಾಃ।
ದ್ವಿಕತ್ರಿಕಚತುಃಪಂಚಾಕ್ಷಾಃ । ತ್ರಸಜೀವಾ ಭವಂತಿ ಶಂಖಾದಯಃ ॥ ೧೧ ॥

ಅರ್ಥ: ಪೃಥ್ವಿಕಾಯಿಕ, ಜಲಕಾಯಿಕ, ಅಗ್ನಿಕಾಯಿಕ, ವಾಯುಕಾಯಿಕ, ವನಸ್ಪತಿಕಾಯಿಕ ಇವು ಸ್ಥಾವರ ಜೀವಗಳಾಗಿವೆ ಹಾಗೂ ಶಂಖಾದಿ ಎರಡು, ಮೂರು, ನಾಲ್ಕು ಮತ್ತು ಐದು ಇಂದ್ರಿಯ ಜೀವಗಳನ್ನು ತ್ರಸಜೀವಗಳೆನ್ನುತ್ತಾರೆ.

ವಿಶೇಷ ವರ್ಣನೆ

ಸಮಣಾ ಅಮಣಾ ಣೇಯಾ । ಪಂಚೇಂದಿಯಾ ಣಿಮ್ಮಣಾ ಪರೇ ಸವ್ವೇ।
ಬಾದರಸುಹಮೇಇಂದೀ । ಸವ್ವೇ೧ ಪಜ್ಜತ್ತ ಇದರಾ ಯ ॥ ೧೨ ॥

ಸಮನಸೋಮನಸೋ ಜ್ಞೇಯಾಃ । ಪಂಚೇಂದ್ರಿಯಾ ನಿರ್ಮನಸಃ ಪರೇ ಸರ್ವೇ।
ಬಾದರಸೂಕ್ಷ್ಮೈಕೇಂದ್ರಿಯಾಃ । ಸರ್ವೇ ಪರ್ಯಾಪ್ತಾ ಇತರೇ ಚ ॥ ೧೨ ॥

ಅರ್ಥ: ಪಂಚೇಂದ್ರಿಯ ಜೀವಗಳು ಸಂಜ್ಞೀ ಮತ್ತು ಅಸಂಜ್ಞೀ ಎಂದು ಎರಡು ವಿಧವಾಗಿವೆ. ಉಳಿದ ಏಕೇಂದ್ರಿಯ ಹಾಗೂ ವಿಕಲತ್ರಯ ಅಸಂಜ್ಞೀಯಾಗಿರುತ್ತದೆ. ಏಕೇಂದ್ರಿಯ ಜೀವಗಳಲ್ಲಿ ಕೆಲವು ಬಾದರ ಮತ್ತು ಕೆಲವು ಸೂಕ್ಷ್ಮವಾಗಿರುತ್ತವೆ. ಹಾಗೂ ಎಲ್ಲಾ ಜೀವಗಳು ಪರ್ಯಾಪ್ತಕ ಮತ್ತು ಅಪರ್ಯಾಪ್ತಕವೆಂದು ಎರಡು ಪ್ರಕಾರವಾಗಿರುತ್ತವೆ.

ಸಂಸಾರೀ ಜೀವದ ಹದಿನಾಲ್ಕು ಮಾರ್ಗಣ ಹಾಗೂ ಗುಣಸ್ಥಾನಗಳ ವರ್ಣನೆ

ಮಗ್ಗಣ ಗುಣಠಾಣೇಹಿ ಯ। ಚೊದ್ದಸಹಿ ಹವಂತಿ ತಹ ಅಸುದ್ಧಣಯಾ।
ವಿಣ್ಣೇಯಾ ಸಂಸಾರೀ । ಸವ್ವೇ ಸುದ್ಧಾ ಹು ಸುದ್ಧಣಯಾ ॥ ೧೩ ॥

ಮಾರ್ಗಣಾಗುಣಸ್ಥಾನೈಶ್ಚ । ಚತುರ್ದಶಭಿರ್ಭವಂತಿ ತಥಾಶುದ್ಧನಯಾತ್।
ವಿಜ್ಞೇಯಾಃ ಸಂಸಾರಿಣಃ। ಸರ್ವೇ ಶುದ್ಧಾಃ ಖಲು ಶುದ್ಧನಯಾತ್ ॥ ೧೩ ॥

ಅರ್ಥ: ಸಂಸಾರೀ ಜೀವಗಳು ವ್ಯವಹಾರ ನಯದಿಂದ ಹದಿನಾಲ್ಕು ಮಾರ್ಗಣ ಮತ್ತು ಹದಿನಾಲ್ಕು ಗುಣಸ್ಥಾನಗಳ ದೃಷ್ಟಿಯಿಂದ ಹದಿನಾಲ್ಕು-ಹದಿನಾಲ್ಕು ಪ್ರಕಾರವಾಗುತ್ತವೆ. ಆದರೆ ಶುದ್ಧ ನಿಶ್ಚಯ ನಯದ ದೃಷ್ಟಿಯಿಂದ ಎಲ್ಲಾ ಸಂಸಾರೀ ಜೀವಗಳು ಶುದ್ಧವಾಗಿವೆ, ಅವುಗಳಲ್ಲಿ ಯಾವುದೇ ಭೇದಗಳಿಲ್ಲ.

೮ ಸಿದ್ಧತ್ವ ಮತ್ತು ೯ ಊರ್ಧ್ವಗಮನತ್ವ ವರ್ಣನೆ

ಣಿಕ್ಕಮ್ಮಾ ಅಟ್ಠಗುಣಾ । ಕಿಂಚೂಣಾ ಚರಮದೇಹದೋ ಸಿದ್ಧಾ ।
ಲೋಯಗ್ಗಠಿದಾ ಣಿಚ್ಚಾ । ಉಪ್ಪಾದವಏಹಿಸಂಜುತ್ತಾ ॥ ೧೪ ॥

ನಿಷ್ಕರ್ಮಾಣೋಷ್ಟಗುಣಾಃ । ಕಿಂಚಿದೂನಾಶ್ಚರಮದೇಹತಸ್ಸಿದ್ಧಾಃ ।
ಲೋಕಾಗ್ರಸ್ಥಿತಾ ನಿತ್ಯಾ । ಉತ್ಪಾದವ್ಯಯಾಭ್ಯಾಂ ಸಂಯುಕ್ತಾಃ ॥ ೧೪ ॥

ಅರ್ಥ: ಸಿದ್ಧ ಪರಮಾತ್ಮರು ಸದಾ ನಿಷ್ಕರ್ಮಿಗಳು, ಅಷ್ಟಗುಣ ಸಹಿತರು, ಚರಮ ದೇಹದಿಂದ ಕಿಂಚಿತ್ ಕಡಿಮೆ ಪ್ರಮಾಣದವರು. ಲೋಕಾಗ್ರಸ್ಥಿತರು ಮತ್ತು ಉತ್ಪಾದ, ವ್ಯಯ, ದ್ರವ್ಯಯುಕ್ತರು ಆಗಿರುತ್ತಾರೆ.
ಸಿದ್ಧ ಪರ್ಯಾಯದಲ್ಲಿ ಉತ್ಪಾದ, ಜೀವದ್ರವ್ಯ ಧ್ರೌವ್ಯವಾಗಿದೆ. ಪುದ್ಗಲರೂಪದಲ್ಲಿ ಬಂಗಾರದ ಮಾಲೆ ನಮ್ಮಲ್ಲಿ ಇದೆ. ಅದರ ಬಳೆಬೇಕು. ಮಾಲೆಯನ್ನು ಕರಗಿಸಿ ಬಳೆ ಮಾಡಿಸುತ್ತೇವೆ. ಬಳೆ ಪರ್ಯಾಯದ ಉತ್ಪತ್ತಿ ಉತ್ಪಾದವಾಗಿದೆ. ಅಂದರೆ ಬಂಗಾರದ ಮಾಲೆ ವ್ಯಯವಾಗಿದೆ. ಯಾವ ಮಾಲೆಯಲ್ಲಿ ಬಂಗಾರವಿತ್ತೋ, ಅದು ಈಗ ಬಳೆಯಲ್ಲಿದೆ. ಆದ್ದರಿಂದ ಬಂಗಾರವು ಧ್ರೌವ್ಯವಾಗಿದೆ. ಬರುವುದು, ಹೋಗುವುದು, ಪರಸ್ಪರ ಸಂಬಂಧವಿದೆ. ಬರುವುದು ಎಂದರೆ ಉತ್ಪಾದ, ಹೋಗುವುದು ವ್ಯಯ, ಇದ್ದಂತೆ ಇರುವುದು ಧ್ರೌವ್ಯ. ಅಂದರೆ ಅದನ್ನು ಸತ್ ಎಂದು ಕರೆಯುತ್ತೇವೆ.

ಅಜೀವ ದ್ರವ್ಯ ವರ್ಣನೆ

ಅಜ್ಜೀವೋ ಪುಣ ಣೇಓ । ಪುಗ್ಗಲಧಮ್ಮೋ ಅಧಮ್ಮ ಆಯಾಸಂ ॥
ಕಾಲೋ ಪುಗ್ಗಲಮುತ್ತೋ । ರೂವಾದಿಗುಣೋ ಅಮುತ್ತಿಸೇಸಾದು ॥ ೧೫ ॥

ಅಜೀವಃ ಪುನರ್ಜ್ಞೇಯಃ । ಪುದ್ಗಲೋ ಧರ್ಮೋಽಧರ್ಮ ಆಕಾಶಂ ॥
ಕಾಲಃ ಪುದ್ಗಲೋ ಮೂರ್ತಃ। ರೂಪಾದಿಗುಣೋಽಮೂರ್ತಯಃ ಶೇಷಾಸ್ತು ॥ ೧೫ ॥

ಅರ್ಥ: ಅಜೀವ ದ್ರವ್ಯ – ಪುದ್ಗಲ, ಧರ್ಮ, ಅಧರ್ಮ, ಆಕಾಶ ಮತ್ತು ಕಾಲವೆಂದು ಐದು ಭೇದವನ್ನೊಳಗೊಂಡಿದೆ. ಇವುಗಳಲ್ಲಿ ರೂಪಾದಿ ಗುಣಗಳುಳ್ಳ ಪುದ್ಗಲವು ಮೂರ್ತಿಕವಾದರೆ; ಧರ್ಮ, ಅಧರ್ಮ, ಆಕಾಶ ಮತ್ತು ಕಾಲ ದ್ರವ್ಯಗಳು ಅಮೂರ್ತಿಕವಾಗಿವೆ.

ಪುದ್ಗಲ ದ್ರವ್ಯದ ಹತ್ತು ಪರ್ಯಾಯಗಳು

ಸದ್ದೋ ಬಂಧೋ ಸುಹುಮೋ । ಥೂಲೋಸಂಠಾಣಭೇದತಮ ಛಾಯಾ।
ಉಜ್ಜೋದಾದವಸಹಿಯಾ । ಪುಗ್ಗಲದವ್ವಸ್ಸ ಪಜ್ಜಾಯಾ ॥ ೧೬ ॥

ಶಬ್ದೋ ಬಂಧಃ ಸೂಕ್ಷ್ಮಃ । ಸ್ಥೂಲಃ ಸಂಸ್ಥಾನಭೇದ ತಮಶ್ಛಾಯಾ ॥
ಉದ್ಯೋತಾತಪಸಹಿತಾಃ ಪುದ್ಗಲದ್ರವ್ಯಸ್ಯಪರ್ಯಾಯಾಃ ॥ ೧೬ ॥

ಅರ್ಥ: 1. ಶಬ್ದ 2. ಬಂಧ 3. ಸೂಕ್ಷ್ಮ 4. ಸ್ಥೂಲ 5. ಆಕಾರ 6. ತುಂಡುಗಳು 7. ಕತ್ತಲೆ 8. ನೆರಳು 9. ಉದ್ಯೋತ 10. ಆತಪ ಇವು ಹತ್ತು ಪುದ್ಗಲಗಳ ಪರ್ಯಾಯಗಳಾಗಿವೆ.

ಧರ್ಮ ದ್ರವ್ಯದ ವರ್ಣನೆ

ಗಇಪರಿಣಯಾಣ ಧಮ್ಮೋ । ಪುಗ್ಗಲಜೀವಾಣ ಗಮಣಸಹಯಾರೀ ॥
ತೋಯಂ ಜಹ ಮಚ್ಛಾಣಂ । ಅಚ್ಛಂತಾ ಣೇವ ಸೋ ಣೇಈ ॥ ೧೭ ॥

ಗತಿಪರಿಣತಾನಾಂ ಧರ್ಮಃ । ಪುದ್ಗಲಜೀವಾನಾಂ ಗಮನಸಹಕಾರೀ ॥
ತೋಯಂ ಯಥಾ ಮತ್ಸ್ಯಾನಾಂ । ಅಗಚ್ಛತಾಂ ನೈವ ಸ ನಯತಿ ॥ ೧೭ ॥

ಅರ್ಥ: ಚಲಿಸುವ ಮೀನುಗಳಿಗೆ ಹೇಗೆ ನೀರು ಸಹಾಯವೀಯುವುದೋ ಅದರಂತೆಯೇ ಧರ್ಮದ್ರವ್ಯವು ಚಲಿಸುತ್ತಿರುವ ಜೀವ ಮತ್ತು ಪುದ್ಗಲಗಳಿಗೆ ಚಲನೆಯಲ್ಲಿ ಸಹಾಯಕವಾಗುವುದು. ಉದಾಹರಣೆಗೆ ನೀರಿಲ್ಲದೆ

ಮೀನು ಬದುಕುವುದಿಲ್ಲ. ಸಾವಿರ ಅಡಿ ಎತ್ತರದಿಂದ ಬೀಳುವ ನೀರಿನ ಸಹಾಯದಿಂದ ಮೀನು ಮೇಲಕ್ಕೆ ಏರುವುದು. ರಭಸದಿಂದ ಹರಿಯುವ ನೀರಿನ ಮಧ್ಯೆಯೂ ನಿಲ್ಲಬಲ್ಲುದು. ಅಂದರೆ ನಿಂತಿರುವ ಮೀನನ್ನು ಧರ್ಮದ್ರವ್ಯವು ಚಲಿಸುವಂತೆ ಮಾಡಲಾರದು. ಜೀವವು ಸಿದ್ಧಾಲಯದ ಕಡೆ ಊರ್ಧ್ವಗಮನ ಮಾಡುವಾಗ ನೀರಿನಲ್ಲಿಯ ಮೀನಿನಂತೆ, ಮೇಲಕ್ಕೆ ಏರುತ್ತದೆ. ಇದಕ್ಕೆ ಧರ್ಮದ್ರವ್ಯವು ಸಹಾಯಮಾಡುತ್ತದೆ.

ಅಧರ್ಮ ದ್ರವ್ಯದ ವರ್ಣನೆ

ಠಾಣಜುದಾಣ ಅಧಮ್ಮೋ । ಪುಗ್ಗಲಜೀವಾಣ ಠಾಣಸಹಯಾರೀ ॥
ಛಾಯಾ ಜಹ ಪಹಿಯಾಣಂ । ಗಚ್ಛಂತಾ ಣೇವ ಸೋ ಧರಈ ॥ ೧೮ ॥

ಸ್ಥಾನಯುತಾನಾಮಧರ್ಮಃ । ಪುದ್ಗಲಜೀವಾನಾಂ ಸ್ಥಾನಸಹಕಾರೀ ॥
ಛಾಯಾ ಯಥಾ ಪಥಿಕಾನಾಂ । ಗಚ್ಛತಾಂ ನೈವ ಸ ಧರತಿ ॥ ೧೮ ॥

ಅರ್ಥ: ಮರದ ನೆರಳು ಯಾವಾಗಲೂ ಮರದ ಹತ್ತಿರವೇ ಇರುತ್ತದೆ. ಮೇಲ್ಗಡೆ ಇರುವುದಿಲ್ಲ. ಪ್ರಯಾಣಿಕನು ಮರದ ನೆರಳನ್ನು ನೋಡಿ ಬೇಕಿದ್ದರೆ ನಿಲ್ಲಬಹುದು. ಬೇಡವೆಂದರೆ ತೆರಳಬಲ್ಲನು. ನೆರಳು ಅವನನ್ನು ತಡೆಯುವುದಿಲ್ಲ. ಯಾವ ರೀತಿ ನೆರಳು ಪ್ರಯಾಣಿಕನಿಗೆ ನಿಲ್ಲಲು ಸಹಾಯ ಮಾಡುವುದೋ ಹಾಗೆ ಅಧರ್ಮ ದ್ರವ್ಯವು ಜೀವ, ಪುದ್ಗಲಗಳಿಗೆ ನಿಲ್ಲಲು ಸಹಾಯ ಮಾಡಬಲ್ಲುದು.

ಆಕಾಶ ದ್ರವ್ಯದ ವರ್ಣನೆ

ಅವಗಾಸದಾಣಜೊಗ್ಗಂ । ಜೀವಾದೀಣಂ ವಿಯಾಣ ಆಯಾಸಂ ॥
ಜೆಣ್ಹಂ ಲೋಯಾಯಾಸಂ। ಅಲೋಯಾಯಾಸಮಿದಿ ದುವಿಹಂ ॥ ೧೯ ॥

ಅವಕಾಶದಾನಯೋಗ್ಯಂ । ಜೀವಾದೀನಾಂ ವಿಜಾನೀಹ್ಯಾಕಾಶಂ ॥
ಜೈನಂ ಲೋಕಾಕಾಶಂ । ಅಲೋಕಾಕಾಶಮಿತಿದ್ವಿವಿಧಂ ॥ ೧೯ ॥

ಅರ್ಥ: ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಕಾಲ ದ್ರವ್ಯಗಳಿಗೆ ಅವಕಾಶವೀಯಲು ಯೋಗ್ಯವಾದುದರಿಂದ ಜಿನೇಂದ್ರ ಭಗವಾನರು ಇದನ್ನು ಆಕಾಶದ್ರವ್ಯವೆಂದಿದ್ದಾರೆ. ಈ ಆಕಾಶದಲ್ಲಿ ಎರಡು ಭೇದಗಳಿವೆ.
1. ಲೋಕಾಕಾಶ 2. ಅಲೋಕಾಕಾಶ

ಲೋಕಾಕಾಶ ಮತ್ತು ಅಲೋಕಾಕಾಶಗಳ ಗಡಿ

ಧಮ್ಮಾಧಮ್ಮಾಕಾಲೋ । ಪುಗ್ಗಲಜೀವಾ ಯ ಸಂತಿ ಜಾವದಿಯೇ ॥
ಆಯಾಸೇ ಸೋ ಲೋಗೋ। ತತ್ತೋ ಪರದೋ ಅಲೋಗುತ್ತೋ ॥ ೨೦ ॥

ಧರ್ಮಾಧರ್ಮೌ ಕಾಲಃ । ಪುದ್ಗಲಜೀವಾಶ್ಚಸಂತಿ ಯಾವತಿ ॥
ಆಕಾಶೇ ಸ ಲೋಕಃ । ತತಃಪರತ ಅಲೋಕ ಉಕ್ತಃ ॥ ೨೦ ॥

ಅರ್ಥ: ಆಕಾಶದಲ್ಲಿ ಎಲ್ಲಿಯ ತನಕ ಜೀವ, ಪುದ್ಗಲ, ಧರ್ಮ, ಅಧರ್ಮ, ಮತ್ತು ಕಾಲ ದ್ರವ್ಯಗಳಿವೆಯೋ ಅದು ಲೋಕಾಕಾಶವೆಂದೂ ಅದರ ಹೊರಗೆ ಅಲೋಕಾಕಾಶವೆಂದೂ ಹೇಳಲಾಗಿದೆ.

ನಿಶ್ಚಯ ವ್ಯವಹಾರ ಕಾಲದ್ರವ್ಯ ವರ್ಣನೆ

ದವ್ವಪರಿವಟ್ಟರೂವೋ । ಜೋ ಸೋ ಕಾಲೋ ಹವೇಇ ವವಹಾರೋ॥
ಪರಿಣಾಮಾದೀಲಕ್ಖೋ । ವಟ್ಟಣಲಕ್ಖೋಯ ಪರಮಟ್ಠೋ ॥ ೨೧ ॥

ದ್ರವ್ಯಪರಿವರ್ತರೂಪಃ । ಯಃ ಸ ಕಾಲೋ ಭವೇದ್ವ್ಯವಹಾರಃ ॥
ಪರಿಣಾಮಾದಿಲಕ್ಷ್ಯಃ । ವರ್ತನಾಲಕ್ಷಣಶ್ಚಪರಮಾರ್ಥಃ ॥ ೨೧ ॥

ಅರ್ಥ: ಎಲ್ಲಾ ದ್ರವ್ಯಗಳಲ್ಲಿ ಯಾವ ಪರಿವರ್ತನೆಯು ಆಗುತ್ತಿರುತ್ತದೋ, ಈ ಪರಿವರ್ತನೆಗೆ ಯಾವುದು ಕಾರಣವೋ, ಅದು ಕಾಲ ದ್ರವ್ಯವೆನಿಸುತ್ತದೆ. ಕಾಲದ್ರವ್ಯದಲ್ಲಿ ಎರಡು ಭೇದಗಳಿವೆ– 1. ವ್ಯವಹಾರ ಕಾಲ 2. ನಿಶ್ಚಯ ಕಾಲ. ಯಾವುದರ ಲಕ್ಷಣವು ಪರಿಣಾಮ ಇತ್ಯಾದಿಯೋ ಅದು ವ್ಯವಹಾರ ಕಾಲವು. ಯಾವುದರ ಲಕ್ಷಣವು ವರ್ತನೆಯೋ ಅದು ನಿಶ್ಚಯಕಾಲವು.

ಮುಳ್ಳುಗಳಿರುವ ಗಡಿಯಾರದ ಮಧ್ಯದ್ದು ನಿಶ್ಚಯ ಕಾಲದ ಪ್ರತೀಕವಾದರೆ ಅದರ ಸಹಾಯದಿಂದ ತಿರುಗುವ ಗಂಟೆ, ನಿಮಿಷ, ಸೆಕೆಂಡುಗಳು ವ್ಯವಹಾರ ಕಾಲದ ಪ್ರತೀಕವಾಗಿವೆ. ಎಲ್ಲಾ ದ್ರವ್ಯಗಳಲ್ಲಿರುವ ಸೂಕ್ಷ್ಮ ಪರಿವರ್ತನೆಯನ್ನು ನಿಮಿತ್ತವೆನ್ನುತ್ತಾರೆ. ಬಟ್ಟೆ, ಮನೆ, ವಸ್ತ್ರ ಇತ್ಯಾದಿಗಳಲ್ಲಿ ಪರಿವರ್ತನೆಯು ನಿರಂತರವಾಗಿ ನಡೆಯುತ್ತದೆ. ಹಾಗೂ ಮನುಷ್ಯನಿಗೆ ಬಾಲ್ಯ, ಯೌವನ, ವೃದ್ಧಾಪ್ಯಗಳು ಬರುವುದು ಇದೇ ಕಾಲದ್ರವ್ಯದ ಕಾರಣದಿಂದ.

ಲೋಯಾಯಾಸಪದೇಸೇ । ಎಕ್ಕೆಕ್ಕೇ ಜೇ ಠಿಯಾ ಹು ಎಕ್ಕೆಕ್ಕಾ ॥
ರಯಣಾಣಂ ರಾಸೀ ಇವ । ತೇ ಕಾಲಾಣೂ ಅಸಂಖದವ್ವಾಣಿ ॥ ೨೨ ॥

ಲೋಕಾಕಾಶಪ್ರದೇಶೇ । ಏಕೈಕಸ್ಮಿನ್ ಯೇ ಸ್ಥಿತಾ ಹಿ ಏಕೈಕಾಃ ॥
ರತ್ನಾನಾಂ ರಾಶಿರಿವ । ತೇ ಕಾಲಾಣವೋಸಂಖ್ಯದ್ರವ್ಯಾಣಿ ॥ ೨೨ ॥

ಅರ್ಥ: ಲೋಕಾಕಾಶದ ಒಂದೊಂದು ಪ್ರದೇಶದಲ್ಲಿ ಒಂದೊಂದು ಕಾಲಾಣು ರತ್ನಗಳ ರಾಶಿಗೆ ಸಮಾನವಾಗಿ ಇದ್ದು, ಅವುಗಳು ಅಸಂಖ್ಯಾತವಾಗಿವೆ. ರತ್ನವು ಹೇಗೆ ಅಮೂಲ್ಯವೋ ಹಾಗೆ ಕಾಲವು ಅಮೂಲ್ಯವಾಗಿದೆ. ರತ್ನ ಎಂದಿಗೂ ಹಳತಾಗುವುದಿಲ್ಲ.

ಏವಂ ಛಬ್ಭೇಯಮಿದಂ । ಜೀವಾಜೀವಪ್ಪಭೇದದೋ ದವ್ವಂ ॥
ಉತ್ತಂ ಕಾಲವಿಜುತ್ತಂ ಣಾಯವ್ವಾ ಪಂಚ ಅತ್ಥಿಕಾಯಾ ದು ॥ ೨೩ ॥

ಏವಂ ಷಡ್ಭೇದಮಿದಂ । ಜೀವಾಜೀವಪ್ರಭೇದತೋ ದ್ರವ್ಯಂ ॥
ಉಕ್ತಂ ಕಾಲವಿಯುಕ್ತಂ । ಜ್ಞಾತವ್ಯಾಃ ಪಂಚ ಆಸ್ತಿ ಕಾಯಾಸ್ತು ॥ ೨೩ ॥

ಅರ್ಥ: ಸಂಕ್ಷೇಪವಾಗಿ ಜೀವ–ಅಜೀವ ಭೇದದಿಂದ ದ್ರವ್ಯವು ಆರು ಪ್ರಕಾರವೆಂದು ಈ ಪ್ರಕಾರ ಹೇಳಲಾಗಿದೆ. ಕಾಲದ್ರವ್ಯವನ್ನುಳಿದು ಉಳಿದ ಐದು ದ್ರವ್ಯಗಳು ಅಸ್ತಿಕಾಯಗಳೆಂದು ತಿಳಿದುಕೊಳ್ಳಬೇಕು.

ಒಂದು ಜೀವದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ ಈ ಮೂರಕ್ಕೂ ಅಸಂಖ್ಯಾತ ಪ್ರದೇಶಗಳಿವೆ. ಆಕಾಶವು ಅನಂತಪ್ರದೇಶಿಯಾಗಿದೆ. ಪುದ್ಗಲವು ಸಂಖ್ಯಾತ, ಅಸಂಖ್ಯಾತ ಹಾಗೂ ಅನಂತ ಪ್ರದೇಶಿಯಾಗಿದೆ ಹಾಗೂ ಕಾಲದ್ರವ್ಯವು ಏಕಪ್ರದೇಶಿಯಾಗಿದೆ.

ಸಂತಿ ಜದೋ ತೇಣೇದೇ । ಅತ್ಥಿತ್ತಿ ಭಣಂತಿ ಜಿಣವರಾ ಜಮ್ಹಾ ॥
ಕಾಯಾ ಇವ ಬಹುದೇಸಾ । ತಮ್ಹಾಕಾಯಾ ಯ ಅತ್ಥಿಕಾಯಾಯ ॥೨೪॥

ಸಂತಿ ಯತಸ್ತೇನೈತೇ । ಅಸ್ತೀತಿ ಭಣಂತಿ ಜಿನವರಾ ಯಸ್ಮಾತ್ ॥
ಕಾಯಾ ಇವ ಬಹುದೇಶಾಃ । ತಸ್ಮಾತ್ಕಾಯಾಶ್ಚಾಸ್ತಿಕಾಯಾಶ್ಚ ॥ ೨೪ ॥

ಅರ್ಥ: ಅಸ್ತಿಕಾಯದಲ್ಲಿ ಎರಡು ಶಬ್ದಗಳಿವೆ – ಒಂದು ಅಸ್ತಿ, ಇನ್ನೊಂದು ಕಾಯ. ಜೀವ, ಪುದ್ಗಲ, ಧರ್ಮ, ಅಧರ್ಮ ಮತ್ತು ಆಕಾಶ ಹಾಗೂ ಕಾಲ ಇವು ಯಾವಾಗಲೂ ಇರುತ್ತವೆ. ಆದ್ದರಿಂದ ಜಿನೇಂದ್ರ ದೇವರು ಇವುಗಳಿಗೆ 'ಅಸ್ತಿ' ಎನ್ನುತ್ತಾರೆ ಹಾಗೂ (ಕಾಲವನ್ನು ಬಿಟ್ಟು) ಶರೀರದಂತೆ ಬಹುಪ್ರದೇಶಿಯಾಗಿವೆ. ಆದ್ದರಿಂದ ಕಾಯವೆಂದು ಹೇಳುತ್ತಾರೆ. ಎರಡು ಕೂಡಿದಾಗ 'ಅಸ್ತಿಕಾಯ'ವೆಂದು ಕರೆಯಲ್ಪಡುತ್ತವೆ.

ಹೊಂತಿ ಅಸಂಖಾ ಜೀವೇ । ಧಮ್ಮಾಧಮ್ಮೇ ಅಣಂತ ಆಯಾಸೆ ॥
ಮುತ್ತೇ ತಿವಿಹಪದೇಸಾ । ಕಾಲಸ್ಸೇಗೋ ಣ ತೇಣ ಸೋ ಕಾಓ ॥

ಭವಂತ್ಯಸಂಖ್ಯಾಜೀವೇ । ಧರ್ಮಾಧರ್ಮಯೋರನಂತಾ ಆಕಾಶೇ ॥
ಮೂರ್ತೇ ತ್ರಿವಿಧಾಃ ಪ್ರದೇಶಾಃ। ಕಾಲಸ್ಯೈಕೋ ನ ತೇನ ಸ ಕಾಯಃ ॥ ೨೫ ॥

ಅರ್ಥ: ಒಂದು ಜೀವದ್ರವ್ಯ, ಧರ್ಮದ್ರವ್ಯ, ಅಧರ್ಮದ್ರವ್ಯ ಈ ಮೂರಕ್ಕೂ ಅಸಂಖ್ಯಾತ ಪ್ರದೇಶಗಳಿವೆ. ಆಕಾಶವು ಅನಂತಪ್ರದೇಶಿಯಾಗಿದೆ. ಪುದ್ಗಲವು ಸಂಖ್ಯಾತ, ಅಸಂಖ್ಯಾತ ಹಾಗೂ ಅನಂತ ಪ್ರದೇಶಿಯಾಗಿದೆ ಹಾಗೂ ಕಾಲದ್ರವ್ಯವು ಏಕಪ್ರದೇಶಿಯಾಗಿದೆ.

ಏಯಪದೇಸೋವಿ ಅಣೂ । ಣಾಣಾಖಂಧಪ್ಪದೇಸದೋ ಹೋದಿ ॥
ಬಹುದೇಸೋ ಉವಯಾರಾ । ತೇಣ ಯ ಕಾಓ ಭಣಂತಿ ಸವ್ವಣ್ಹೂ ॥ ೨೬ ॥

ಏಕಪ್ರದೇಶೋಪ್ಯಣುಃ । ನಾನಾಸ್ಕಂಧಪ್ರದೇಶತೋ ಭವತಿ ॥
ಬಹುದೇಶ ಉಪಚಾರಾತ್। ತೇನ ಚ ಕಾಯೋ ಭಣಂತಿ ಸರ್ವಜ್ಞಾಃ ॥೨೬॥

ಅರ್ಥ: ಪುದ್ಗಲ ಪರಮಾಣುವಿನಲ್ಲಿ ಸ್ನಿಗ್ಧ – ರೂಕ್ಷ್ ಗುಣಗಳಿರುತ್ತವೆ. ಈ ಗುಣದ ಪರಮಾಣು ದೊರೆತಾಗ ಪರಮಾಣುವು ಸ್ಕಂದ ಪರ್ಯಾಯ ಪಡೆಯುತ್ತದೆ.
ಪುದ್ಗಲ ಪರಮಾಣು ಏಕಪ್ರದೇಶಿಯಾಗಿದ್ದರೂ ಸರ್ವಜ್ಞ ದೇವರು ಅದನ್ನು ಉಪಚಾರದಿಂದ ಬಹುಪ್ರದೇಶಿ ಎಂದಿದ್ದಾರೆ. ಏಕೆಂದರೆ ಅದು ನಾನಾ ಸ್ಕಂಧರೂಪವಾಗುವ ಯೋಗ್ಯತೆವುಳ್ಳದ್ದಾಗಿದೆ.

ಜಾವಾದಿಯಂ ಆಯಾಸಂ । ಅವಿಭಾಗೀಪುಗ್ಗಲಾಣುವಟ್ಟದ್ಧಂ ॥
ತಂ ಖು ಪದೇಸಂ ಜಾಣೇ । ಸವ್ವಾಣುಟ್ಠಾಣದಾಣರಿಹಂ ॥ ೨೭ ॥

ಯಾವತ್ಕಮಾಕಾಶಂ । ಅವಿಭಾಗಿಪುದ್ಗಲಾಣ್ವವಷ್ಟಬ್ಧಂ ॥
ತಂ ಖಲು ಪ್ರದೇಶಂ ಜಾನೀಹಿ । ಸರ್ವಾಣುಸ್ಥಾನದಾನಾರ್ಹಂ ॥ ೨೭ ॥

ಅರ್ಥ: ಒಂದು ಪುದ್ಗಲ ಪರಮಾಣು ಎಷ್ಟು ಆಕಾಶವನ್ನು ಸುತ್ತುವರಿಯುವುದೋ ಅಷ್ಟು ಆಕಾಶವು ಮಾತ್ರ ನಿಶ್ಚಯವಾಗಿಯೂ ಪ್ರದೇಶವೆಂದು ತಿಳಿಯಬೇಕು. ಆ ಪ್ರದೇಶವು ಸರ್ವ ಪರಮಾಣುಗಳಿಗೆ ಸ್ಥಾನ ನೀಡುವ ಸಾಮರ್ಥ್ಯವುಳ್ಳದ್ದೆಂದು ತಿಳಿದುಕೊಳ್ಳಬೇಕು. ಪುದ್ಗಲದಲ್ಲಿ ಅತಿ ಚಿಕ್ಕ ಭಾಗಕ್ಕೆ ಅಣುವೆನ್ನುತ್ತಾರೆ. ಉದಾಹರಣೆಗೆ ಒಂದು ಸಾವಿರ ಪ್ರಕಾರದ ವನಸ್ಪತಿಗಳನ್ನು ತಂದು ಆ ಸಾವಿರ ಎಲೆಗಳ ಕಷಾಯ ಮಾಡಿ ಅದರಿಂದ ಒಂದು ಸೂಜಿಮೊನೆಯಷ್ಟು ಕಷಾಯವನ್ನು ಹೊರಗೆ ತೆಗೆದು ಪರೀಕ್ಷಿಸಿದರೆ ಅದರಲ್ಲಿ ಒಂದು ಸಾವಿರ ವನಸ್ಪತಿಗಳ ಸತ್ವ (ಅಸ್ತಿತ್ವ) ಗೋಚರಿಸುತ್ತದೆ.

ಸಪ್ತತತ್ತ್ವನವಪದಾರ್ಥ ವರ್ಣನಂ

ಅಸವಬಂಧಣಸಂವರ । ಣಿಜ್ಜರಮೋಕ್ಖಾಸಪುಣ್ಣಪಾವಾ ಜೇ ॥
ಜೀವಾಜೀವವಿಸೇಸಾ । ತೇವಿ ಸಮಾಸೇಣ ಪಭಣಾಮೋ ॥ ೨೮ ॥

ಆಸ್ರವಬಂಧನಸಂವರ । ನಿರ್ಜರಾಮೋಕ್ಷಾಃ ಸಪುಣ್ಯಪಾಪಾ ಯೇ ॥
ಜೀವಾಜೀವವಿಶೇಷಾಃ । ತಾನಪಿ ಸಮಾಸೇನ ಪ್ರಭಣಾಮಃ ॥ ೨೮ ॥

ಅರ್ಥ: ಯಾವ ಆಸ್ರವ, ಬಂಧ, ಸಂವರೆ, ನಿರ್ಜರೆ ಮತ್ತು ಮೋಕ್ಷ ಹಾಗೂ ಪುಣ್ಯ, ಪಾಪ, ಈ ಏಳು ಜೀವ–ಅಜೀವ ದ್ರವ್ಯಗಳದ್ದೇ ವಿಶೇಷ ಭೇದವಾಗಿದೆ. ಇವೆಲ್ಲಾ ಒಟ್ಟು ಕೂಡಿ ಒಂಭತ್ತಾಗುತ್ತವೆ. ಅವನ್ನೂ ಮುಂದೆ ಸಂಕ್ಷೇಪವಾಗಿ ತಿಳಿಸಲಾಗುವುದು.

ಆಸವದಿ ಜೇಣ ಕಮ್ಮಂ । ಪರಿಣಾಮೇಣಪ್ಪಣೋ ಸ ವಿಣ್ಣೇಓ ॥
ಭಾವಾಸವೋ ಜಿಣುತ್ತೋ । ಕಮ್ಮಾಸವಣಂ ಪರೋ ಹೋದಿ ॥ ೨೯ ॥

ಆಸ್ರವತಿ ಯೇನ ಕರ್ಮ । ಪರಿಣಾಮೇನಾತ್ಮನಃ ಸ ವಿಜ್ಞೇಯಃ ॥
ಭಾವಾಸ್ರವೋ ಜಿನೋಕ್ತಃ । ಕರ್ಮಾಸ್ರವಣಂ ಪರೋ ಭವತಿ ॥ ೨೯ ॥

ಅರ್ಥ: ಆತ್ಮನ ಯಾವ ಪರಿಣಾಮದಿಂದ ಪುದ್ಗಲ ಕರ್ಮವು ಬರುವುದೋ ಅದನ್ನು ಜಿನೇಂದ್ರ ಭಗವಾನರಿಂದ ಹೇಳಲ್ಪಟ್ಟ ಭಾವಾಸ್ರವವೆಂದು ತಿಳಿಯಬೇಕು ಹಾಗೂ ಕರ್ಮಗಳು ಬರುವುದು ದ್ರವ್ಯಾಸ್ರವವಾಗಿದೆ.

ಭಾವಾಸ್ರವವೆಂದರೆ ಮಿಥ್ಯಾತ್ಮ, ಅವಿರತಿ, ಪ್ರಮಾದ, ಕಷಾಯ, ಯೋಗ ಇವುಗಳಿಂದ ಹರಿದು ಬರುವ ಕರ್ಮಗಳ ಆಸ್ರವಕ್ಕೆ ಭಾವಾಸ್ರವ ಎಂದು ಹೆಸರು. ಜ್ಞಾನಾವರಣಾದಿ ಪುದ್ಗಲ ಕರ್ಮಗಳ ಬರುವಿಕೆಯು ದ್ರವ್ಯಾಸ್ರವವಾಗಿದೆ. ಉದಾಹರಣೆಗೆ ಒಂದು ರಂಧ್ರದ ಮೂಲಕ ದೋಣಿಯಲ್ಲಿ ನೀರು ಬರುವ ಹಾಗೆ.

ಮಿಚ್ಛತ್ತಾವಿರದಿ ಪಮಾ– । ದ ಜೋಗ ಕೋಹಾದಓಥ ವಿಣ್ಣೇಯಾ ॥
ಪಣ ಪಣ ಪಣದಸ ತಿಯ ಚದು। ಕಮಸೋ ಭೇದಾ ದು ಪುವ್ವಸ್ಸ ॥ ೩೦ ॥

ಮಿಥ್ಯಾತ್ವಾವಿರತಿಪ್ರಮಾ–। ದ ಯೋಗಕ್ರೋಧಾದಯೋಥ ವಿಜ್ಞೇಯಾಃ ॥
ಪಂಚ ಪಂಚ ಪಂಚದಶ ತ್ರಯಶ್ಚತ್ವಾರಃ। ಕ್ರಮಶೋ ಭೇದಾಸ್ತು ಪೂರ್ವಸ್ಯ ॥ ೩೦ ॥

ಅರ್ಥ : ಮಿಥ್ಯಾತ್ವ, ಅವಿರತಿ, ಪ್ರಮಾದ, ಯೋಗ ಹಾಗೂ ಕಷಾಯ ಈ ಭಾವಾಸ್ರವದ ಭೇದಗಳು ಕ್ರಮದಿಂದ ಐದು, ಐದು, ಹದಿನೈದು, ಮೂರು ಮತ್ತು ನಾಲ್ಕು ಪ್ರಕಾರವೆಂದು ತಿಳಿದುಕೊಳ್ಳಬೇಕು.

ಣಾಣಾವರಣಾದೀಣಂ । ಜೋಗ್ಗಂ ಜಂ ಪುಗ್ಗಲಂ ಸಮಾಸವದಿ ॥
ದವ್ವಾಸವೋ ಸ ಣೇಓ । ಅಣೇಯಭೇಓ ಜಿಣಕ್ಖಾದೋ ॥ ೩೧ ॥

ಜ್ಞಾನಾವರಣಾದೀನಾಂ । ಯೋಗ್ಯಂ ಯತ್ಪುದ್ಗಲಂ ಸಮಾಸ್ರವತಿ ॥
ದ್ರವ್ಯಾಸ್ರವಸ್ಸಜ್ಞೇಯಃ । ಅನೇಕಭೇದೋ ಜಿನಾಖ್ಯಾತಃ ॥ ೩೧ ॥

ಅರ್ಥ: ಜ್ಞಾನಾವರಣಾದಿ ಕರ್ಮ ಪುದ್ಗಲಗಳು, ಜಿನೇಂದ್ರ ಭಗವಾನರ ಮುಖಾಂತರ ಹೇಳಲ್ಪಟ್ಟ ದ್ರವ್ಯಾಸ್ರವದ ಅನೇಕ ಪ್ರಕಾರವಾಗಿದೆ.

ಅವಧಿ ಮುಗಿದ ಮೇಲೆ ಮತ್ತು ತಪದಿಂದ ಯಾವುದರ ಫಲವನ್ನು ಭೋಗಿಸಲಾಗಿದೆಯೋ ಅಂತಹ ಪುದ್ಗಲ ಕರ್ಮವು ಯಾವ ಭಾವಗಳಿಂದ ನಾಶವಾಗುವುದೋ, ಅದು ಭಾವ ನಿರ್ಜರೆಯಾಗಿದೆ ಮತ್ತು ಕರ್ಮಗಳು ನಾಶವಾಗುವುದು ದ್ರವ್ಯನಿರ್ಜರೆ. ಈ ಪ್ರಕಾರವಾಗಿ ನಿರ್ಜರೆಯು ಎರಡು ಪ್ರಕಾರವೆಂದು ತಿಳಿದುಕೊಳ್ಳಬೇಕು.

ಬಂಧತತ್ತ್ವ ವರ್ಣನೆ

ಬಜ್ಝದಿ ಕಮ್ಮಂ ಜೇಣ ದು । ಚೇದಣಭಾವೇಣ ಭಾವಬಂಧೋ ಸೋ ॥
ಕಮ್ಮಾದಪದೇಸಾಣಂ । ಅಣ್ಣೋಣ್ಣಪವೇಸಣಂ ಇದರೋ ॥ ೩೨ ॥

ಬಧ್ಯತೇ ಕರ್ಮ ಯೇನ ತು । ಚೇತನಾಭಾವೇನ ಭಾವಬಂಧಃ ಸಃ ॥
ಕರ್ಮಾತ್ಮಪ್ರದೇಶಾನಾಂ । ಅನ್ಯೋನ್ಯಪ್ರವೇಶನಂ ಇತರಃ ॥ ೩೨ ॥

ಅರ್ಥ: ಮಿಥ್ಯಾತ್ವರೂಪವಾದ ಯಾವ ಚೇತನ ಪರಿಣಾಮದಿಂದ ಕರ್ಮಬಂಧವಾಗುವುದೋ ಅದು ಭಾವಬಂಧವಾಗಿದೆ ಮತ್ತು ಕರ್ಮ ಮತ್ತು ಆತ್ಮ ಪ್ರದೇಶಗಳು ಒಂದಾಗುವುದು ದ್ರವ್ಯಬಂಧವಾಗಿದೆ.

ಆತ್ಮವು ಅಮೂರ್ತಿಕವಾಗಿದೆ. ಕರ್ಮವು ಮೂರ್ತಿಕ. ಸಂಸಾರದಲ್ಲಿ ಇರುವ ಜೀವಿಗಳಲ್ಲಿ ಅನಂತಕಾಲಗಳಿಂದಲೂ ಕರ್ಮಗಳು ಅಂಟಿಕೊಂಡಿವೆ. ಹೀಗಾಗಿ ಅದು ಮೂರ್ತಿಕವಾಗಿದೆ. ಈ ಕಾರಣದಿಂದ ಕರ್ಮಗಳು ಆತ್ಮನೊಡನೆ ಬಂಧವಾಗುತ್ತವೆ.

ಪಯಡಿಟ್ಠಿದಿ ಅಣುಭಾಗ। ಪ್ಪದೇಸಭೇದಾ ದು ಚದುವಿಧೋ ಬಂಧೋ ॥
ಜೋಗಾ ಪಯಡಿಪದೇಸಾ। ಟ್ಠಿದಿ ಅಣುಭಾಗಾ ಕಸಾಯದೋ ಹೋಂತಿ ॥ ೩೩ ॥

ಪ್ರಕೃತಿಸ್ಥಿತ್ಯನುಭಾಗ– । ಪ್ರದೇಶಭೇದಾತ್ತು ಚತುರ್ವಿಧೋ ಬಂಧೋ ॥
ಯೋಗಾತ್ಪ್ರಕೃತಿಪ್ರದೇಶೌ । ಸ್ಥಿತ್ಯನುಭಾಗೌ ಕಷಾಯತೊ ಭವತಃ ॥ ೩೩ ॥

ಅರ್ಥ: ಪ್ರಕೃತಿ ಬಂಧ, ಸ್ಥಿತಿ ಬಂಧ, ಅನುಭಾಗ ಬಂಧ ಮತ್ತು ಪ್ರದೇಶಬಂಧದ ಭೇದದಿಂದ ಬಂಧವು ನಾಲ್ಕು ಪ್ರಕಾರವಾಗಿದೆ. ಇವುಗಳಲ್ಲಿ ಪ್ರಕೃತಿ ಬಂಧ ಮತ್ತು ಪ್ರದೇಶ ಬಂಧಗಳು ಯೋಗದಿಂದಲೂ, ಸ್ಥಿತಿಬಂಧ ಮತ್ತು ಅನುಭಾಗ ಬಂಧಗಳು ಕಷಾಯದಿಂದಲೂ ಆಗುತ್ತವೆ.
ಉದಾಹರಣೆಗೆ ರೋಗವನ್ನು ದೂರಮಾಡುವುದು ಔಷಧಿಯ ಪ್ರಕೃತಿಯಾಗಿದೆ. ಔಷಧಿಯಲ್ಲಿ ರೋಗವನ್ನು ದೂರಮಾಡುವ ಶಕ್ತಿಯು ಎಷ್ಟರ ತನಕವಿರುತ್ತದೋ ಅದನ್ನು ಸ್ಥಿತಿ ಎನ್ನುತ್ತಾರೆ. ಔಷಧಿಯ ಶಕ್ತಿಗೆ ಅನುಭಾಗವೆಂದು ಕರೆದರೆ, ಔಷಧಿಯ ಮಾತ್ರೆಯ ಪರಮಾಣುಗಳನ್ನು ಪ್ರದೇಶವೆನ್ನಬಹುದು.

ಸಂವರತತ್ತ್ವ ವರ್ಣನೆ

ಚೇದಣಪರಿಣಾಮೋ ಜೋ । ಕಮ್ಮಸ್ಸಾಸವಣಿರೋಹಣೇ ಹೇಊ ॥
ಸೋ ಭಾವಸಂವರೋ ಖಲು। ದವ್ವಾಸವರೋಹಣೇ ಅಣ್ಣೋ ॥ ೩೪ ॥

ಚೇತನಾಪರಿಣಾಮೋ ಯಃ । ಕರ್ಮಣ ಆಸ್ರವನಿರೋಧನೇ ಹೇತು ॥
ಸ ಭಾವಸಂವರಃ ಖಲು । ದ್ರವ್ಯಾಸ್ರವರೋಧನೇನ್ಯಃ ॥ ೩೪ ॥

ಅರ್ಥ: ಆತ್ಮನ ಯಾವ ಪರಿಣಾಮವು ಪುದ್ಗಲ ಕರ್ಮವನ್ನು ತಡೆಯಲು ಕಾರಣವೋ ಅದು ಭಾವ ಸಂವರವಾಗಿದ್ದು, ಕರ್ಮರೂಪ ಪುದ್ಗಲ ದ್ರವ್ಯದ ಆಸ್ರವವು ನಿಲ್ಲುವುದು ನಿಶ್ಚಯವಾಗಿಯೂ ದ್ರವ್ಯಸಂವರವಾಗಿದೆ.

ವದಸಮಿದೀಗುತ್ತೀಓ । ಧಮ್ಮಾಣುಪೇಹಾ ಪರೀಸಹಜಓ ಯ ॥
ಚಾರಿತ್ತಂ ಬಹುಭೇಯಂ । ಣಾದವ್ವಾ ಭಾವಸಂವರವಿಸೇಸಾ ॥ ೩೫ ॥

ವ್ರತಸಮಿತಿಗುಪ್ತಯೋ । ಧರ್ಮಾನುಪ್ರೇಕ್ಷಾಃ ಪರೀಷಹಜಯಶ್ಚ ॥
ಚಾರಿತ್ರಂ ಬಹುಭೇದಂ । ಜ್ಞಾತವ್ಯಾ ಭಾವಸಂವರವಿಶೇಷಾಃ ॥ ೩೫ ॥

ಅರ್ಥ: 5 ವ್ರತಗಳು, 3 ಸಮಿತಿಗಳು, 3 ಗುಪ್ತಗಳು, ದಶಧರ್ಮಗಳು, ದ್ವಾದಶ ಅನುಪ್ರೇಕ್ಷೆಗಳು, 22 ಪರೀಷಗಳ ವಿಜಯ, 5 ಚಾರಿತ್ರಗಳು ಇತ್ಯಾದಿ ಭೇದಗಳನ್ನು ಭಾವಸಂವರದ ಕಾರಣಗಳೆಂದು ತಿಳಿಯಬೇಕು.

ನಿರ್ಜರಾತತ್ತ್ವ ವರ್ಣನೆ

ಜಹಕಾಲೇಣ ತವೇಣ ಯ । ಭುತ್ತರಸಂ । ಕಮ್ಮಪುಗ್ಗಲಂ ಜೇಣ ॥
ಭಾವೇಣ ಸಡದಿ ಣೇಯಾ। ತಸ್ಸಡಣಂ ಚೇದಿ ಣಿಜ್ಜರಾ ದುವಿಹಾ ॥ ೩೬॥

ಯಥಾ ಕಾಲೇನ ತಪಸಾಚ । ಭುಕ್ತರಸಂ ಕರ್ಮಪುದ್ಗಲಂ ಯೇನ ॥
ಭಾವೇನ ಸಡತಿ ಜ್ಞೇಯಾ । ತತ್ಸಡನಂ ಚೇತಿ ನಿರ್ಜರಾ ದ್ವಿವಿಧಾ ॥ ೩೬ ॥

ಅರ್ಥ: ಅವಧಿ ಮುಗಿದ ಮೇಲೆ ಮತ್ತು ತಪದಿಂದ ಯಾವುದರ ಫಲವನ್ನು ಭೋಗಿಸಲಾಗಿದೆಯೋ ಅಂತಹ ಪುದ್ಗಲ ಕರ್ಮವು ಯಾವ ಭಾವಗಳಿಂದ ನಾಶವಾಗುವುದೋ, ಅದು ಭಾವ ನಿರ್ಜರೆ ಮತ್ತು ಕರ್ಮಗಳು ನಾಶವಾಗುವುದು ದ್ರವ್ಯನಿರ್ಜರೆಯಾಗಿವೆ. ಈ ಪ್ರಕಾರವಾಗಿ ನಿರ್ಜರೆಯ ಎರಡು ಪ್ರಕಾರವೆಂದು ತಿಳಿದುಕೊಳ್ಳಬೇಕು

ನಿರ್ಜರೆಯು ಮೋಕ್ಷಕ್ಕೆ ಸಹಕಾರಿ. ಈ ನಿರ್ಜರೆಗೆ ತಪಸ್ಸು ವಿಶೇಷ ಸಹಕಾರಿ. ತಪಸ್ಸಿನ ಹೊರತಾಗಿ ಆತ್ಮವೆಂದೂ ಶುದ್ಧವಾಗುವುದಿಲ್ಲ. ಬಂಗಾರವನ್ನು ಕಾಯಿಸದೇ ಶುದ್ಧವಾಗಲಾರದು. ಬೆಂಕಿಯಲ್ಲಿ ಸುಡದೆ ಚಪಾತಿಯಾಗಲಿ, ಅನ್ನವಾಗಲಿ ತಯಾರಾಗುವುದಿಲ್ಲ. ಆತ್ಮನಿಗೆ ಅಂಟಿರುವ ಕರ್ಮಮಲಗಳು ತೊಳೆದು ಹೋಗಲು ತಪಸ್ಸು ಅನಿವಾರ್ಯವಾಗಿದೆ.

ಮೋಕ್ಷತತ್ತ್ವ ವರ್ಣನೆ

ಸವ್ವಸ್ಸ ಕಮ್ಮಣೋ ಜೋ। ಖಯಹೇದೂ ಅಪ್ಪಣೋ ಹು ಪರಿಣಾಮೋ॥
ಣೇಯೋ ಸ ಭಾವಮೊಕ್ಖೋ। ದವ್ವವಿಮೊಕ್ಖೋ ಯ ಕಮ್ಮ ಪುಹಭಾವೋ ॥೩೭॥

ಸರ್ವಸ್ಯ ಕರ್ಮಣೋ ಯಃ । ಕ್ಷಯಹೇತುರಾತ್ಮನೋ ಹಿ ಪರಿಣಾಮಃ ॥
ಜ್ಞೇಯಃ ಸ ಭಾವಮೋಕ್ಷೋ । ದ್ರವ್ಯವಿಮೋಕ್ಷಶ್ಚ ಕರ್ಮಪೃಥಗ್ಭಾವಃ ॥೩೭॥

ಅರ್ಥ: ಎಲ್ಲಾ ಕರ್ಮಗಳ ನಾಶಕ್ಕೆ ಕಾರಣವಾಗುವ ಆತ್ಮನ ಪರಿಣಾಮಗಳು ನಿಶ್ಚಯವಾಗಿಯೂ ಭಾವ ಮೋಕ್ಷವಾಗಿದೆ. ಮತ್ತು ಕರ್ಮಗಳು ಆತ್ಮನಿಂದ ಬೇರ್ಪಡುವುದು ದ್ರವ್ಯಮೋಕ್ಷವೆಂದು ತಿಳಿದುಕೊಳ್ಳಬೇಕು.

ಸುಹ ಅಸುಹಭಾವಜುತ್ತಾ । ಪುಣ್ಣಂ ಪಾವಂ ಹವಂತಿ ಖಲು ಜೀವಾ ॥
ಸಾದಂ ಸುಹಾಉ ಣಾಮಂ। ಗೋದಂ ಪುಣ್ಣಂ ಪರಾಣಿ ಪಾವಂ ಚ ॥ ೩೮ ॥

ಶುಭಾಶುಭಭಾವಯುಕ್ತಾಃ । ಪುಣ್ಯಂ ಪಾಪಂ ಭವಂತಿ ಖಲು ಜೀವಾಃ ॥
ಸಾತಂ ಶುಭಾಯುರ್ನಾಮ। ಗೋತ್ರಂ ಪುಣ್ಯಂ ಪರಾಣಿ ಪಾಪಂ ಚ ॥ ೩೮ ॥

ಅರ್ಥ: ಶುಭ ಭಾವಯುಕ್ತ ಜೀವಗಳು ಪುಣ್ಯರೂಪ ಹಾಗೂ ಅಶುಭ ಭಾವಯುಕ್ತ ಜೀವಗಳು ಪಾಪರೂಪವಾಗಿರುತ್ತವೆ. ಸಾತಾ ವೇದನೀಯ, ಶುಭ ಆಯು, ಶುಭ ನಾಮ ಮತ್ತು ಉಚ್ಚಗೋತ್ರ, ಇವು ಪುಣ್ಯರೂಪ ಕರ್ಮವಾದರೆ ಅಸಾತಾ ವೇದನೀಯ ಅಶುಭಾಯು ಅಶುಭ ನಾಮ ಮತ್ತು ಅಶುಭಗೋತ್ರ; ಪಾಪರೂಪ ಕರ್ಮವಾಗಿದೆ.

ಉದಾಹರಣೆ ಹಿಂಸೆ, ಸುಳ್ಳು ಕಳ್ಳತನ ಇತ್ಯಾದಿ ಪಂಚಪಾಪಗಳನ್ನು ಮಾಡುವುದು, ದೇವ, ಗುರು, ಶಾಸ್ತ್ರಗಳ ಆರಾಧನೆ ಮಾಡದಿರುವುದು, ಗುರುಗಳನ್ನು ನಿಂದಿಸುವುದು ಇವೆಲ್ಲ ಅಶುಭಭಾವವಾಗಿವೆ. ಕಾಮ, ಕ್ರೋಧ, ಮಾಯಾಲೋಭಾದಿ ಪ್ರವೃತ್ತಿಗಳು ನಿರಂತರವಾಗಿ ಅಶುಭಭಾವಕ್ಕೆ ಕಾರಣವಾಗುತ್ತವೆ.

ವ್ಯವಹಾರ ನಿಶ್ಚಯ ಮೋಕ್ಷಮಾರ್ಗ ವರ್ಣನೆ

ಸಮ್ಮದ್ದಂಸಣಣಾಣಂ । ಚರಣಂ ಮೊಕ್ಖಸ್ಸಕಾರಣಂ ಜಾಣೇ ॥
ವವಹಾರಾ ಣಿಚ್ಛಯದೋ । ತತ್ತಿಯಮಇಓ ಣಿಓ ಅಪ್ಪಾ ॥ ೩೯ ॥

ಸಮ್ಯಗ್ದರ್ಶನಜ್ಞಾನಂ । ಚರಣಂ ಮೋಕ್ಷಸ್ಯಕಾರಣಂ ಜಾನೀಹಿ ॥
ವ್ಯವಹಾರಾತ್ ನಿಶ್ಚಯತಃ । ತತ್ತ್ರಿತಯಮಯೋ ನಿಜ ಆತ್ಮಾ ॥ ೩೯ ॥

ಅರ್ಥ: ವ್ಯವಹಾರನಯದಿಂದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರವನ್ನು ಮೋಕ್ಷಕ್ಕೆ ಕಾರಣವೆಂದು ತಿಳಿ ಹಾಗೂ ನಿಶ್ಚಯನಯದಿಂದ ಸಮ್ಯಗ್ದರ್ಶನ, ಸಮ್ಯಗ್‌ಜ್ಞಾನ ಮತ್ತು ಸಮ್ಯಕ್ಚಾರಿತ್ರ ಸಹಿತ ತನ್ನ ಆತ್ಮನೇ ಮೋಕ್ಷಕ್ಕೆ ಕಾರಣವೆಂದು ತಿಳಿಯಬೇಕು.

ರಯಣತ್ತಯಂ ಣ ವಟ್ಟಇ । ಅಪ್ಪಾಣಂ ಮುಇತ್ತು ಅಣ್ಣದವಿಯಮ್ಹಿ ॥
ತಮ್ಹಾತತ್ತಿಯಮಇಓ । ಹೋದಿಹು ಮೊಕ್ಖಸ್ಸ ಕಾರಣಂ ಅದಾ ॥ ೪೦ ॥

ರತ್ನತ್ರಯಂ ನವರ್ತತೇ । ಆತ್ಮಾನಂ ಮುಕ್ತ್ವಾನ್ಯದ್ರವ್ಯೇ ॥
ತಸ್ಮಾತ್ತತ್ತ್ರಿಯಮಯೋ। ಭವತಿ ಖಲು ಮೋಕ್ಷಸ್ಯ ಕಾರಣಮಾತ್ಮಾ ॥ ೪೦ ॥

ಅರ್ಥ: ರತ್ನತ್ರಯವು ಆತ್ಮನನ್ನು ಬಿಟ್ಟು ಇತರ ದ್ರವ್ಯಗಳಲ್ಲಿರುವುದಿಲ್ಲ. ಆದ್ದರಿಂದ ರತ್ನತ್ರಯ ಸಹಿತ ಆತ್ಮನೇ ಮೋಕ್ಷಕ್ಕೆ ಕಾರಣವಾಗಿದ್ದಾನೆ.

ಸಮ್ಯಗ್ದರ್ಶನ ವರ್ಣನೆ

ಜೀವಾದೀಸದ್ದಹಣಂ । ಸಮ್ಮತ್ತಂ ರೂವಮಪ್ಪಣೋ ತಂ ತು ॥
ದುರಭಿಣಿವೇಸವಿಮುಕ್ಕಂ । ಣಾಣಂ ಸಮ್ಮಂ ಖು ಹೋದಿ ಸದಿ ಜಮ್ಹಿ ॥ ೪೧ ॥

ಜೀವಾದಿಶ್ರದ್ಧಾನಂ । ಸಮ್ಯಕ್ತ್ವಂ ರೂಪಮಾತ್ಮನಸ್ತತ್ತು ॥
ದುರಭಿನಿವೇಶವಿಮುಕ್ತಂ। ಜ್ಞಾನಂ ಸಮ್ಯಕ್ಖಲು ಭವತಿ ಸತಿ ಯಸ್ಮಿನ್॥ ೪೧ ॥

ಅರ್ಥ: ಜೀವಾದಿಗಳಲ್ಲಿ ನಿಜವಾದ ಶ್ರದ್ಧೆ ಮಾಡುವುದು ಸಮ್ಯಗ್ದರ್ಶನವಾಗಿದೆ. ಅದು ಆತ್ಮನ ಸ್ವರೂಪ. ಈ ಸಮ್ಯಗ್ದರ್ಶನದ ನಂತರ ಮುಂದೆ ಸಮ್ಯಗ್ಜ್ಞಾನ ಲಭಿಸುತ್ತದೆ.

ಸಮ್ಯಗ್ ಜ್ಞಾನದ ವರ್ಣನೆ

ಸಂಸಯವಿಮೋಹವಿಬ್ಭಮ । ವಿವಜ್ಜಿಯಂ ಅಪ್ಪಪರಸರೂವಸ್ಸ ॥
ಗಹಣಂ ಸಮ್ಮಂಣಾಣಂ । ಸಾಯಾರಮಣೇಯಭೇಯಂ ತು ॥ ೪೨ ॥

ಸಂಶಯವಿಮೋಹವಿಭ್ರಮ । ವಿವರ್ಜಿತಮಾತ್ಮಪರಸ್ವರೂಪಸ್ಯ ॥
ಗ್ರಹಣಂ ಸಮ್ಯಗ್ಜ್ಞಾನಂ । ಸಾಕಾರಮನೇಕಭೇದಂ ತು ॥ ೪೨ ॥

ಅರ್ಥ: ಸಂಶಯ, ವಿಪರ್ಯಯ ಮತ್ತು ಅನಧ್ಯವಸಾಯ ರಹಿತ ಹಾಗೂ ಆಕಾರ ಸಹಿತ ತನ್ನ ಮತ್ತು ಇತರರ ಸ್ವರೂಪವನ್ನು ತಿಳಿಯುವುದನ್ನು ಸಮ್ಯಗ್ಜ್ಞಾನವೆಂದು ಕರೆಯಲಾಗುತ್ತದೆ ಮತ್ತು ಈ ಸಮ್ಯಗ್ಜ್ಞಾನವು ಅನೇಕ ಪ್ರಕಾರವಾಗಿದೆ.

ಮೂಲದಲ್ಲಿ ಸಮ್ಯಗ್ಜ್ಞಾನಕ್ಕೆ ಐದು ಭೇದಗಳಿದ್ದರೂ ಕೇವಲ ಜ್ಞಾನವನ್ನು ಹೊರತುಪಡಿಸಿ, ಈ ನಾಲ್ಕೂ ಜ್ಞಾನಗಳಲ್ಲಿ ಅನೇಕ ಭೇದಗಳನ್ನು ಆಗಮಗ್ರಂಥಗಳಲ್ಲಿ ಹೇಳಲಾಗಿದೆ.

ದರ್ಶನೋಪಯೋಗ ವರ್ಣನೆ

ಜಂ ಸಾಮಣ್ಣಂ ಗಹಣಂ । ಭಾವಾಣಂ ಣೇವಕಟ್ಟುಮಾಯಾರಂ ॥
ಅವಿಸೇಸಿದೂಣ ಅಟ್ಠೇ । ದಂಸಣಮಿದಿ ಭಣ್ಣಏ ಸಮಯೇ ॥ ೪೩ ॥

ಯತ್ಸಾಮಾನ್ಯಂ ಗ್ರಹಣಂ । ಭಾವಾನಾಂ ನೈವ ಕೃತ್ವಾಕಾರಂ ॥
ಅವಿಶೇಷಯಿತ್ವಾರ್ಥಾನ್ । ದರ್ಶನಮಿತಿ ಭಣ್ಯತೇ ಸಮಯೇ ॥ ೪೩ ॥

ಅರ್ಥ: ಪದಾರ್ಥದ ವಿಷಯದಲ್ಲಿ ಪದಾರ್ಥಗಳ ವಿಶೇಷ ಅಂಶವನ್ನು ತಿಳಿದುಕೊಳ್ಳದೆ ಪದಾರ್ಥಗಳ ಸಾಮಾನ್ಯ ಗ್ರಹಣೆ ಮಾಡುವುದು ಅಂದರೆ ತಿಳಿದುಕೊಳ್ಳುವುದನ್ನು ಆಗಮದಲ್ಲಿ ದರ್ಶನವೆಂದು ಹೇಳಲಾಗಿದೆ.
ಉದಾಹರಣೆ ಯಾವುದಾದರೂ ಪದಾರ್ಥವು ಎದುರಿಗೆ ಬಂದಾಗ ಅದನ್ನು ಗ್ರಹಿಸುವುದು ದರ್ಶನವಾಗುತ್ತದೆ. ಆ ಬಳಿಕ ಅನುಭವಕ್ಕೆ ಬರುವುದು ಜ್ಞಾನವಾಗಿದೆ.

ದಂಸಣಪುವ್ವಂ ಣಾಣಂ । ಚದುಮತ್ಥಾಣಂ ಣ ದೋಣ್ಣಿ ಉವಜೋಗಾ ॥
ಜುಗವಂ ಜಮ್ಹಾ ಕೇವಲಿ । ಣಾಹೇ ಜುಗವಂ ತು ತೇ ದೋವಿ ॥ ೪೪ ॥

ದರ್ಶನಪೂರ್ವಂ ಜ್ಞಾನಂ । ಛದ್ಮಸ್ಥಾನಾಂ ನ ದ್ವಾವುಪಯೋಗೌ ॥
ಯುಗಪದ್ಯಸ್ಮಾತ್ಕೇವಲಿ । ನಾಥೇ ತು ತೌ ದ್ವಾವಪಿ ॥ ೪೪ ॥

ಅರ್ಥ: ಅಲ್ಪಜ್ಞಾನಿಗಳಿಗೆ ದರ್ಶನ ಪೂರ್ವಕ ಜ್ಞಾನವಾಗುತ್ತದೆ. ಏಕೆಂದರೆ ಅವರಿಗೆ ಎರಡೂ ಉಪಯೋಗಗಳು ಒಮ್ಮೆಲೇ ಆಗುವುದಿಲ್ಲ. ಆದರೆ ಕೇವಲ ಜ್ಞಾನಿಗಳಿಗೆ ಅವೆರಡೂ ಉಪಯೋಗಗಳು ಒಟ್ಟಿಗೆ ಆಗುತ್ತವೆ.
ಯಾರು ಮೂರು ಕಾಲಗಳ ಎಲ್ಲಾ ಪದಾರ್ಥಗಳನ್ನು ಒಮ್ಮೆಲೇ ತಿಳಿಯುತ್ತಾರೋ ಅವರನ್ನು ಕೇವಲ ಜ್ಞಾನಿಗಳೆನ್ನುತ್ತೇವೆ.

ವ್ಯವಹಾರ ಚಾರಿತ್ರ ವರ್ಣನೆ

ಅಸುಹಾದೋ ವಿಣಿವಿತ್ತೀ । ಸುಹೇ ಪವಿತ್ತೀ ಯ ಜಾಣ ಚಾರಿತ್ತಂ ॥
ವದಸಮಿದಿಗುತ್ತಿರೂವಂ । ವವಹಾರಣಯಾ ದು ಜಿಣಭಣಿಯಂ ॥ ೪೫ ।

ಅಶುಭಾದ್ವಿನಿವೃತ್ತಿಃ । ಶುಭೇ ಪ್ರವೃತ್ತಿಶ್ಚಜಾನೀಹಿ ಚಾರಿತ್ರಂ ॥
ವ್ರತಸಮಿತಿಗುಪ್ತಿರೂಪಂ । ವ್ಯವಹಾರನಯಾತ್ತು ಜಿನಭಣಿತಂ ॥ ೪೫ ॥

ಅರ್ಥ: ಅಶುಭ ಕೆಲಸಗಳನ್ನು ಬಿಡುವುದು ಮತ್ತು ಶುಭ ಕೆಲಸಗಳಲ್ಲಿ ತೊಡಗಿಕೊಳ್ಳುವುದು ಜಿನೇಂದ್ರ ಭಗವಾನರಿಂದ ಹೇಳಲ್ಪಟ್ಟ ವ್ಯವಹಾರ ಚಾರಿತ್ರವೆಂದು ತಿಳಿಯಬೇಕು ಮತ್ತು ಆ ಚಾರಿತ್ರವು ಐದು ಮಹಾವ್ರತ, ಐದು ಸಮಿತಿ ಮತ್ತು ಮೂರು ಗುಪ್ತಿರೂಪದಿಂದ 13 ಪ್ರಕಾರವಾಗಿದೆ.

ನಿಶ್ಚಯ ಚಾರಿತ್ರದ ಸ್ವರೂಪ

ಬಹಿರಬ್ಭಂತರಕಿರಿಯಾ– । ರೋಹೋ ಭವಕಾರಣಪ್ಪಣಾಸಟ್ಠಂ ॥
ಣಾಣಿಸ್ಸ ಜಂ ಜಿಣುತ್ತಂ । ತಂ ಪರಮಂ ಸಮ್ಮಚಾರಿತ್ತಂ ॥ ೪೬ ॥

ಬಹಿರಭ್ಯಂತರಕ್ರಿಯಾ–। ರೋಧೋ ಭವಕಾರಣಪ್ರಣಾಶಾರ್ಥಂ ॥
ಜ್ಞಾನಿನೋ ಯಜ್ಜಿನೋಕ್ತಂ । ತತ್ಪರಮಂ ಸಮ್ಯಕ್ಚಾರಿತ್ರಂ ॥ ೪೬ ॥

ಅರ್ಥ: ಸಂಸಾರದ ಕಾರಣಗಳನ್ನು ನಷ್ಟಗೊಳಿಸುವುದಕ್ಕಾಗಿ ಜ್ಞಾನೀ ಪುರುಷರ ಮುಖಾಂತರ ಬಾಹ್ಯ–ಅಭ್ಯಂತರ ಕ್ರಿಯೆಗಳನ್ನು ನಿಲ್ಲಿಸುವುದು ನಿಶ್ಚಯ ಸಮ್ಯಕ್ಚಾರಿತ್ರವೆಂದು ಜಿನೇಂದ್ರ ದೇವರು ನಿರೂಪಿಸಿದ್ದಾರೆ.

ದುವಿಹಂ ಪಿ ಮೊಕ್ಖಹೇಉಂ । ಝಾಣೇ ಪಾಉಣದಿ ಜಂ ಮುಣೀ ಣಿಯಮಾ॥
ತಮ್ಹಾಪಯತ್ತಚಿತ್ತಾ । ಜೂಯಂ ಝಾಣಾಂ ಸಮಬ್ಭಸಹ ॥ ೪೭ ॥

ದ್ವಿವಿಧಮಪಿ ಮೋಕ್ಷಹೇತುಂ । ಧ್ಯಾನೇನ ಪ್ರಾಪ್ನೋತಿ ಯನ್ಮುನಿರ್ನಿಯಮಾತ್ ॥
ತಸ್ಮಾತ್ಪ್ರಯತ್ನಚಿತ್ತಾ । ಯೂಯಂ ಧ್ಯಾನಂ ಸಮಭ್ಯಸಧ್ವಂ ॥ ೪೭ ॥

ಅರ್ಥ: ಮುನಿಜನರು ನಿಯಮದಿಂದ ನಿಶ್ಚಯ ಮತ್ತು ವ್ಯವಹಾರರೂಪವಾದ ಎರಡೂ ಪ್ರಕಾರದ ಮೋಕ್ಷ ಮಾರ್ಗವನ್ನು ಸಹಜವಾಗಿ ಧ್ಯಾನಾವಸ್ಥೆಯಲ್ಲಿ ಪಡೆದುಕೊಳ್ಳುತ್ತಾರೆ. ಆದ್ದರಿಂದ ನೀವೆಲ್ಲ ಮನಸ್ಸನ್ನು ಏಕಾಗ್ರಗೊಳಿಸುವತ್ತ ಧ್ಯಾನದ ಅಭ್ಯಾಸ ಮಾಡಬೇಕು.

ಮಾ ಮುಜ್ಝಹ ಮಾರಜ್ಜಹ । ಮಾದೂಸಹ ಇಟ್ಠಣಿಟ್ಠಅಟ್ಠೇಸು ॥
ಥಿರಮಿಚ್ಛಹ ಜಇ ಚಿತ್ತಂ । ವಿಚಿತ್ತಝಾಣಪ್ಪಸಿದ್ಧೀಏ ॥ ೪೮ ॥

ಮಾಮುಹ್ಯತ ಮಾರಜ್ಯತ । ಮಾದ್ವೇಕ್ಷಿಷ್ಟೇಷ್ಟಾನಿಷ್ಟಾರ್ಥೇಷು ॥
ಸ್ಥಿರಮಿಚ್ಛತ ಯದಿ ಚಿತ್ತಂ । ವಿಚಿತ್ರಧ್ಯಾನಪ್ರಸಿದ್ಧಯೇ ॥ ೪೮ ॥

ಅರ್ಥ: ಅನೇಕ ಪ್ರಕಾರದ ಧ್ಯಾನದ ಸಿದ್ಧಿಗಾಗಿ ಒಂದು ವೇಳೆ ನೀನು ಮನಸ್ಸನ್ನು ಸ್ಥಿರಗೊಳಿಸಲು ಬಯಸುವೆಯಾದರೆ ಇಷ್ಟ ಪದಾರ್ಥಗಳಲ್ಲಿ ಮೋಹ ಪಡಬೇಡ, ರಾಗ ಪಡಬೇಡ ಮತ್ತು ಅನಿಷ್ಟ ಪದಾರ್ಥಗಳನ್ನು ದ್ವೇಷಿಸಬೇಡ.

ಪಣತೀಸಸೋಲಛಪ್ಪಣ । ಚದುದುಗಮೇಗಂ ಚ ಜವಹ ಝಾಏಹ ॥
ಪರಮೆಟ್ಠಿವಾಚಯಾಣಂ । ಅಣ್ಣಂಚ ಗುರೂವಏಸೇಣ ॥ ೪೯ ॥

ಪಂಚತ್ರಿಂಶತ್‌ಷೋಡಶಷಟ್‌ಪಂಚ । ಚತ್ವಾರಿದ್ವಿಕಮೇಕಂಚ ಜಪತ ಧ್ಯಾಯೇತ ॥
ಪರಮೇಷ್ಠಿ ವಾಚಕಾನಾಂ । ಅನ್ಯಚ್ಚಗುರೂಪದೇಶೇನ ॥ ೪೯ ॥

ಅರ್ಥ: ಪಂಚಪರಮೇಷ್ಠೀ ಮಂತ್ರವು 35, 16, 6, 5, 4, 2 ಮತ್ತು ಒಂದು ಅಕ್ಷರಗಳಲ್ಲಿ ಧ್ಯಾನಿಸುವರು. ಇತರ ಬೇರೆ ಬೇರೆ ಮಂತ್ರಗಳನ್ನು ಗುರುಗಳ ಉಪದೇಶದಿಂದಲೇ ತಿಳಿದು ಧ್ಯಾನಿಸಬೇಕು.

ಅರಹಂತ ಪರಮೇಷ್ಠಿಗಳ ವರ್ಣನೆ

ಣಟ್ಠಚದುಘಾಇಕಮ್ಮೋ । ದಂಸಣಸುಹಣಾಣವೀರಿಯಮಈಓ ॥
ಸುಹದೇಹ್ಥೋಅಪ್ಪಾ । ಸುದ್ಧೋಅರಿಹೋ ವಿಚಿಂತಿಜ್ಜೋ ॥ ೫೦ ॥

ನಷ್ಟಚತುರ್ಘಾತಿಕರ್ಮಾ । ದರ್ಶನಸುಖಜ್ಞಾನವೀರ್ಯಮಯಃ ॥
ಶುಭದೇಹಸ್ಥ ಆತ್ಮಾ । ಶುದ್ಧೋರ್ಹನ್ವಿಚಿಂತ್ಯಃ ॥ ೫೦ ॥

ಅರ್ಥ: ಯಾರು ನಾಲ್ಕು ಘಾತಿಕರ್ಮಗಳನ್ನು ನಷ್ಟಗೊಳಿಸಿರುವರೋ, ಯಾರು ದರ್ಶನ, ಜ್ಞಾನ, ಸುಖ ಮತ್ತು ವೀರ್ಯಯುಕ್ತರೋ, ಶುಭ ದೇಹ ಉಳ್ಳವರೋ, ಅವರು ಶುದ್ಧ ಆತ್ಮ ಅರಿಹಂತರಾಗಿದ್ದು (ವಿಚಿಂತಿಜ್ಜೋ) ಅವರು ಧ್ಯಾನಿಸಲು ಯೋಗ್ಯರು.

ಸಿದ್ಧಪರಮೇಷ್ಠಿರೂಪ ವರ್ಣನೆ

ಣಟ್ಠಟ್ಠಕಮ್ಮದೇಹೋ । ಲೋಯಾಲೋಯಸ್ಸಜಾಣಓದಟ್ಠಾ ॥
ಪುರಿಸಾಯಾರೋ ಅಪ್ಪಾ। ಸಿದ್ಧೋ ಝಾಏಹಲೋಯಸಿಹರತ್ಥೋ ॥ ೫೧ ॥

ನಷ್ಟಾಷ್ಟಕರ್ಮದೇಹೋ । ಲೋಕಾಲೋಕಸ್ಯಜ್ಞಾಯಕೋ ದ್ರಷ್ಟಾ ॥
ಪುರುಷಾಕಾರ ಆತ್ಮಾ । ಸಿದ್ಧೋ ಧ್ಯಾಯೇತ ಲೋಕಶಿಖರಸ್ಥಃ ॥ ೫೧ ॥

ಅರ್ಥ: ಎಂಟು ಕರ್ಮ ಮತ್ತು ಐದು ಶರೀರ ರಹಿತ, ಲೋಕ–ಅಲೋಕವನ್ನು ತಿಳಿಯುವ ಮತ್ತು ನೋಡುವ, ಪುರುಷಾಕಾರದಲ್ಲಿ ಲೋಕದ ತುದಿಯಲ್ಲಿರುವ ಆತ್ಮನು ಸಿದ್ಧಪರಮಾತ್ಮನಾಗಿದ್ದಾನೆ. ಅವರನ್ನು ಧ್ಯಾನಿಸು.

ಉಪಾಧಿರಹಿತವಾದ ಸ್ಫಟಿಕಮಣಿಯಂತೆ, ಹಿಂದೆ ಹೇಳಿದ ಜ್ಞಾನಾವರಣ, ದರ್ಶನಾವರಣ, ವೇದನೀಯ, ಮೋಹನೀಯ, ಆಯುಷ್ಯ, ನಾಮ, ಗೋತ್ರ,

ಅಂತರಾಯಗಳೆಂಬ ಎಂಟು ಉಪಾಧಿಕರ್ಮಗಳನ್ನೂ ಔದಾರಿಕ ವೈಕ್ರಿಯಕ, ಆಹಾರಕ, ತೈಜಸ, ಕಾರ್ಮಣಗಳೆಂಬ ಐದು ಶರೀರಗಳನ್ನೂ ನಾಶಮಾಡಿ ಪರಿಶುದ್ಧನಾಗಿರುವವನೂ ಲೋಕಾಲೋಕಗಳನ್ನು ತಿಳಿಯುವವನೂ ನೋಡುವವನೂ ಪುರುಷಾಕಾರನೂ ಲೋಕದ ತುತ್ತತುದಿಯಲ್ಲಿರುವವನೂ ಆದ ಆತ್ಮನಿಗೆ ಸಿದ್ಧಪರಮೇಷ್ಠಿಯೆಂದು ಹೆಸರು. ಆ ಸಿದ್ಧಪರಮೇಷ್ಠಿಗೆ ಮುಕ್ತಾತ್ಮನೆಂದೂ ಪರಮಾತ್ಮನೆಂದೂ ಶುದ್ಧಾತ್ಮನೆಂದೂ ಹೆಸರುಗಳಿರುತ್ತವೆ. ಅಂತಹ ಸಿದ್ಧಪರಮೇಷ್ಠಿಯನ್ನು ಧ್ಯಾನಮಾಡಬೇಕು. ಮೋಕ್ಷ ಪುರುಷಾರ್ಥ ವನ್ನು ಹೊಂದಲಿಚ್ಛಿಸುವವರು ಅಂತಹ ಪುರುಷಾರ್ಥವನ್ನು ಹೊಂದಿದ ಪವಿತ್ರಾತ್ಮನನ್ನು ಧ್ಯಾನಮಾಡಬೇಕೆಂದು ಮುಖ್ಯಾಭಿಪ್ರಾಯವು.

ದಂಸಣಣಾಣಪಹಾಣೇ । ವೀರಿಯಚಾರಿತ್ತವರತವಾಯಾರೇ ॥
ಅಪ್ಪಂ ಪರಂ ಚ ಜುಂಜಇ । ಸೋ ಆಇರಿಯೋ ಮುಣಿ ಝೇಓ ॥ ೫೨ ॥

ದರ್ಶನಜ್ಞಾನಪ್ರಧಾನೇ । ವೀರ್ಯಚಾರಿತ್ರವರತಪ ಆಚಾರೇ ॥
ಆತ್ಮಾನಂ ಪರಂ ಚ ಯುಙ್ಕ್ತೇ । ಸ ಆಚಾರ್ಯೋ। ಮುನಿರ್ಧ್ಯೇಯಃ ॥ ೫೨ ॥

ಜೋ ರಯಣತ್ತಯಜುತ್ತೋ । ಣಿಚ್ಚಂ ಧಮ್ಮೋವದೇಸಣೇ ಣಿರದೋ ॥
ಸೋ ಉವಜ್ಝಾಓ ಅಪ್ಪಾ । ಜದಿವರವಸಹೋ ಣಮೋ ತಸ್ಸ ॥ ೫೩ ॥

ಯೋ ರತ್ನತ್ರಯಯುಕ್ತೋ । ನಿತ್ಯಂ ಧರ್ಮೋಪದೇಶನೇ ನಿರತಃ ॥
ಸ ಉಪಾಧ್ಯಾಯ ಆತ್ಮಾ । ಯತಿವರವೃಷಭೋ ನಮಸ್ತಸ್ಮೈ ॥ ೫೩ ॥

ಅರ್ಥ: ಯಾರು ದರ್ಶನ, ಜ್ಞಾನದ ಪ್ರಧಾನತೆಯುಕ್ತರೋ, ವೀರ್ಯ, ಚಾರಿತ್ರ ಹಾಗೂ ಶ್ರೇಷ್ಠ ತಪದಲ್ಲಿ ತನ್ನನ್ನು ಹಾಗೂ ಶಿಷ್ಯರನ್ನು ತೊಡಗಿಸಿಕೊಳ್ಳುವರೋ ಆ ಆಚಾರ್ಯರು ಧ್ಯಾನ ಮಾಡಲು ಯೋಗ್ಯರು. ರತ್ನತ್ರಯದಿಂದ ಯುಕ್ತರಾಗಿ, ಯಾವ ಆತ್ಮರು ನಿತ್ಯವೂ ಧರ್ಮೋಪದೇಶ ಕೊಡುವುದರಲ್ಲಿ ನಿರತರೋ, ಮುನಿಗಳಲ್ಲಿ ಶ್ರೇಷ್ಠರೋ, ಅವರು ಉಪಾಧ್ಯಾಯ ಪರಮೇಷ್ಠಿಗಳು, ಅವರಿಗೆ ನಮಸ್ಕಾರವಿರಲಿ.

ಸಂಪೂರ್ಣ ಪರಪದಾರ್ಥಗಳಿಂದ ಭಿನ್ನನಾದ ನಿಜ ಶುದ್ಧಾತ್ಮನೇ ಉಪಾದೇಯನೆಂಬ ನಂಬಿಕೆಗೆ ಸಮ್ಯಗ್ದರ್ಶನವೆಂದೂ ಆ ಸಮ್ಯಗ್ದರ್ಶನದಲ್ಲಿ ಮಗ್ನನಾಗಿರುವುದಕ್ಕೆ ದರ್ಶನಾಚಾರವೆಂದೂ ಹೆಸರು. ನಿಜಶುದ್ಧಾತ್ಮನನ್ನು ಮಿಥ್ಯಾತ್ವರಾಗಾದಿ ಪರಭಾವಗಳಿಂದ ಭಿನ್ನನನ್ನಾಗಿ ತಿಳಿಯುವ ಸ್ವಸಂವೇದನಜ್ಞಾನಕ್ಕೆ ಸಮ್ಯಗ್ಜ್ಞಾನವೆಂದೂ ಆ ಸಮ್ಯಗ್ಜ್ಞಾನದಲ್ಲಿ ಆಸಕ್ತನಾಗಿರುವುದಕ್ಕೆ ಜ್ಞಾನಾಚಾರವೆಂದೂ ನಿಜಶುದ್ಧಾತ್ಮಾನುಭವದಿಂದುಂಟಾದ

ಸುಖಾಸ್ವಾದನದಲ್ಲಿ ನಿಶ್ಚಲವಾಗಿರುವ ಮನಸ್ಸಿಗೆ ಸಮ್ಯಕ್ಚಾರಿತ್ರವೆಂದೂ ಸಮಸ್ತ ಪರದ್ರವ್ಯೇಚ್ಛೆಯನ್ನು ತಡೆದು ಅನಶನಾದಿ ಬಾಹ್ಯತಪಸ್ಸಿನ ಸಹಾಯದಿಂದ ನಿಜಸ್ವರೂಪದಲ್ಲಿ ಚಿತ್ತನಿರೋಧವನ್ನು ಮಾಡುವುದಕ್ಕೆ ತಪಶ್ಚರಣವೆಂದೂ ಹೆಸರು. ಈ ನಾಲ್ಕು ಆಚಾರಗಳನ್ನು ಕಾಪಾಡಿಕೊಳ್ಳುವುದರಲ್ಲಿ ಸ್ವಶಕ್ತಿಯನ್ನು ಮರೆಮಾಚದಿರುವುದಕ್ಕೆ ವೀರ್ಯಾಚಾರವೆಂದು ಹೆಸರು. ಈ ಪಂಚವಿಧಾಚಾರಗಳನ್ನು ತಾನು ಆಚರಿಸುವವನೂ ಬೇರೆಯವರೂ ಆಚರಿಸುವಂತೆ ಅವರನ್ನು ಪ್ರೇರೇಪಿಸುವವನೂ ಹಿಂದೆ ಹೇಳಿದ ದಶಧರ್ಮ, ಅನಶನ, ಅವಮೋದರ್ಯ, ವೃತ್ತಿಪರಿಸಂಖ್ಯಾನ, ರಸಪರಿತ್ಯಾಗ, ವಿವಿಕ್ತಶಯ್ಯಾಸನ, ಕಾಯಕ್ಲೇಶಗಳೆಂಬ ಆರು ಬಾಹ್ಯ ತಪಸ್ಸುಗಳು; ಪ್ರಾಯಶ್ಚಿತ್ತ, ವಿನಯ, ವೈಯಾವೃತ್ಯ, ಸ್ವಾಧ್ಯಾಯ, ವ್ಯುತ್ಸರ್ಗ ಧ್ಯಾನಗಳೆಂಬ ಆರು ಅಭ್ಯಂತರ ತಪಸ್ಸುಗಳು; ಪಂಚಾಚಾರ, ಷಡಾವಶ್ಯಕಕ್ರಿಯೆ, ತ್ರಿಗುಪ್ತಿಗಳೆಂಬೀ ಮೂವತ್ತಾರು ಗುಣಗಳುಳ್ಳವನೂ ಆದ ಮುನಿಗೆ ಆಚಾರ್ಯ ಪರಮೇಷ್ಠಿಯೆಂದು ಹೆಸರು. ಇಂತಹ ಮುನಿಯು ಧ್ಯಾನಿಸಲ್ಪಡುವುದಕ್ಕೆ ಯೋಗ್ಯನು.

ಸಾಧುಪರಮೇಷ್ಠಿಸ್ವರೂಪ ವರ್ಣನೆ

ದಂಸಣಣಾಣಸಮಗ್ಗಂ । ಮಗ್ಗಂ ಮೊಕ್ಖಸ್ಸ ಜೋ ಹು ಚಾರಿತ್ತಂ ॥
ಸಾಧಯದಿ ಣಿಚ್ಚಸುದ್ಧಂ । ಸಾಹೂ ಸ ಮುಣೀ ಣಮೋ ತಸ್ಸ ॥ ೫೪ ॥

ದರ್ಶನಜ್ಞಾನಸಮಗ್ರಂ। ಮಾರ್ಗಂ ಮೋಕ್ಷಸ್ಯ ಯೋ ಹಿ ಚಾರಿತ್ರಂ ॥
ಸಾಧಯತಿ ನಿತ್ಯಶುದ್ಧಂ । ಸಾಧುಃ ನ ಮುನಿರ್ನಮಸ್ತಸ್ಮೈ ॥ ೫೪ ॥

ಅರ್ಥ: ಯಾವ ಮುನಿಗಳು ನಿಶ್ಚಯದಿಂದ ದರ್ಶನ ಮತ್ತು ಜ್ಞಾನದಿಂದ ಪರಿಪೂರ್ಣರೋ, ಮೋಕ್ಷ ಮಾರ್ಗಕ್ಕೆ ಕಾರಣವಾಗುವ ಚಾರಿತ್ರವನ್ನು ಪ್ರತಿದಿನ ಶುದ್ಧ ರೀತಿಯಿಂದ ಸಿದ್ಧಮಾಡುತ್ತಾರೋ, ಅವರನ್ನು ಸಾಧು ಪರಮೇಷ್ಠಿಗಳೆನ್ನುತ್ತಾರೆ. ಅವರಿಗೆ ನಮ್ಮ ನಮಸ್ಕಾರವಿರಲಿ.

ಜಂ ಕಿಂಚಿ ವಿಚಿಂತಂತೋ । ಣಿರೀಹವಿತ್ತೀ ಹವೇ ಜದಾ ಸಾಹೂ ॥
ಲದ್ಧೂಣಯ ಏಯತ್ತಂ । ತದಾ ಹು ತಂ ತಸ್ಸ ಣಿಚ್ಛಯಂ ಝಾಣಾಂ ॥ ೫೫ ॥

ಯತ್ಕಿಂಚಿದ್ವಿಚಿಂತಯನ್ । ನಿರೀಹವೃತಿರ್ಭವತಿ ಯದಾ ಸಾಧುಃ ॥
ಲಬ್ಧ್ವೈಕತ್ವಂ । ತದಾಹುಸ್ತತ್ತಸ್ಯ ನಿಶ್ಚಯಂ ಧ್ಯಾನಂ ॥ ೫೫ ॥

ಅರ್ಥ: ಯಾವ ಸಮಯದಲ್ಲಿ ಸಾಧುವು ವಿಷಯ-ಕಷಾಯಗಳನ್ನು ತ್ಯಜಿಸಿ, ಅರಿಹಂತಾದಿ ಯಾವುದಾದರೊಂದು ಧ್ಯಾನಯೋಗ್ಯ ವಸ್ತುವಿನ ಧ್ಯಾನ ಮಾಡುತ್ತಾ ಇಚ್ಛಾರಹಿತನಾಗಿ, ಆತ್ಮಚಿಂತನೆಯಲ್ಲಿ ಲೀನನಾಗುತ್ತಾನೋ ಆ ಸಮಯದಲ್ಲಿ ಅವನಿಗೆ ನಿಶ್ಚಯವಾಗಿಯೂ ಧ್ಯಾನವಾಗುತ್ತದೆ.

ಪರಮಧ್ಯಾನಲಕ್ಷಣ

ಮಾಚೆಟ್ಠಹ ಮಾಜಂಪಹ । ಮಾಚಿಂತಹ ಕಿಂವಿ ಜೇಣ ಹೋಇ ಥಿರೋ ॥
ಅಪ್ಪಾ ಅಪ್ಪಮ್ಮಿರಓ । ಇಣಮೇವ ಪರಂ ಹವೇ ಝಾಣಂ ॥ ೫೬ ॥

ಮಾಚೇಷ್ಟಿಧ್ವಂ ಮಾಜಲ್ಪಿಷ್ಟ । ಮಾಚಿಚಿಂತಕ ಕಿಮಪಿ ಯೇನ ಭವತಿ ಸ್ಥಿರಃ॥
ಆತ್ಮಾ ಆತ್ಮನಿರತಃ । ಇದಮೇವ ಭವತಿ ಪರಂ ಧ್ಯಾನಂ ॥ ೫೬ ॥

ಅರ್ಥ: ಯಾವುದೇ ಶರೀರ ಚೇಷ್ಟೆಯನ್ನು ಮಾಡಬೇಡ. ಮುಖದಿಂದ ಏನೂ ಮಾತಾಡಬೇಡ. ಮನಸ್ಸಿನಿಂದ ಏನನ್ನೂ ಯೋಚಿಸಬೇಡ. ಇದರಿಂದಾಗಿ ಆತ್ಮನು ಆತ್ಮನಲ್ಲಿ ಸ್ಥಿರವಾಗಿ ತಲ್ಲೀನನಾಗಲಿ. ಇದೇ ಉತ್ಕೃಷ್ಟ ಧ್ಯಾನವಾಗಿದೆ.

ತವಸುದವದವಂ ಚೇದಾ । ಝಾಣರಹಧುರಂಧರೋ ಹವೇ ಜಮ್ಹಾ ॥
ತಮ್ಹಾ ತತ್ತಿದಯರದಾ । ತಲ್ಲದ್ಧೀಏ ಸದಾ ಹೋಹ ॥ ೫೭ ॥

ತಪಃಶ್ರುತವ್ರತವಾಂಶ್ಚೇತಾ । ಧ್ಯಾನರಥಧುರಂಧರೋ ಭವತಿ ಯಸ್ಮಾತ್ ॥
ತಸ್ಮಾತ್ತ್ರಿತಯರತಾಃ । ತಲಬ್ಧ್ಯೈ ಸದಾ ಭವತ ॥ ೫೭ ॥

ಅರ್ಥ: ಏಕೆಂದರೆ ತಪ, ಶ್ರುತ ಮತ್ತು ವ್ರತಗಳನ್ನು ಧಾರಣೆ ಮಾಡುವ ಆತ್ಮನು ಆ ಧ್ಯಾನ ರೂಪದ ರಥದ ಅಕ್ಷವನ್ನು ಧಾರಣೆ ಮಾಡಲು ಸಮರ್ಥನಾಗುತ್ತಾನೆ. ಆದ್ದರಿಂದ ಆ ಧ್ಯಾನದ ಪ್ರಾಪ್ತಿಗಾಗಿ ಯಾವಾಗಲೂ ತಪ, ಶ್ರುತ ಮತ್ತು ವ್ರತ ಈ ಮೂರರಲ್ಲಿ ಮಗ್ನನಾಗಿರು.

ದವ್ವಸಂಗಹಮಿಣಂ ಮುಣಿಣಾಹಾ। ದೋಸಸಂಚಯಚುದಾ ಸುದಪುಣ್ಣಾ॥
ಸೋಧಯಂತುತಣುಸುತ್ತಧರೇಣ। ಣೇಮಿಚಂದಮುಣಿನಾ ಭಣಿಯಂ ಜಂ ॥ ೫೮ ॥

ದ್ರವ್ಯಸಂಗ್ರಹಮಿದಂ ಮುನಿನಾಥಾಃ ॥ ದೋಷಸಂಚಯಚ್ಯುತಾಃ ಶ್ರುತಪೂರ್ಣಾಃ ॥
ಶೋಧಯಂತು ತನುಸೂತ್ರಧರೇಣ । ನೇಮಿಚಂದ್ರಮುನಿನಾ ಭಣಿತಂ ಯತ್ ॥ ೫೮ ॥

ಅರ್ಥ: ಅಲ್ಪಜ್ಞಾನಿ ನೇಮಿಚಂದ್ರ ಮುನಿಯು ಮರೆದ ಈ ದ್ರವ್ಯ ಸಂಗ್ರಹವೆಂಬ ಗ್ರಂಥದಲ್ಲಿ ಯಾವುದಾದರು ತಪ್ಪುಗಳಿದ್ದಲ್ಲಿ ಶಾಸ್ತ್ರವನ್ನು ತಿಳಿದ, ಸಮಸ್ತ ದೋಷಗಳಿಂದ ರಹಿತ ಮುನಿರಾಜರು ಶುದ್ಧ ಮಾಡಲಿ.

ತ್ರಿಂಶಚ್ಚತುರ್ವಿಂಶತಿ

ತೀರ್ಥಂಕರ – ನಾಮಾವಲಿ

ಅಥ ತೀರ್ಥಂಕರ ಭಕ್ತಿಃ

ಚಉವೀಸಂ ತಿತ್ಥಯರೇ ಉಸಹಾಇವೀರಪಚ್ಛಿಮೇ ವಂದೇ ।
ಸವ್ವೇಸಿಂ ಮುಣಿಗಣಹರಸಿದ್ಧೇ ಸಿರಸಾ ಣಮಂಸಾಮಿ ॥ ೧ ॥

ಯೇ ಲೋಕೇಽಷ್ಟಸಹಸ್ರಲಕ್ಷಣಧರಾಃ ಜ್ಞೇಯಾರ್ಣವಾಂತರ್ಗತಾಃ ।
ಯೇ ಸಮ್ಯಗ್ಭವಜಾಲಹೇತುಮಥನಾಶ್ಚಂದ್ರಾರ್ಕತೇಜೋಧಿಕಾಃ ॥
ಯೇ ಸಾಧ್ವಿಂದ್ರಸುರಾಪ್ಸರೋಗಣಶತೈರ್ಗೀತಪ್ರಣುತ್ಯಾರ್ಚಿತಾಃ ।
ತಾನ್ ದೇವಾನ್ ವೃಷಭಾದಿವೀರಚರಮಾನ್ ಭಕ್ತ್ಯಾ ನಮಸ್ಯಾಮ್ಯಹಂ ॥

ನಾಭೇಯಂ ದೇವಪೂಜ್ಯಂ ಜಿನವರಮಜಿತಂ ಸರ್ವಲೋಕಪ್ರದೀಪಂ ।
ಸರ್ವಜ್ಞಂ ಸಂಭವಾಖ್ಯಂ ಮುನಿಗಣವೃಷಭಂ ನಂದನಂ ದೇವದೇವಂ ॥
ಕರ್ಮಾರಿಘ್ನಂ ಸುಬುದ್ಧಿಂ ವರಕಮಲನಿಭಂ ಪದ್ಮಪುಷ್ಪಾಭಿಗಂಧಂ ।
ಕ್ಷಾಂಥಂ ದಾತಂ ಸುಪಾರ್ಶ್ವಂ ಸಕಲಶಶಿನಿಭಂ ಚಂದ್ರನಾಮಾನಮೀಡೇ ॥ ೩ ॥

ವಿಖ್ಯಾತಂ ಪುಷ್ಪದಂತಂ ಬಹುಭಯಮಥನಂ ಶೀತಲಂ ಲೋಕನಾಥಂ ।
ಶ್ರೇಯಾಂಸಂ ಶೀಲಕೋಶಂ ಪ್ರವರನರಗುರುಂ ವಾಸುಪೂಜ್ಯಂ ಸುಪೂಜ್ಯಂ ॥
ಮುಕ್ತಂ ದಾಂತೇಂದ್ರಿಯಾಶ್ವಂ ವಿಮಲಮೃಷಿಪತಿಂ ಸಿಂಹಸೈನ್ಯಂ ಮುನೀಂದ್ರಂ ।
ಧರ್ಮಂ ಸದ್ಧರ್ಮಕೇತುಂ ಶಮದಮನಿಲಯಂ ಸ್ತೌಮಿ ಶಾಂತಿಂ ಶರಣ್ಯಂ ॥

ಕುಂಥುಂ ಸಿದ್ಧಾಲಯಸ್ಥಂ ಶ್ರಮಣಪತಿಮರಂ ತ್ಯಕ್ತಭೋಗೇಷು ಚಕ್ರಂ ।
ಮಲ್ಲಿಂ ವಿಖ್ಯಾತಗೋತ್ರಂ ಖಚರಗಣನುತಂ ಸುವ್ರತಂ ಸೌಖ್ಯರಾಶಿಂ ॥
ದೇವೇಂದ್ರಾರ್ಚ್ಯಂ ನಮೀಶಂ ಹರಿಕುಲತಿಲಕಂ ನೇಮಿಚಂದ್ರಂ ಭವಾಂತಂ ।
ಪಾರ್ಶ್ವಂ ನಾಗೇಂದ್ರವಂದ್ಯಂ ಶರಣಮಹಮಿತೋ ವರ್ಧಮಾನಂ ಚ ಭಕ್ತ್ಯಾ ॥

ಅಥ ಅರ್ಚನಾಮಂತ್ರಾಃ

ಶ್ರೀಮದುಭಯಲಕ್ಷ್ಮೀರಮಣಾಯ ಪಂಚಮಹಾಕಲ್ಯಾಣಸಂಪೂರ್ಣಾಯ
ನವಕೇವಲಲಬ್ಧಿಸಮನ್ವಿತಾಯ ಓಂ ಹ್ರೀಂ ಶ್ರೀಮದರ್ಹತ್ಪರಮೇಷ್ಠಿನೇ ನಮಃ ಸ್ವಾಹಾ ॥

ಓಂ ಹ್ರೀಂ ಶ್ರೀಮತ್ಸಿದ್ಧಪರಮೇಷ್ಠಿನೇ ನಮಃ ಸ್ವಾಹಾ ॥
ಓಂ ಹ್ರೀಂ ಶ್ರೀಮದಾಚಾರ್ಯಪರಮೇಷ್ಠಿನೇ ನಮಃ ಸ್ವಾಹಾ ॥
ಓಂ ಹ್ರೀಂ ಶ್ರೀಮದುಪಾಧ್ಯಾಯಪರಮೇಷ್ಠಿನೇ ನಮಃ ಸ್ವಾಹಾ ॥
ಓಂ ಹ್ರೀಂ ಶ್ರೀಮತ್ಸರ್ವಸಾಧುಪರಮೇಷ್ಠಿಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಶ್ರೀ ಶಾಂತಿತೀರ್ಥಂಕರಾಯ ನಮಃ ಸ್ವಾಹಾ * ॥
ಓಂ ಹ್ರೀಂ ಅರ್ಹತ್ಸಿದ್ಧಾಚಾರ್ಯೋಪಾಧ್ಯಾಯ ಸರ್ವಸಾಧು ಜಿನಧರ್ಮಾಗಮ
ಜಿನಚೈತ್ಯಚೈತ್ಯಾಲಯಾಶ್ಚೇತಿ ನವದೇವೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ವೃಷಭಾದಿವರ್ಧಮಾನಾಶ್ಚೇತಿ ವರ್ತಮಾನಕಾಲ
ಚತುರ್ವಿಂಶತಿ ತೀರ್ಥಂಕರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಅತೀತಾನಾಗತವರ್ತಮಾನಕಾಲಸಂಬಂಧಿ ದ್ವಾಸಪ್ತತಿ
ತೀರ್ಥಂಕರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಪಂಚಭರತ – ಪಂಚೈರಾವತಸ್ಥಿತೇಭ್ಯೋ ವಿಂಶತ್ಯಧಿಕ
ಸಪ್ತಶತ ತೀರ್ಥಂಕರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶ್ರೀ ಪಂಚವಿದೇಹಕ್ಷೇತ್ರಸ್ಥ ಶ್ರೀ ಸೀಮಂಧರಾದಿ ವಿಂಶತಿ
ವಿದ್ಯಮಾನ ತೀರ್ಥಂಕರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶ್ರೀಪಂಚವಿದೇಹಕ್ಷೇತ್ರಸ್ಥ ಷಷ್ಟ್ಯಧಿಕಶತ
ತೀರ್ಥಂಕರೇಭ್ಯೋ ನಮಃ ಸ್ವಾಹಾ॥
ಓಂ ಹ್ರೀಂ ಅರ್ಹಂ ಅಷ್ಟಲಕ್ಷಾಷ್ಟಾಧಿಕಾ ನವತಿಸಹಸ್ರ ದ್ವಾಧಿಕ ಪಂಚಶತ
ಗಂಧಕುಟಿಗತ ಸಾಮಾನ್ಯಕೇವಲಿಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಜ್ಞಾನಾದ್ಯನಂತಗುಣವಿಶಿಷ್ಟೇಭ್ಯೋ ಅನಂತ
ಸಿದ್ಧಪರಮೇಷ್ಠಿಭ್ಯೋ ನಮಃ ಸ್ವಾಹಾ॥
ಓಂ ಹ್ರೀಂ ಅರ್ಹಂ ಅಷ್ಟಮನಂದೀಶ್ವರ ದ್ವೀಪಸ್ಥಿತಾಂಜನ
ದಧಿಮುಖರತಿಕರಾಗ್ರಸ್ಥಿತ ಪೂರ್ವದಕ್ಷಿಣಪಶ್ಚಿಮೋತ್ತರದಿಗ್ಗತ ಭಾವನ್ನ
ಜಿನಚೈತ್ಯಾಲಯಸ್ಥ ಸಮಸ್ತ ಜಿನಬಿಂಬೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂತೀರ್ಥಂಕರತ್ವ ಸುಖಸಾಧಕೇಭ್ಯೋದರ್ಶನವಿಶುದ್ಧ್ಯಾದಿ
ಷೋಡಶಭಾವನೇಭ್ಯೋ ನಮಃ ಸ್ವಾಹಾ॥
ಓಂ ಹ್ರೀಂ ಅರ್ಹಂ ಉತ್ತಮಕ್ಷಮಾದಿದಶಧರ್ಮೇಭ್ಯೋ ನಮಃ ಸ್ವಾಹಾ ॥

* ಇಲ್ಲಿ ಬಸದಿಯ ಮೂಲಸ್ವಾಮಿಯ ಹೆಸರನ್ನು ಹೇಳಿಕೊಳ್ಳಬೇಕು.

ಓಂ ಹ್ರೀಂ ಅರ್ಹಂ ಶ್ರೀಮದ್ಬಾಹುಬಲಿ ಜಿನದೇವಾಯ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶಬ್ದಬ್ರಹ್ಮಮುಖೋತ್ಪನ್ನ ದ್ವಾದಶಾಂಗ ಶ್ರುತದೇವ್ಯೈ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶ್ರೀಧವಲಾಜಯಧವಲಾಮಹಾಧವಲಾದಿ ಸಿದ್ಧಾಂತ ಮಹಾಗ್ರಂಥ ರತ್ನೇಭ್ಯೋ ನಮಃ ಸ್ವಾಹಾ॥
ಓಂ ಹ್ರೀಂ ಅರ್ಹಂ ನವರತ್ನ ನಿರ್ಮಿತಸಮಸ್ತ ಜಿನಬಿಂಬೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಣಮೋ ಅರಿಹಂತಾಣಮಾದಿ ಅಷ್ಟಚತ್ವಾರಿಂಶತ್ ಗಣಧರವಲಯಮಂತ್ರಸಮೂಹೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಚತುರಶೀತಿಲಕ್ಷಗುಣಗಣಧರಪರಮೇಷ್ಠಿಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ತ್ರಿಸಂಖ್ಯೋನ ನವಕೋಟಿ ಮುನಿಸಮೂಹೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶ್ರೀಭದ್ರಬಾಹು ಕುಂದಕುಂದ ಪೂಜ್ಯಪಾದ ಭೂತಬಲಿ ಪುಷ್ಪದಂತ ಗುಣಭದ್ರ, ಗುಣಧರ ವೀರಸೇನ ಜಿನಸೇನ ಯತಿವೃಷಭ ಸಮಂತಭದ್ರಾದಿ ಆಚಾರ್ಯಪರಂಪರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ತ್ರಿಲೋಕಸ್ಥಿತ ಕೃತ್ರಿಮಾಕೃತ್ರಿಮ ಸರ್ವಜಿನಚೈತ್ಯಚೈತ್ಯಾಲಯೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಪಂಚಮೇರುಗಿರಿಸ್ಥಿತಸಮಸ್ತ ಜಿನಚೈತ್ಯಾಲಯೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ಶ್ರೀಸಮ್ಮೇದಾದಿ ತ್ರಿಕಾಲತ್ರಿಲೋಕಸ್ಥ ಸಮಸ್ತನಿರ್ವಾಣಕ್ಷೇತ್ರೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹಂ ತ್ರಿಕಾಲತ್ರಿಲೋಕಗತ ಸರ್ವಸಮಾಧಿಪ್ರಾಪ್ತ ಭವ್ಯಜೀವೇಭ್ಯೋ ನಮಃ ಸ್ವಾಹಾ ॥
ಓಂ ಹ್ರೀಂ ಅರ್ಹ ಸರ್ವಚತುಃಸಂಘೇಭ್ಯೋ ನಮಃ ಸ್ವಾಹಾ ॥
ಓಂ ಆಂ ಕ್ರೋಂ ಹ್ರೀಂ ಗೋಮುಖಾದಿ ಚತುರ್ವಿಂಶತಿ ಯಕ್ಷದೇವೇಭ್ಯೋ ನಮಃ ಸ್ವಾಹಾ ॥
ಓಂ ಆಂ ಕ್ರೋಂ ಹ್ರೀಂ ಚಕ್ರೇಶ್ವರ್ಯಾದಿ ಚತುರ್ವಿಂಶತಿಯಕ್ಷಿದೇವಿಭ್ಯೋ ನಮಃ ಸ್ವಾಹಾ ॥
ಓಂ ಆಂ ಕ್ರೋಂ ಹ್ರೀಂ ಶ್ರೀವೀರಬ್ರಹ್ಮಯಕ್ಷಾಯ ನಮಃ ಸ್ವಾಹಾ ॥
ಓಂ ಆಂ ಕ್ರೋಂ ಹ್ರೀಂ ಬಾಲಾರ್ಕವರ್ಣಪದ್ಮಾವತೀದೇವ್ಯೈ ನಮಃ ಸ್ವಾಹಾ ॥
ಓಂ ಆಂ ಕ್ರೋಂ ಹ್ರೀಂ ಸೋಮಾದಿದ್ವಾರಪಾಲಕೇಭ್ಯೋ ನಮಃ ಸ್ವಾಹಾ ॥

◆◆◆

॥ ಓಂ ಶ್ರೀ ಚಂದ್ರನಾಥಾಯ ನಮಃ ॥ ॥ ಓಂ ಶ್ರೀ ಪಾರ್ಶ್ವನಾಥಾಯ ನಮಃ ॥

॥ ಓಂ ಶ್ರೀ ಪದ್ಮಾವತೀ ದೇವ್ಯೈ ನಮಃ ॥

ಸದ್ಧರ್ಮ ಬಂಧುಗಳೇ, ಪೆರಾಡಿಬೀಡು

26–05–2022

ನನ್ನ ಸಹೋದರ

ಪೆರಾಡಿ ಬೀಡು ಡಾ. ಬಿ. ಯಶೋವರ್ಮ ಅವರು

ದಿನಾಂಕ 23–05–2022ರಂದು ನಿಧನರಾದ ಪ್ರಯುಕ್ತ

ಅವರ ದೇಹದಹನಾದಿ ಕ್ರಿಯೆಗಳ ಪ್ರಾಯಶ್ಚಿತ್ತ ಹಾಗೂ ಆತ್ಮಶಾಂತಿಗಾಗಿ

ದಿನಾಂಕ 08–06–2022ನೇ ಬುಧವಾರ ಮಧ್ಯಾಹ್ನ

ಮೂಡುಬಿದ್ರೆ ಲೆಪ್ಪದ ಬಸದಿ ಶ್ರೀ ಚಂದ್ರನಾಥ ಸ್ವಾಮಿ ಸನ್ನಿಧಿಯಲ್ಲಿ

ನಾವು ಮಾಡಿಸುವ

೨೧೬ ಕಲಶ ಮಹಾಭಿಷೇಕ

ಮಹಾಮಾತೆ ಜ್ವಾಲಾಮಾಲಿನೀ ಅಮ್ಮನವರಿಗೆ ಅಲಂಕಾರ ಪೂಜೆ

ಹಾಗೂ ದೇವಕಾರ್ಯ.

ಪಾವನ ಸಾನ್ನಿಧ್ಯ :

'ಭಾರತ ಭೂಷಣ' ಸ್ವಸ್ತಿಶ್ರೀ ಭಟ್ಟಾರಕ ಚಾರುಕೀರ್ತಿ

ಪಂಡಿತಾಚಾರ್ಯವರ್ಯ ಮಹಾಸ್ವಾಮಿಗಳು

ಶ್ರೀ ದಿಗಂಬರ ಜೈನಮಠ, ಮೂಡುಬಿದ್ರೆ

ಮೂಡುಬಿದ್ರೆ ಮಹಾವೀರ ಭವನದಲ್ಲಿ ಸಂಘ ಸಂತರ್ಪಣೆ ನಡೆಯಲಿದೆ.

* ತದ್ದಿನ ಮೂಡುಬಿದ್ರೆ ಹದಿನೆಂಟು ಬಸದಿಗಳಲ್ಲಿ ನಾವು ಮಾಡಿಸುವ ಗೋಷ್ಠಿ ಪೂಜೆ
* ತದ್ದಿನ ಮೂಡುಬಿದ್ರೆ ವಿಕ್ರಮ ಶೆಟ್ಟಿ ಬಸದಿ, ಶ್ರೀ ಆದಿನಾಥ ಸ್ವಾಮಿ ಸನ್ನಿಧಿಯಲ್ಲಿ ಬೆಟ್ಕೇರಿ ಕುಟುಂಬಸ್ಥರು ಮಾಡಿಸುವ ೫೪ ಕಲಶ ಸ್ನಪನ.
* ದಿನಾಂಕ 09–06–2022ನೇ ಗುರುವಾರ ಮಧ್ಯಾಹ್ನ ಪೆರಾಡಿಬೀಡು ಬಸದಿ ಶ್ರೀ ಪಾರ್ಶ್ವನಾಥ ಸ್ವಾಮಿ ಸನ್ನಿಧಿಯಲ್ಲಿ ನಾವು ಮಾಡಿಸುವ ೫೪ ಕಲಶ ಸ್ನಪನ.
* ದಿನಾಂಕ 09–06–2022ನೇ ಗುರುವಾರ ಸಂಜೆ ನೆಲ್ಲಿಕಾರು ಬಸದಿ ಶ್ರೀ ಅನಂತನಾಥ ಸ್ವಾಮಿ ಸನ್ನಿಧಿಯಲ್ಲಿ ನಾವು ಮಾಡಿಸುವ ಪಂಚಾಮೃತ ಅಭಿಷೇಕ ಹಾಗೂ ಬ್ರಹ್ಮಯಕ್ಷ ಪೂಜೆ.

* ದಿನಾಂಕ 10–06–2022ನೇ ಶುಕ್ರವಾರ ಸಾಯಂಕಾಲ ಧರ್ಮಸ್ಥಳ ಶ್ರೀ ಚಂದ್ರನಾಥ ಸ್ವಾಮಿ ಸನ್ನಿಧಿಯಲ್ಲಿ ಶ್ರೀಮತಿ ಮತ್ತು ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು ಮಾಡಿಸುವ ೫೪ ಕಲಶ ಸ್ನಪನ ಮತ್ತು ಬೀಡಿನಲ್ಲಿ ಉಪಾಹಾರ.

* ದಿನಾಂಕ 10–06–2022ನೇ ಶುಕ್ರವಾರ ಧರ್ಮಸ್ಥಳ ಶ್ರೀ ಮಂಜುನಾಥ ಸ್ವಾಮಿ ಸನ್ನಿಧಿಯಲ್ಲಿ ಶತರುದ್ರಾಭಿಷೇಕ ಮತ್ತು ಸರ್ವ ಸೇವೆ.

* ದಿನಾಂಕ 11–06–2022ನೇ ಶನಿವಾರ ಬೆಳಿಗ್ಗೆ ಉಜಿರೆ ನಿಡಿಗಲ್ ಬಸದಿ ಶ್ರೀ ಶಾಂತಿನಾಥ ಸ್ವಾಮಿ ಸನ್ನಿಧಿಯಲ್ಲಿ ನಾವು ಮಾಡಿಸುವ ಪಂಚಾಮೃತಾಭಿಷೇಕ ಹಾಗೂ ಬ್ರಹ್ಮಯಕ್ಷ ಪೂಜೆ.

* ದಿನಾಂಕ 11–06–2022ನೇ ಶನಿವಾರ ಮಧ್ಯಾಹ್ನ ಉಜಿರೆ ಶ್ರೀ ಜನಾರ್ದನ ಸ್ವಾಮಿ ಸನ್ನಿಧಿಯಲ್ಲಿ ನಾವು ಮಾಡಿಸುವ ವಿಶೇಷ ಅಲಂಕಾರ ಪೂಜೆ ಹಾಗೂ ತದನಂತರ ಶ್ರೀ ಕೃಷ್ಣಾನುಗ್ರಹ ಸಭಾಭವನದಲ್ಲಿ ಸಮಾರಾಧನೆ ನಡೆಯಲಿರುವುದು.

* ದಿನಾಂಕ 12–06–2022ನೇ ಆದಿತ್ಯವಾರ ಮಧ್ಯಾಹ್ನ ದರೆಗುಡ್ಡೆ ಇಟಲ ಶ್ರೀ ಸೋಮನಾಥೇಶ್ವರ ಸನ್ನಿಧಿಯಲ್ಲಿ ನಾವು ಮಾಡಿಸುವ ರುದ್ರಾಭಿಷೇಕ ಹಾಗೂ ಮಹಾಪೂಜೆ.

ಮುಂತಾದ ಧರ್ಮಕಾರ್ಯಗಳು ಜರಗಲಿರುವುದರಿಂದ ಸದ್ಧರ್ಮ ಬಂಧುಗಳಾದ ತಾವೆಲ್ಲರೂ ಆಗಮಿಸಿ, ಪೂಜಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ, ಶ್ರೀ ಜಿನಗಂಧೋದಕ ಪ್ರಸಾದವನ್ನು ಸ್ವೀಕರಿಸಿ, ನಮಗೂ ಕೊಡಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುವ

ಶ್ರೀಮತಿ ಸೋನಿಯಾ ವರ್ಮ
ಮೃತರ ಪತ್ನಿ
ಮತ್ತು ಮಕ್ಕಳು


ನಿರ್ಮಲ್ ಕುಮಾರ್ ಬಿ.
ಸಹೋದರ ಮತ್ತು ಸಹೋದರಿಯರು
ಹಾಗೂ ಕುಟುಂಬಸ್ಥರು
ಪೆರಾಡಿಬೀಡು

ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರಾಗಿರುವ ಡಾ॥ ಡಿ. ವೀರೇಂದ್ರ ಹೆಗ್ಗಡೆಯವರು ದಿವಂಗತ ಡಾ. ಬಿ. ಯಶೋವರ್ಮರವರ ಸ್ಮರಣಾರ್ಥ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಸಸ್ಯಶಾಸ್ತ್ರ ವಿಭಾಗದಲ್ಲಿ ಮತ್ತು ಕ್ರೀಡಾ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಪ್ರತಿವರ್ಷ ಚಿನ್ನದ ಪದಕ ನೀಡಿ ಗೌರವಿಸಲಿರುವರು.



ಕುಟುಂಬದೊಂದಿಗೆ

ಧರ್ಮಪತ್ನಿ ಶ್ರೀಮತಿ ಸೋನಿಯಾವರ್ಮ ಹಾಗೂ ಮಕ್ಕಳಾದ
ಪೂರನ್‌ವರ್ಮ ಮತ್ತು ಕೇಯೂರ್‌ವರ್ಮರೊಂದಿಗೆ



ಮರೆತೇವೆಂದರೆ...!

■ **ಶ್ರೀಮತಿ ಹೇಮಾವತೀ ವೀ. ಹೆಗ್ಗಡೆಯವರು**
ಶ್ರೀ ಕ್ಷೇತ್ರ ಧರ್ಮಸ್ಥಳ

"ಜಾತಸ್ಯ ಮರಣಂ ಧ್ರುವಂ" ಎಂಬ ಮಾತು ಸತ್ಯ ಆದ್ರೂ ಮರಣ ಆಯಾ ಕಾಲಕ್ಕೆ ಬಂದ್ರೆ ಅದು ಚಂದ. ಆಗ ಅದು ಮೃತ್ಯು ಮಹೋತ್ಸವವೆನಿಸುತ್ತದೆ. ಅಲ್ಪಕಾಲದ ಅಸೌಖ್ಯದಿಂದ ನಿಧನ ಹೊಂದಿದ ಯಶೋವರ್ಮನ ಮನದ ತುಂಬಾ ಇನ್ನೂ ಆಸೆಗಳಿದ್ದವು, ಕನಸುಗಳಿದ್ದವು.

'ಶರೀರ' ಆತನಾದರೆ, ಆತನ 'ಆತ್ಮ' ಕಾಲೇಜು ಎಂಬಂತಹ ಅವಿನಾಭಾವ ಸಂಬಂಧ. ಬೆಳಿಗ್ಗೆ ಹೊರಟರೆ ಬರುವಾಗ ರಾತ್ರಿ ಎಂಟು ಎಂಟೂವರೆ ಆಗ್ತಿತ್ತು. ಆತನ ಮಾತು, ಊಟ, ಉಸಿರು, ಕನಸು ಎಲ್ಲವೂ ಕಾಲೇಜೇ ಆಗಿತ್ತು.

ಪ್ರತಿ ಸಣ್ಣ ಪುಟ್ಟ ವಿಷಯಗಳನ್ನು ಅರಿಯುವ ಮಗು ಸಹಜ ಕುತೂಹಲ ಆತನದಾಗಿತ್ತು. ಯಾವುದೇ ಒಂದು ಹೊಸ ವಿಷಯ, ಶಬ್ದ ಸಿಕ್ಕರೆ ತಕ್ಷಣ Googleಗೆ ಹೋಗಿ ಅದನ್ನು ತಿಳಿದುಕೊಳ್ಳುವ ಹಂಬಲ. ಆತ ಪುಸ್ತಕ ಪ್ರೇಮಿ ಎನ್ನುವುದಕ್ಕೆ ಮನೆಯಲ್ಲಿರುವ ಲೈಬ್ರೇರಿಯೇ ಸಾಕ್ಷಿ. ಪ್ರತೀ ಪುಸ್ತಕ ತೆರೆದು ನೋಡಿದರೂ, ಅದನ್ನು ಓದಿ ಮುಖ್ಯ ವಿಚಾರಗಳಿಗೆ underline ಹಾಕಿಟ್ಟ ಗುರುತಿರುತ್ತದೆ. ಅದು ಸಸ್ಯಶಾಸ್ತ್ರ, ಇತಿಹಾಸ, ಮನಃಶಾಸ್ತ್ರ, ವಿಜ್ಞಾನ, ಧರ್ಮ, ಕಾವ್ಯ, ಕವನ ಯಾವುದೇ ಇರಲಿ ಅವೆಲ್ಲವೂ ಅವನ ಆಸಕ್ತಿಯ ವಿಷಯವೆ. ಅವನು ಓದುವುದಷ್ಟೆ ಅಲ್ಲ ಓದುವಾಗ ಒಂದು ಹೊಸ ವಿಚಾರ ಸಿಕ್ಕಿದ್ರೆ, ತಕ್ಷಣ ಫೋನ್ ಮಾಡಿ ನನಗೆ ತಿಳಿಸುತ್ತಿದ್ದ. ಅವನ ಫೋನ್ ಬಂದಾಗ ಹತ್ತಿರ ಕಾಗದ, ಪೆನ್ನು ಇಟ್ಟುಕೊಂಡರೆ ಸಾಕಷ್ಟು ಹೊಸ ವಿಚಾರಗಳ ಸಂಗ್ರಹವಾಗುತ್ತಿತ್ತು. ಆಸ್ಪತ್ರೆಯಲ್ಲಿರುವಾಗಲೂ ಸುಮಾರು 40 ಪುಸ್ತಕ ಓದಿ ಮುಗಿಸಿದ್ದಲ್ಲದೆ ಹೊಸ ವಿಚಾರವನ್ನು ಅಲ್ಲಿಂದಲೇ ಫೋನ್ ಮೂಲಕ ತಿಳಿಸುತ್ತಿದ್ದ.

ಆತನ ಕಾಲದಲ್ಲಿ ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ಅನ್ವೇಷಣೆಗಳನ್ನು ಮಾಡಿ ಅವನ್ನು ಪ್ರಯೋಗಿಸಿ ಯಶಸ್ವಿ ಆಗಿದ್ದ. ಇನ್ನೂ ಮಾಡೋದು ಬಹಳಷ್ಟು ಇದ್ದವು. ಅವೆಲ್ಲವನ್ನೂ ಆರೋಗ್ಯ ಸುಧಾರಿಸಿದ ಮೇಲೆ ಬಂದು ಮಾಡಬೇಕು. ನಾನು ಬರ್ತೇನೆ ಎಂಬ ಅದಮ್ಯ ಆಸೆ, ಆಸಕ್ತಿಗಳೇ ಕೊನೆವರೆಗೆ ಆತನಿಗೆ ತನ್ನ ಬಗ್ಗೆ, ತನ್ನ ಮಡದಿ, ಮಕ್ಕಳ ಬಗ್ಗೆ ಚಿಂತಿಸದಂತೆ ತಡೆದಿದ್ದವು. ಕೆಲವೊಮ್ಮೆ ತುಂಬಾ ಚಿಂತೆಯಲ್ಲಿದ್ದಾಗ "ಏನು ಯೋಚನೆ? ಮನೆ ಬಗ್ಗೆ, ಮಕ್ಕಳ ಬಗ್ಗೆ ಯೋಚಿಸ್ತಿದ್ದೀರಾ?" ಎಂಬ ಮಡದಿಯ ಪ್ರಶ್ನೆಗೆ "ಅಲ್ಲ ಕಾಲೇಜ್ ಬಗ್ಗೆ ಚಿಂತೆ ಆಗ್ತಿದೆ" ಅನ್ನುತ್ತಿದ್ದನಂತೆ. ಕಾಲೇಜು ಎದುರು ನಿಂತು ನೋಡಿದ್ರೆ "ಬೆಳೆದು ನಿಂತ ಮಗನನ್ನು ನೋಡಿದಷ್ಟು ಸಂತೋಷ ಆಗ್ತಿದೆ" ಎಂದು ಹೆಮ್ಮೆ ಪಡುತ್ತಿದ್ದ. ಹಳ್ಳಿಯ ಕಾಲೇಜಿನ ಪ್ರಾಂಶುಪಾಲರಾಗಿ ಉಜಿರೆಗೆ ಬಂದವ ತನ್ನ ಶೈಕ್ಷಣಿಕ ಪ್ರಯೋಗ, ಅನ್ವೇಷಣೆಗಳಿಂದ ಶಿಕ್ಷಣಕ್ಕೊಂದು ಹೊಸ ರೂಪ ಕೊಟ್ಟಿದ್ದ.

ವಿದ್ಯಾರ್ಥಿಗಳ ಮೇಲಿನ ಪ್ರೀತಿ, ವೈವಿಧ್ಯಮಯ ಆಸಕ್ತಿಗಳಿಂದಾಗಿ ಬರೀ ಶಿಕ್ಷಣ ಕ್ಷೇತ್ರದಲ್ಲಷ್ಟೆ ಅಲ್ಲದೆ ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಕ, ಧಾರ್ಮಿಕ ಕ್ಷೇತ್ರಗಳೆಲ್ಲದರಲ್ಲೂ ತನ್ನ ಛಾಪು ಮೂಡಿಸಿದ್ದ. ಜನಸಮೂಹದ ಮನ ಗೆದ್ದಿದ್ದ. ಆತನ ನಗುಮೊಗದ ಹಿಂದೆ ಒಂದು ಶುಭ್ರ, ಮಗು ಸಹಜ ಮುಗ್ಧ ಮನಸ್ಸೂ ಇತ್ತು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕೆಂಬುದೆ ಆತನ ಅನುದಿನದ ತುಡಿತ. ಇನ್ನು ಮುಂದಿನ 10 ವರ್ಷಗಳಲ್ಲಿ ಶಿಕ್ಷಣ ಹೇಗಿರುತ್ತದೆ ಎನ್ನುವ ದೂರದೃಷ್ಟಿಯಿಂದ ಈಗಲೇ ತಯಾರಿ ನಡೆಸಿದ್ದ. ಅದರ ಬಗ್ಗೆಯೇ ಮಾತು. ಆತ ಆರಂಭಿಸಿದ್ದ. ಇ–ಲೆಕ್ಚರ್, ರೆಕಾರ್ಡೆಡ್ ಲೆಕ್ಚರ್, ಆನ್ಲೈನ್ ಪರೀಕ್ಷೆ, ಗ್ರಂಥಾಲಯದಲ್ಲಿ ಇ–ಬುಕ್ ವ್ಯವಸ್ಥೆ, ಲ್ಯಾಂಗ್ವೇಜ್ ಲ್ಯಾಬ್, ವಿದ್ಯಾರ್ಥಿ ಸಂಶೋಧನಾ ಕೇಂದ್ರ ಹೀಗೆ ಹತ್ತು–ಹಲವು ಆವಿಷ್ಕಾರಗಳಿಂದಾಗಿ ಕಾಲೇಜು ಬಿಟ್ಟು ಕತ್ತಲಾಗುವವರೆಗೂ ವಿದ್ಯಾರ್ಥಿಗಳು ಕಾಲೇಜು, ಕಲಾಕೇಂದ್ರ, ಲೈಬ್ರೆರಿಯ ಆವರಣದಲ್ಲಿ ತಿರುಗಾಡುವುದು ಕಂಡು ಬರುತ್ತಿತ್ತು. ಮೊನ್ನೆ ಕಾಸರಗೋಡಿನ ವಿದ್ಯಾರ್ಥಿಯೊಬ್ಬ ಫೋನ್ ಮಾಡಿ "ನಾನು ಇಂಥಾ Subjectನ ತರಗತಿಗೆ ಹೋಗಿರಲಿಲ್ಲ. ಆದ್ದರಿಂದ ಪರೀಕ್ಷೆ ಸಮಯ ನಾನು ಆತಂಕದಲ್ಲಿದ್ದೆ. ಆದರೆ ನಿಮ್ಮ ರೆಕಾರ್ಡೆಡ್ ಲೆಕ್ಚರ್‌ನಿಂದಾಗಿ ನನಗೆ ಒಳ್ಳೆಯ ಮಾರ್ಗದರ್ಶನ ಸಿಕ್ಕಿತ್ತು. ಅದಕ್ಕಾಗಿ "ಥ್ಯಾಂಕ್ಯೂ ಸರ್" ಅಂತ ಫೋನ್ ಮಾಡಿದ್ದನ್ನು ನೆನಪಿಸಿಕೊಳ್ಳುತ್ತಿದ್ದ.

ನ್ಯಾಕ್ ಸಂಸ್ಥೆಯಿಂದ 3 ಸಲ 'ಎ' ಗ್ರೇಡ್ ಪಡೆದ ಕಾಲೇಜು ಆಗಿರುವುದರಿಂದ ಎಲ್ಲಿ ನ್ಯಾಕ್ Visit ಮಾಡ್ತಾರೆ ಅಲ್ಲೆಲ್ಲಾ ಯಶೋವರ್ಮನ ಸಲಹೆ, ಮಾರ್ಗದರ್ಶನ ಬೇಕೇ ಬೇಕು.

ಶಾಲಾ ಯೂನಿಫಾರ್ಮ್ ಹಾಕಿಕೊಂಡ ಚಿಕ್ಕ ಮಕ್ಕಳಿರಲಿ, ದೊಡ್ಡವರೇ ಇರಲಿ ಅವರನ್ನು ನೋಡಿದ ತಕ್ಷಣ ಅವನೊಳಗಿನ ಶಿಕ್ಷಕ ಜಾಗೃತನಾಗುತ್ತಿದ್ದ. ಪರಿಸರದ ಬಗ್ಗೆ ಆತನಿಗೆ ಅಪಾರ ಕಾಳಜಿ. ಮಕ್ಕಳಲ್ಲೂ ಈ ಕಾಳಜಿ ಬೆಳೆಯುವಂತೆ ನೋಡಿಕೊಂಡಿದ್ದ. ಆಸ್ಪತ್ರೆಗೆ ಹೊರಡುವ ಮೊದಲು ನಾನು ಹೋಗಿದ್ದಾಗ ತನ್ನ ಬಗ್ಗೆ, ತನ್ನ ಕಾಯಿಲೆ ಬಗ್ಗೆ ಯಾವುದೇ ವಿಚಾರ ಪ್ರಸ್ತಾಪಿಸದ ಅವನು ಮಣ್ಣಿನ ಸವಕಳಿ, ಸಂರಕ್ಷಣೆ ಬಗ್ಗೆ ತಾನೊಂದು "ಹಸಿರು ಸೇನೆ" ಕಟ್ಟಿ ಅನೇಕ ಪ್ರಯೋಗಗಳನ್ನು ಹೇಳಿಕೊಟ್ಟಿದ್ದೇನೆ. ಅದನ್ನು ನೀವು ಉದ್ಘಾಟನೆ ಮಾಡಬೇಕೆಂದು ಹೇಳಿ ಹೋಗಿದ್ದ. ಉಜಿರೆಗೆ ಹೋಗುವಾಗ ಇಕ್ಕೆಲಗಳಲ್ಲೂ ಕಣ್ ಸೆಳೆಯುವ ಹಸಿರು ಹುಲ್ಲು, ಹೂವು ಆತನ ಸೌಂದರ್ಯೋಪಾಸನೆಯ ದ್ಯೋತಕವಾಗಿ ಕಂಗೊಳಿಸುತ್ತಿದೆ.

ಆತ ಒಮ್ಮೆ ಬೆನ್ನು ತಟ್ಟಿದ್ದು, ಸಂದರ್ಭಕ್ಕೆ ಸಹಾಯ ಮಾಡಿದ್ದು, ಶಹಭಾಷ್ ಹೇಳಿದ್ದು, ಬೈಯದೇ ತಪ್ಪು ತಿದ್ದಿದ್ದು, ಸಣ್ಣ ಪ್ರೇರಣೆಯಿಂದ ಬದುಕು ಬದಲಾಗಿದ್ದನ್ನು ನೆನೆಸಿಕೊಂಡು ಮಕ್ಕಳು ಭಾವುಕರಾಗಿ ಕಣ್ಣೀರು ತುಂಬಿಕೊಳ್ತಾರೆ ಅಂದ್ರೆ, ಅನವರತ ಆತನೊಂದಿಗೆ ಇರುವ ಹೆಂಡತಿ, ಮಕ್ಕಳು, ಅಕ್ಕ–ತಂಗಿ, ಅಣ್ಣ ತಮ್ಮಂದಿರು ಆತನ ಒಡನಾಟವನ್ನು ಮರೆಯುವುದೆಂತು. ಬಹುಶಃ ಕೈಯಿಂದ ಮುಟ್ಟದೆ ಜನರನ್ನು ಮುಟ್ಟಲಾಗುವುದು ಪ್ರೀತಿಗೆ ಮಾತ್ರ ಸಾಧ್ಯ.

ಮೊನ್ನೆ ಬಂಧುಗಳೆಲ್ಲಾ ಸೇರಿದಾಗ ಮುಂದಿನ ಕೆಲಸ ಕಾರ್ಯಗಳ ಬಗ್ಗೆ ಚರ್ಚೆ ನಡೆಯುತ್ತಿತ್ತು. ಆಗ ಮಗ ಪೂರನ್ ಹೇಳುತ್ತಿದ್ದ "ನನಗೆ ಈಗಲೂ ಅಯ್ಯನ ಹತ್ತಿರ ಕೇಳುವ ಅನ್ನಿಸುತ್ತಿದೆ" ಎನ್ನುತ್ತಿದ್ದ. ಅವನೊಬ್ಬನಿಗಷ್ಟೇ ಅಲ್ಲ ಮನೆ ಮಂದಿಗೆ, ಮಕ್ಕಳಿಗೆಲ್ಲಾ ತಮ್ಮ ಯಾವುದೇ ಸಮಸ್ಯೆಗಳ ಪರಿಹಾರಕ್ಕೆ ಯಶಮಾಮ, ಯಶಚಿಕ್ಕಯ್ಯ ಇದ್ದೇ ಇದ್ರು. ರಜೆ ಇರಲಿ, ಹೊಸ ವರ್ಷ ಆಚರಣೆ ಇರಲಿ, ಯಾವುದೇ ಮದುವೆ ಇರಲಿ ಮಕ್ಕಳೆಲ್ಲಾ ಗಂಟುಮೂಟೆ ಕಟ್ಟಿಕೊಂಡು ಮೊದಲು ಬರುವುದು ಉಜಿರೆಯ 'ನಿನಾದ'ಕ್ಕೆ. ಕಾರಣ ಅಲ್ಲಿ ಗಂಡ-ಹೆಂಡಿರ ಪ್ರೀತಿಯ ಸ್ವಾಗತಕ್ಕೆ ಮರುಳಾಗದವರಿಲ್ಲ. ಅದು ಎಲ್ಲರಿಗೂ ತವರುಮನೆ ಇದ್ದಂತೆ. ನನಗಾದರೂ ಸ್ವಲ್ಪ ಅನಾರೋಗ್ಯ ಅನ್ನಿಸಿದರೆ ತಕ್ಷಣ ಹೋಗುವುದು ಯಶನ ಮನೆಗೆ. ಇಬ್ಬರ ಆರೈಕೆಯಿಂದ ಗುಣಮುಖಳಾಗಿ ಹಿಂತಿರುಗುತ್ತಿದ್ದೆ. ತಲೆ ನೇವರಿಸುತ್ತಾ, ಬೆನ್ನು ತಟ್ಟುತ್ತಾ ಅವನು ತೋರುತ್ತಿದ್ದ ಪ್ರೀತಿಗೆ ಮರುಳಾಗದವರಿಲ್ಲ. ಸೋನಿಯಾಳಿಗಂತೂ ಉಂಡು ಹೋದ್ರೆ ಸಾಲದು, ಕೊಂಡೂ ಹೋಗ್ಬೇಕು. ಅದು ಅಪರೂಪದ ದಾಂಪತ್ಯ. ಇಬ್ಬರದೂ ತುಂಬಿದ ಕೈ, ತುಂಬಿದ ಮನಸ್ಸು. ಆತ ನಡೆದ ದಾರಿ, ಬಿಟ್ಟು ಹೋದ ಮೌಲ್ಯಗಳೇ ಮಕ್ಕಳಿಗೆ ದಾರಿದೀಪವಾಗಲಿ.

ಜೈನಧರ್ಮದ ಬಗ್ಗೆಯೂ ಅಪಾರ ವಿಶ್ವಾಸ, ಆಳವಾದ ಅಧ್ಯಯನ ನಡೆಸಿದ್ದ. 'ಜೈನಧರ್ಮ ಹೇಗೆ ವೈಜ್ಞಾನಿಕವಾದದ್ದು' ಎಂಬುದನ್ನು ವಿವರಿಸುತ್ತಿದ್ದ. ಅಮ್ಮನ ನೆನಪಿಗೆಂದು ಪ್ರಕಟಿಸಿದ 'ತತ್ತ್ವಾರ್ಥ ಸೂತ್ರ' ಬಾಯಿಪಾಠ ಮಾಡಿದಷ್ಟೇ ಅಲ್ಲ. ಅದರ ಟೀಕಾ ಗ್ರಂಥವನ್ನು ಮುಂದಿಟ್ಟುಕೊಂಡು ಪ್ರತಿ ಸೂತ್ರಗಳ ಅರ್ಥ ಹುಡುಕುತ್ತಿದ್ದ. 'ರತ್ನಕರಂಡಕ ಶ್ರಾವಕಾಚಾರ'ದ ಶ್ಲೋಕಗಳನ್ನೂ ಹೇಳುತ್ತಿದ್ದ. ಬೆಳಿಗ್ಗೆ ಅಷ್ಟವಿಧಾರ್ಚನೆಯೊಂದಿಗೆ 'ಶಾಂತ್ಯಷ್ಟಕ', 'ಶ್ರಾವಕ ಪ್ರತಿಕ್ರಮಣ' ಇತ್ಯಾದಿ ಓದುತ್ತಿದ್ದರೆ ರಾತ್ರಿ ಮನೆಯಲ್ಲಿ ಭಕ್ತಾಮರ ಸ್ತೋತ್ರ ಪಠಣ, ಭಜನೆ, ಸಾಮಾಯಿಕ ಪಾಠ ಇತ್ಯಾದಿ ನಡೆಯುತ್ತಿತ್ತು. ಮಂಗಲಾಷ್ಟಕ ಓದುವುದಷ್ಟೇ ಅಲ್ಲ ಅದರ ಅರ್ಥವನ್ನೂ ಮಕ್ಕಳಿಗೂ ವಿವರಿಸುತ್ತಿದ್ದ. ಕೊರೋನಾ ಸಂದರ್ಭದಲ್ಲಿ ಆನ್ಲೈನ್‌ನಲ್ಲಿ ದೂರದೂರಿನಲ್ಲಿರುವ ಮನೆ ಮಕ್ಕಳಿಗೆ ಜೈನಧರ್ಮದ ಪಾಠ ಮಾಡುತ್ತಿದ್ದ. ಒಟ್ಟಿನಲ್ಲಿ ಶ್ರಾವಕರ ಷಟ್ಕರ್ಮಗಳೆಲ್ಲವನ್ನೂ ಮೈಗೂಡಿಸಿಕೊಂಡು ನಿಜವಾದ ಅರ್ಥದಲ್ಲಿ ಶ್ರಾವಕನೇ ಆಗಿದ್ದ. ಸಮ್ಮೇದ ಶಿಖರ್ಜಿ ಯಾತ್ರೆಗೆ ಹೋಗಿ ಬಂದು ಎಷ್ಟೋ ಸಮಯ ಅನಾಯಾಸವಾಗಿ ಬೆಟ್ಟ ಏರಿದ್ದು ಅಲ್ಲಿಯ ವಾತಾವರಣ, ತನಗಾದ ಮನಃ ಪ್ರಸನ್ನತೆ ಬಗ್ಗೆ ಹೇಳುತ್ತಾ, 'ಮತ್ತೆ ಮತ್ತೆ ಹೋಗಬೇಕೆನಿಸುತ್ತದೆ' ಅನ್ನುತ್ತಿದ್ದ. ಹಬ್ಬ ಹರಿದಿನಗಳನ್ನು ಆಚರಿಸುವುದರಲ್ಲಿ ದಂಪತಿಗಳಿಬ್ಬರಿಗೂ ಬಹಳ ಉತ್ಸಾಹ. ಮನೆ ತುಂಬಾ ನೆಂಟರು ಇಷ್ಟರು ಇದ್ದು, ಅವರಿಗೆ ಆದರ-ಸತ್ಕಾರ ಮಾಡುವುದು ಅವರ ನೆಚ್ಚಿನ ಕೆಲಸ. ಗದ್ದೆ ನೇಜಿ ಕೊಯ್ಲು ಸಂದರ್ಭದಲ್ಲಿ, ದೀಪಾವಳಿಯಂದು ಎಲ್ಲಾ ಆಚರಣೆಗಳನ್ನು ನೆರವೇರಿಸಿ ಕೆಲಸದವರಿಗೆ ಸ್ವತಃ ಪಾಯಸದಡುಗೆ ಬಡಿಸಿ ನಿಜವಾದ ಅರ್ಥದಲ್ಲಿ ಕೃಷಿಕನೇ ಆಗುತ್ತಿದ್ದ.

ಮನೆ ವಾಸ್ತು ನೋಡಿದವರು "ಇದು ಮನೆವಾಸ್ತು ಅಲ್ಲ, ಛತ್ರದ ವಾಸ್ತು" ಅನ್ನುತ್ತಿದ್ದರು. ಅವರ ಮಾತಿನಂತೆ ಸದಾ ಮನೆ ನೆಂಟರಿಷ್ಟರಿಂದ ತುಂಬಿರುತ್ತಿತ್ತು. ಬಾಯ್ತುಂಬಾ ಮಾತಾಡೋ ಯಜಮಾನ, ಕೈತುಂಬಾ ಬಡಿಸಿ ಸಂತೃಪ್ತಿ ಪಡೋ ಯಜಮಾನ್ತಿ. ಇದೇ ಅವರ

ಗೃಹಸ್ಥಧರ್ಮದ ಗುಟ್ಟು, ಊಟದ ಟೇಬಲ್ ಅಂದ್ರೆ ಅದು ಸದಾ ನಾನಾ ರೀತಿಯ ಚರ್ಚೆ, ಹಾಸ್ಯ, ವಿಚಾರ ವಿನಿಮಯಗಳ ತಾಣ. ಉಂಡ ಕೈ ಒಣಗುವವರೆಗೆ ಆಳಕ್ಕಿಳಿಯುವ ವಿಷಯಗಳ ವಿಸ್ತಾರ. ರಾತ್ರಿ ಕೆಲಸ ಮುಗಿಸಿ ತಡವಾಗಿ ಮನೆಗೆ ಬಂದರೆ ಮನೆ ಮಂದಿಯೆಲ್ಲಾ ಎಷ್ಟೇ ಸಿಟ್ಟಿನಲ್ಲಿರಲಿ ಒಳಗೆ ಬಂದ ತಕ್ಷಣ ಒಂದು ನಗು, ಒಂದು ಹಾಸ್ಯದ ಮಿಂಚಿನೊಂದಿಗೆ ಎಲ್ಲರನ್ನೂ ನಗಿಸುತ್ತಿದ್ದ. ಒಟ್ಟು ಕುಟುಂಬಕ್ಕೂ ಒಂದು ಆಧಾರ ಸ್ತಂಭ, ನೆರಳಿನಂತಿದ್ದ. ಯಾವುದೇ ಸಮಸ್ಯೆ ಬರಲಿ ಯಶಣ್ಣನ ಹತ್ತಿರ ಕೇಳೋಣ ಅಂದ್ರೆ ಅಲ್ಲಿ ಪರಿಹಾರ ಇದೆ ಎಂದರ್ಥ. ಕುಟುಂಬದಲ್ಲಿ ಯಾರೂ ಒಳ್ಳೆಯವರು, ಕೆಟ್ಟವರು ಎಂಬ ಭೇದವಿಲ್ಲದೆ ಎಲ್ಲರಲ್ಲೂ ಸಮಾನ ಪ್ರೀತಿ ಹಂಚಿದ ಅಜಾತಶತ್ರು. ಉಜಿರೆಯ 'ನೀರಚಿಲುಮೆ' ಬಳಿ ಇರುವ 'ನಿನಾದ'ಕ್ಕೆ ಇವನು ಬಂದ ಬಳಿಕ ಅಲ್ಲಿ ಮರಗಿಡ, ಹೂವು, ಹಣ್ಣುಗಳಾಗಿ ನಿರಂತರ ಹಕ್ಕಿಗಳ ನಿನಾದ, ನೀರಿನ ಹರಿವಿನೊಂದಿಗೆ ನೀರ ನಿನಾದ. ಅವ ಮನೆಯೊಳಗಿದ್ದರೆ ನಗುವಿನ ನಿನಾದ, ದಿನ ನಿತ್ಯದ ಪೂಜೆ, ಭಜನೆಗಳಲ್ಲಿ ಗಂಟೆಯ ನಿನಾದ, ಸಂಬಂಧಗಳನ್ನು ಬೆಸೆಯುವ ಪ್ರೀತಿಯ ನಿನಾದ, ಹಟ್ಟಿಕೊಟ್ಟಿಗೆಯಲ್ಲಿ ಹಸು-ಕರುಗಳ ಕೊರಳ ಗೆಜ್ಜೆ ನಿನಾದದೊಂದಿಗೆ ಆ ಮನೆಗೆ ಆ ಹೆಸರು ಸಾರ್ಥಕವೆನಿಸಿತ್ತು.

ಯಶೋವರ್ಮ ಎಂದು ಅಪ್ಪಾಜಿಯವರು ಇಟ್ಟ ಹೆಸರು ಆತನಿಗೆ ಅನ್ವರ್ಥನಾಮವಾಯ್ತು. ಸಂಸಾರ ಮತ್ತು ಶಿಕ್ಷಣ ಕ್ಷೇತ್ರಗಳೆರಡರಲ್ಲೂ ಯಶಸ್ವಿಯಾದ. ಅವನ ನಿಧನದ ಸುದ್ದಿ ಕೇಳಿದ ತಕ್ಷಣ ಅವರು (ಖಾವಂದರು) ಒಂದೇ ಮಾತು ಹೇಳಿದ್ದರು "ಅವನಿಗೆ Substitute ಇಲ್ಲ".

ನಮ್ಮವನು ಎಂದಾಗ ಆತನ ಬಗ್ಗೆ ಪ್ರತಿಯೊಂದು ವಿಚಾರವನ್ನೂ ನಾವು ಉತ್ಪ್ರೇಕ್ಷೆಯಾಗಿ ಬಣ್ಣಿಸಬಹುದು. ಆದರೆ ಅಂದು ಉಜಿರೆ, ಬೆಳ್ತಂಗಡಿ ಜನತೆ, ವಿದ್ಯಾರ್ಥಿಗಳು ಕೈಯಲ್ಲಿ ಹೂವು, ಕಣ್ಣಲ್ಲಿ ಅಶ್ರುತರ್ಪಣದೊಂದಿಗೆ ಭಾವತುಂಬಿ ಬರಮಾಡಿಕೊಂಡ ದೃಶ್ಯದಲ್ಲಿ ಯಾವುದೇ ಉತ್ಪ್ರೇಕ್ಷೆ ಇರಲಿಲ್ಲ.

ಆತ ಒಂದು quote ಹೇಳುತ್ತಿದ್ದ– Oh God ! Whats I am today is your gift to me, what will make me rich, my Gift to you ಎಂಬ ಮಾತಿನಂತೆ 'ದೇವರು ಕೊಟ್ಟ ಆಯುಷ್ಯ, ಬುದ್ಧಿ, ಸಂಪತ್ತನ್ನು ಉಪಯೋಗಿಸಿ ಸಮಾಜಕ್ಕಷ್ಟೇ ಅಲ್ಲ ದೇವರಿಗೂ ಉಡುಗೊರೆ ಕೊಟ್ಟು ಹೋಗಿದ್ದಾನೆ' ಎನ್ನುವುದಕ್ಕೆ ವಿದಾಯದಂದು ಸೇರಿದ ಜನ ಸಾಗರವೇ ಸಾಕ್ಷಿ. ಆತ ಇನ್ನಿಲ್ಲವಾದರೂ ಆತ ನಮ್ಮವನಾಗಿದ್ದ ಎಂಬ ಹೆಮ್ಮೆ ನಮ್ಮದಾಗಿದೆ.

ಹಗಲಿಡೀ ಮೇಸ್ಟ್ರು ಬೋರ್ಡ್ ತುಂಬಾ ಬರೆದಿಟ್ಟ ಹೊಸ ವಿಚಾರಗಳನ್ನು ಅವರು ಹೋದ ತಕ್ಷಣ ಮಕ್ಕಳು ಬಂದು ಅಳಿಸುವಂತೆ ಆತನ ರೂಪ, ಕನಸು, ಅಗಾಧ ಜ್ಞಾನ ವೈವಿಧ್ಯತೆಯನ್ನು ವಿಧಿ 'ಸಾವು' ಎಂಬ ನಿರ್ಥಯ Duster ನಿಂದ ಒಂದೇ ಕ್ಷಣದಲ್ಲಿ ಅಳಿಸಿಬಿಟ್ಟಿತು ಎಂದರೆ ನಂಬಲಾಗುವುದಿಲ್ಲ. ಇಂಥಾ ವಿನಮ್ರತೆಯ ಸುಂದರ ಸೌಜನ್ಯದ ಮೂರ್ತಿಯನ್ನು ಮರೆಯಬೇಕೆಂದರೂ ಮರೆಯುವುದು ಹೇಗೆ ?

***



ದಣಿವರಿಯದ ಚೇತನ

■ **ಡಾ. ಬಿ. ಪಿ. ಸಂಪತ್ ಕುಮಾರ**
ಕುಲಸಚಿವ (ಆಡಳಿತ) ಮತ್ತು
ಕನ್ನಡ ವಿಭಾಗ ಮುಖ್ಯಸ್ಥ,
ಶ್ರೀ ಧ.ಮಂ.ಕಾಲೇಜು (ಸ್ವಾಯತ್ತ), ಉಜಿರೆ

ಧರ್ಮಸ್ಥಳದ ಕೀರ್ತಿಶೇಷ ಶ್ರೀ ರತ್ನವರ್ಮ ಹೆಗ್ಗಡೆಯವರಿಂದ ಸ್ಥಾಪಿತವಾಗಿ, ಈಗಿನ ಧರ್ಮಾಧಿಕಾರಿಗಳಾಗಿರುವ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರಿಂದ ಪೋಷಿಸಲ್ಪಡುತ್ತಿರುವ ಉಜಿರೆಯ ಶ್ರೀ ಧ. ಮಂ. ಕಾಲೇಜು ಆರಂಭವಾಗಿದ್ದು 1966ರಲ್ಲಿ. ಮಹಾವಿದ್ಯಾಲಯದ ಸ್ಥಾಪಕ ಪ್ರಾಂಶುಪಾಲರಾಗಿ 27 ವರ್ಷಗಳ ಕಾಲ ಸೇವೆ ಸಲ್ಲಿಸಿ ಪ್ರೊ. ಎಸ್. ಪ್ರಭಾಕರ್ ಅವರು 1993ರಲ್ಲಿ ನಿವೃತ್ತರಾದರು. ಗ್ರಾಮೀಣ ಪ್ರದೇಶದ ಕಾಲೇಜಿಗೆ ರಾಜ್ಯಮಟ್ಟದಲ್ಲಿ ಎತ್ತರದ ಸ್ಥಾನವನ್ನು ಕಲ್ಪಿಸಿಕೊಟ್ಟು ಅತ್ಯುನ್ನತ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸುವಲ್ಲಿ ಅವರ ಪಾತ್ರ ಹಿರಿದಾಗಿತ್ತು. ಅವರ ಬಳಿಕ ಆ ಉನ್ನತ ಸ್ಥಾನಕ್ಕೆ ಡಾ. ಬಿ. ಯಶೋವರ್ಮರು ಅರ್ಹರೆಂದು ಭಾವಿಸಿದ ಆಡಳಿತ ಮಂಡಳಿಯು ದೂರದ ಧಾರವಾಡದ ಜೆ.ಎಸ್.ಎಸ್. ಮಹಾವಿದ್ಯಾಲಯಲ್ಲಿ ಸಸ್ಯಶಾಸ್ತ್ರ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ ಅವರನ್ನು ಉಜಿರೆಗೆ ಬರಮಾಡಿಕೊಂಡು ಆ ಉನ್ನತ ಜವಾಬ್ದಾರಿಯನ್ನು ವಹಿಸಿತು. ಡಾ. ಬಿ. ಯಶೋವರ್ಮ ಅವರು 1993ನೆಯ ಇಸವಿಯಲ್ಲಿ ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡು 23 ವರ್ಷಗಳಷ್ಟು ಸುದೀರ್ಘ ಕಾಲ ಸಂಸ್ಥೆಯ ಆಡಳಿತದ ಚುಕ್ಕಾಣಿಯನ್ನು ಹಿಡಿದು ಮುನ್ನಡೆಸಿ ಸಂಸ್ಥೆಯ ಶ್ರೇಷ್ಠತೆಯ ಕಿರೀಟಕ್ಕೆ ಅನೇಕ ಗರಿಗಳನ್ನು ತೊಡಿಸಿ 2015ರಲ್ಲಿ ನಿವೃತ್ತರಾದರು.

ಡಾ. ಬಿ. ಯಶೋವರ್ಮ ಅವರು ಅಧಿಕಾರ ವಹಿಸಿಕೊಂಡ ಸಂದರ್ಭದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ರಾಷ್ಟ್ರಮಟ್ಟದ ನ್ಯಾಕ್ ಸಂಸ್ಥೆಯು ನಡೆಸುವ ಹೊಸ ಬಗೆಯ ಮೌಲ್ಯಮಾಪನ ಪ್ರಕ್ರಿಯೆಗೆ ಒಡ್ಡಿಕೊಳ್ಳಬೇಕಾಗಿತ್ತು. ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ 'ಎ' ಗ್ರೇಡ್ ಪಡೆದುಕೊಳ್ಳುವುದು ಸಾಮಾನ್ಯವಾದ ಸಂಗತಿಯಾಗಿರಲಿಲ್ಲ. ಅದಕ್ಕೆ ಪಠ್ಯ, ಪಠ್ಯೇತರ ಚಟುವಟಿಕೆಗಳ ಜೊತೆ ವಿಸ್ತರಣೆ ಹಾಗೂ ಸಂಶೋಧನಾ ಚಟುವಟಿಕೆಗಳನ್ನು ಬಲಪಡಿಸಿ, ವಿನೂತನವಾದ ಪ್ರಯೋಗಗಳನ್ನು ಅನುಷ್ಠಾನಕ್ಕೆ ತಂದು, ಕಾಲೇಜಿನ ಮೂಲಭೂತ ಸೌಲಭ್ಯಗಳನ್ನು ವಿಶ್ವದರ್ಜೆಗೆ ಎತ್ತರಿಸಬೇಕಾದ ಹಾಗೂ ಅಧ್ಯಾಪಕರನ್ನು, ವಿದ್ಯಾರ್ಥಿಗಳನ್ನು ಬದಲಾದ ಕಾಲಮಾನಕ್ಕೆ ಸಜ್ಜುಗೊಳಿಸಬೇಕಾದಂಥ ಮಹತ್ತರ ಸವಾಲು ಎದುರಿಗಿತ್ತು.

ಡಾ. ಬಿ. ಯಶೋವರ್ಮ ಅವರು ಪ್ರಾಂಶುಪಾಲರಾಗಿ ಅಧಿಕಾರ ವಹಿಸಿಕೊಂಡಾಗ ಅವರಿಗೆ ಕೇವಲ 37 ವರ್ಷಗಳು. ಸಂಸ್ಥೆಯಲ್ಲಿ ಅದಾಗಲೇ ತಮಗಿಂತ ವಯಸ್ಸಿನಲ್ಲಿ, ಅನುಭವದಲ್ಲಿ ಹಿರಿಯರಾಗಿದ್ದ ಸಾಕಷ್ಟು ಅನುಭವಿ ಪ್ರಾಧ್ಯಾಪಕರು ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಈ ಕಿರಿಯ ವ್ಯಕ್ತಿ ಈ ದೊಡ್ಡ ಸಂಸ್ಥೆಯನ್ನು ಹೇಗೆ ತಾನೆ ಮುನ್ನಡೆಸಬಲ್ಲ? ಎಂದು ಎಲ್ಲರೂ ಪ್ರಶ್ನಿಸಿಕೊಂಡದ್ದುಂಟು. ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಹಾಗೂ ಆಡಳಿತ ಮಂಡಳಿಯ ಪ್ರಮುಖರ ಸೂಕ್ತ ಮಾರ್ಗದರ್ಶನದಿಂದ ಹಂತಹಂತವಾಗಿ ಆಡಳಿತದ ಒಂದೊಂದೇ ಪಟ್ಟುಗಳನ್ನು ಅವರು ಕರಗತಮಾಡಿಕೊಳ್ಳುತ್ತ ಹೋದರು. ತಮ್ಮ ಎದುರಿಗಿದ್ದ ಎಲ್ಲ ಸವಾಲುಗಳನ್ನು ಧೈರ್ಯದಿಂದ ಸ್ವೀಕರಿಸಿ, ಎಲ್ಲ

ಸಿಬ್ಬಂದಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆದರು. ಮಾತ್ರವಲ್ಲದೆ, ದಿನದಿಂದ ದಿನಕ್ಕೆ 'ಪ್ರಾಯಂ ಕೂಸಾದೊಡೆ ಅಭಿಪ್ರಾಯಂ ಕೂಸಕ್ಕುಮೆ' ಎಂದು ಎಲ್ಲರೂ ಮೆಚ್ಚುಕೊಳ್ಳುವಂತೆ ಬೆಳೆದರು, ಸಂಸ್ಥೆಯನ್ನು ಬೆಳೆಸಿದರು. ಅದು ಈಗ ಇತಿಹಾಸ.

'ವಿದ್ಯಾಸಂಸ್ಥೆಗಳು ಜ್ಞಾನವಂತರನ್ನು ಮಾತ್ರ ಸೃಷ್ಟಿಸದೆ, ಜೀವನಮೌಲ್ಯಗಳಿಂದ ಶೋಭಿತರಾದ ಚಾರಿತ್ರ್ಯವಂತ ಉತ್ತಮ ನಾಗರಿಕರನ್ನು ಸೃಷ್ಟಿಸುವಂಥ ಕೇಂದ್ರಗಳಾಗಬೇಕು' ಎಂಬುದು ಸಂಸ್ಥೆಯ ಅಧ್ಯಕ್ಷರಾದ ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಶಯ. ಹೀಗಾಗಿಯೇ ಅವರು ತಮ್ಮೆಲ್ಲ ಶಿಕ್ಷಣ ಸಂಸ್ಥೆಗಳನ್ನು 'ಜ್ಞಾನದೇಗುಲ'ಗಳೆಂದೇ ಭಾವಿಸಿ ಪೋಷಿಸಿಕೊಂಡು ಬಂದವರು. ಯಶೋವರ್ಮ ಅವರು ಪೂಜ್ಯ ಹೆಗ್ಗಡೆಯವರ ಆಶಯಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿಕೊಂಡರು ಹಾಗೂ ದೈಹಿಕ, ಬೌದ್ಧಿಕ ಹಾಗೂ ಭಾವನಾತ್ಮಕ ವಿಕಾಸದ ಮೂಲಕ ವಿದ್ಯಾರ್ಥಿಗಳ ಪರಿಪೂರ್ಣ ವ್ಯಕ್ತಿತ್ವ ನಿರ್ಮಾಣಕ್ಕೆ ಪೂರಕವಾದ ಸೌಲಭ್ಯಗಳನ್ನು ವಿದ್ಯಾಸಂಸ್ಥೆಯಲ್ಲಿ ವಿಸ್ತರಿಸಿಕೊಳ್ಳುತ್ತ ಹೋದರು.

ಪ್ರಯೋಗಶೀಲರು

ಉಜಿರೆ ಕಾಲೇಜಿಗೆ ಎಫ್. ಜೆ. ಐ. ಸಂಸ್ಥೆಯು 'ರಾಷ್ಟ್ರದ ಅತ್ಯುತ್ತಮ ಶಿಕ್ಷಣ ಸಂಸ್ಥೆ' ಎಂಬ ಸ್ಥಾನಮಾನ ನೀಡಿದೆ. ವಿಶ್ವವಿದ್ಯಾಲಯ ಧನ ಸಹಾಯ ಆಯೋಗವು ಸ್ವಾಯತ್ತ ಸ್ಥಾನಮಾನವನ್ನು, 'ಕಾಲೇಜ್ ವಿತ್ ಪೊಟೆನ್ಶಿಯಲ್ ಫಾರ್ ಎಕ್ಸಲೆನ್ಸ್ ಹಾಗೂ ಸ್ಟಾರ್ ಕಾಲೇಜ್' ಗೌರವವನ್ನು ನೀಡಿದೆ. ಡಾ. ಯಶೋವರ್ಮ ಅವರ ಅವಧಿಯಲ್ಲಿ ಕಾಲೇಜು ಮೂರು ಬಾರಿ ನ್ಯಾಕ್ ಮೌಲ್ಯಮಾಪನ ಪ್ರಕ್ರಿಯೆಗೆ ಒಳಗಾಗಿ 'ಎ' ಗ್ರೇಡ್ ಮಾನ್ಯತೆಯನ್ನು ಪಡೆದುಕೊಂಡಿದೆ. ಇದಕ್ಕೆ ಅವರು ಕೈಕೊಂಡ ಪ್ರಗತಿಪರ ಯೋಜನೆಗಳು, ಪ್ರಯೋಗಗಳು ಕಾರಣೀಭೂತವಾಗಿವೆ. ದಕ್ಷಿಣ ಭಾರತದಲ್ಲಿಯೇ ಮೊದಲ ಬಾರಿಗೆ ಪದವಿಯಲ್ಲಿ ಎನ್.ಸಿ.ಸಿ ಅಧ್ಯಯನ ಅಳವಡಿಕೆ, ಸಮುದಾಯ ಬಾನುಲಿ ಕೇಂದ್ರ ಸ್ಥಾಪನೆ, ಸುಸಜ್ಜಿತ ಮಲ್ಟಿ ಮೀಡಿಯ ಸ್ಟುಡಿಯೋ, ಲಾಂಗ್ವೇಜ್ ಲ್ಯಾಬ್, ವೀಡಿಯೋ ವಿಷುವಲ್ ಸೆಂಟರ್‌ಗಳು, ಸ್ನಾತಕೋತ್ತರ ಅಧ್ಯಯನ ಕೇಂದ್ರ, ಸ್ನಾತಕೋತ್ತರ ವಿದ್ಯಾರ್ಥಿ ನಿಲಯಗಳು, ಸಂಶೋಧನೆಗೆ ಉತ್ತೇಜನ ನೀಡಲು ನಾಲ್ಕು ಸಂಶೋಧನಾ ಕೇಂದ್ರಗಳು, ಸುಸಜ್ಜಿತ ಕಲ್ಚರಲ್ ಸೆಂಟರ್, ಮಲ್ಟಿ ಫೆಸಿಲಿಟಿ ಸೆಂಟರ್, ಓಪನ್ ಏರ್ ಕ್ಲಾಸ್ ರೂಮ್, ಗ್ರಂಥಾಲಯದಲ್ಲಿ ಇ-ಬುಕ್, ಒಪೆಕ್, ಇ-ಲೈಬ್ರೆರಿ, ಬಾರ್ ಕೋಡ್, ಓಪನ್ ಎಕ್ಸಸ್ ಸೌಲಭ್ಯ, ಅಲ್ಲದೆ ಕಾಲೇಜ್ ಕ್ಯಾಂಪಸ್, ಕ್ರೀಡಾಂಗಣಗಳ ಆಧುನೀಕರಣ, ಕಾಲೇಜು ಕಟ್ಟಡ ವಿಸ್ತರಣೆ, ಸುಸಜ್ಜಿತವಾದ ಆಕರ್ಷಕವಾದ ಕ್ಯಾಂಟೀನ್- ಮೊದಲಾದ ಹತ್ತು-ಹಲವು ವಿನೂತನವಾದ ವಿದ್ಯಾರ್ಥಿ ಸ್ನೇಹಿ ಸೌಲಭ್ಯಗಳನ್ನು ಇಲ್ಲಿ ಹೆಸರಿಸಬೇಕು.

ಕಾಲೇಜಿನ ಸರ್ವತೋಮುಖ ಅಭಿವೃದ್ಧಿಗಾಗಿ ಹಂಬಲಿಸಿದ ಡಾ. ಯಶೋವರ್ಮ ಅವರು ವಿನೂತನವಾದ ಮತ್ತು ಮಹತ್ವದ ಐವತ್ತು ಬೆಸ್ಟ್ ಪ್ರ್ಯಾಕ್ಟೀಸ್‌ಗಳನ್ನು ಯೋಚಿಸಿ, ಯೋಜಿಸಿ ಅನುಷ್ಠಾನಕ್ಕೆ ತಂದರು. ಎಸ್.ಡಿ.ಎಮ್. ಸಾಮಾಜಿಕ ಜವಾಬ್ದಾರಿ ಸರಣಿ ಕಾರ್ಯಕ್ರಮ, ಎಸ್.ಡಿ.ಎಮ್. ಸ್ಟಾಫ್ ಅಪ್ರೈಸಲ್, ಎಸ್.ಡಿ.ಎಮ್. ಅಸೆಸ್‌ಮೆಂಟ್, ಎಸ್.ಡಿ.ಎಮ್. ಲರ್ನಿಂಗ್ ರಿಸೋರ್ಸ್ ಮ್ಯಾನೇಜ್‌ಮೆಂಟ್ ಸಿಸ್ಟಮ್, ಎಸ್.ಡಿ.ಎಮ್ ಇ-ಬುಲೆಟಿನ್, ಎಸ್.ಡಿ.ಎಮ್. ಲೈಬ್ರರಿ ಮ್ಯಾನೇಜ್‌ಮೆಂಟ್ ಸಿಸ್ಟಮ್, ಎಸ್.ಡಿ.ಎಮ್.

ಡಯಾಗ್ನಾಸ್ಟಿಕ್ ಸರ್ವೆ ಮತ್ತು ರೆಮಿಡಿಯಲ್ ಡ್ರಿಲ್, ಎಸ್.ಡಿ.ಎಮ್. ಟ್ಯಾಲೆಂಟ್ ಕಾರ್ನರ್, ಎಸ್.ಡಿ.ಎಮ್. ವಿಮೆನ್ ಡೆವಲಪ್‌ಮೆಂಟ್ ಸೆಲ್, ಎಸ್.ಡಿ.ಎಮ್. ಡಿಜಿಟಲ್ ವ್ಯಾಲ್ಯೂ ಡಿಸ್‌ಪ್ಲೆ, ಎಸ್.ಡಿ.ಎಮ್. ವೀಕ್ಲೀ ಸರ್ವೆ, ಎಸ್.ಡಿ.ಎಮ್. ನಮ್ಮೂರ ವಾರ್ತೆ, ಎಸ್.ಡಿ.ಎಮ್. ವಿದ್ಯಾರ್ಥಿ ಉಪನ್ಯಾಸ ಸರಣಿ, ಎಸ್.ಡಿ.ಎಮ್. ಸ್ವಚ್ಛ ಗೆಳತಿ, ಎಸ್.ಡಿ.ಎಮ್. ಶಾಲಾ ದತ್ತು ಯೋಜನೆ, ಎಸ್.ಡಿ.ಎಮ್.ಲ್ಯಾಬ್ ಇನ್ ಕ್ಯಾಬ್, ಎಸ್.ಡಿ.ಎಮ್. ನ್ಯಾನೋ ಲರ್ನಿಂಗ್ ಕಾರ್ನರ್, ಎಸ್.ಡಿ.ಎಮ್. ಮಧ್ಯಾಹ್ನ ಉಚಿತ ಊಟದ ಯೋಜನೆ, ಎಸ್.ಡಿ.ಎಮ್. ವಿದ್ಯಾರ್ಥಿ ಅಭಿವೃದ್ಧಿ ಯೋಜನೆ, ಎಸ್.ಡಿ.ಎಮ್. ಮೆಂಟರ್‌ಶಿಪ್, ಎಸ್.ಡಿ.ಎಮ್. ಸ್ಟೂಡೆಂಟ್ ಫ್ಯಾಕಲ್ಟಿ ಯೋಜನೆ, ಎಸ್.ಡಿ.ಎಮ್. ಕಿರು ಅವಧಿಯ ಸರ್ಟಿಫಿಕೇಟ್ ಕೋರ್ಸ್‌ಗಳು, ಎಸ್.ಡಿ.ಎಮ್. ರಾಷ್ಟ್ರೀಯ ದಿನಗಳ ಆಚರಣೆ–ಈ ಮೊದಲಾದವುಗಳು ಕಾಲೇಜಿನ ಗುಣಮಟ್ಟವನ್ನು ಹೆಚ್ಚಿಸಿದ ಮಹತ್ವದ ಯೋಜನೆಗಳಾಗಿವೆ.

ಆಟೋಟಗಳಿಗೆ ಉತ್ತೇಜನ

ವಿದ್ಯಾರ್ಥಿಗಳು ದೈಹಿಕವಾಗಿ ಸಶಕ್ತರಾಗಬೇಕು ಎಂಬ ಉದ್ದೇಶದಿಂದ ಕ್ರೀಡಾ ಚಟುವಟಿಕೆಗಳಿಗೆ ಅವರು ಉತ್ತೇಜನ ನೀಡಿದರು. ಎಸ್.ಡಿ.ಎಮ್. ಕ್ರೀಡಾ ಸಂಘವನ್ನು ಬಲಪಡಿಸಿ, ಸೌಲಭ್ಯಗಳನ್ನು ಹೆಚ್ಚಿಸಿದರು. ಮಲ್ಟಿಜಿಮ್, ಅಂತಾರಾಷ್ಟ್ರೀಯ ಮಟ್ಟದ ಈಜುಕೊಳ, ಕ್ರೀಡಾಂಗಣದ ನವೀಕರಣ ಕಾರ್ಯಗಳನ್ನು ಕೈಗೊಂಡು ಪೂರ್ಣಗೊಳಿಸಿದರು. ವಿವಿಧ ಕ್ರೀಡೆಗಳಿಗೆ ಸಮರ್ಥ ತರಬೇತುದಾರರನ್ನು ನೇಮಿಸಿ ಕ್ರೀಡಾಪಟುಗಳಿಗೆ ನಿರಂತರ ಪ್ರೋತ್ಸಾಹ ನೀಡಿದರು. ಕಾಲೇಜಿನಲ್ಲಿರುವ ಕ್ರೀಡಾಪಟುಗಳಿಗೆ ಉಚಿತ ಊಟ, ವಸತಿ ಹಾಗೂ ಶಿಕ್ಷಣವನ್ನು ನೀಡಲು ಕ್ರಮಕೈಗೊಂಡರು. ದೇಶದ ವಿವಿಧ ಭಾಗಗಳಲ್ಲಿ ನಡೆಯುವ ಕ್ರೀಡಾಕೂಟಗಳಿಗೆ ಕ್ರೀಡಾಪಟುಗಳನ್ನು ಕಳುಹಿಸಿ ಕಾಲೇಜಿಗೆ ಕೀರ್ತಿ ಬರುವಂತೆ ಮಾಡಿದರು. ಪರಿಣಾಮವಾಗಿ ರಾಷ್ಟ್ರ, ಅಂತರಾಷ್ಟ್ರೀಯ ಸ್ಪರ್ಧೆಗಳಲ್ಲಿ ವಿಜೇತರಾಗಿ ಕೀರ್ತಿ ತಂದ ಹಲವು ಕ್ರೀಡಾಪಟುಗಳು ಇಂದು ಉನ್ನತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತ ಕಾಲೇಜಿನ ಘನತೆಯನ್ನು ಹೆಚ್ಚಿಸಿದ್ದಾರೆ.

ಜ್ಞಾನಕೋಶ ವಿಸ್ತರಣೆ

ವಿದ್ಯಾರ್ಥಿಗಳ ಬೌದ್ಧಿಕ ಮಟ್ಟವನ್ನು ಎತ್ತರಿಸಬೇಕು ಎಂಬುದು ಡಾ. ಯಶೋವರ್ಮ ಅವರ ಮಹತ್ವದ ಕನಸಾಗಿತ್ತು. 'ಶಿಕ್ಷಣ ಎನ್ನುವುದು ಕೇವಲ ಜ್ಞಾನ ಸಂಪಾದನೆಯ ಕಾರ್ಯ ಮಾತ್ರವಲ್ಲದೆ ಅದು ಹೊಸ ಬಗೆಯ ಜ್ಞಾನಸೃಷ್ಟಿಯ ಭಾಗವೂ ಆಗಿದೆ' ಎಂಬುದು ಅವರ ದೃಢವಾದ ನಂಬಿಕೆಯಾಗಿತ್ತು. ಇದಕ್ಕಾಗಿ ಅಧ್ಯಾಪಕರು, ವಿದ್ಯಾರ್ಥಿಗಳು ಜಾಗತಿಕ ಮಟ್ಟದ ಜ್ಞಾನವನ್ನು ತನ್ನದನ್ನಾಗಿಸಿಕೊಳ್ಳಬೇಕು ಮತ್ತು ಅಂಥ ಜ್ಞಾನವನ್ನು ಹಳ್ಳಿಯ ಕಾಲೇಜಿನಲ್ಲಿ ನಾವು ಕೊಡುವಂಥಾಗಬೇಕು ಎಂದು ಅವರು ಭಾವಿಸಿದರು. ಗ್ರಾಮೀಣ ಪ್ರದೇಶದ ನಮ್ಮ ವಿದ್ಯಾರ್ಥಿಗಳು, ಪಟ್ಟಣಗಳಲ್ಲಿ ದೊರಕುವಂಥ ಸೌಲಭ್ಯಗಳಿಲ್ಲದೆ ಅವಕಾಶಗಳಿಂದ ವಂಚಿತರಾಗಬಾರದೆಂದು ಭಾವಿಸಿ ಕಾಲೇಜಿನಲ್ಲಿಯೂ ಶ್ರೇಷ್ಠಮಟ್ಟದ ಮೂಲಭೂತ ಸೌಲಭ್ಯಗಳು ದೊರಕುವಂತೆ ಮಾಡಿದರು. 'ಮುಂದೊಂದು ದಿನ ಹಳ್ಳಿಯ ನಮ್ಮ ವಿದ್ಯಾರ್ಥಿಗಳು ಕೈಯಲ್ಲಿ ಲ್ಯಾಪ್‌ಟಾಪ್, ಟ್ಯಾಬ್‌ಗಳನ್ನು ಹಿಡಿದುಕೊಂಡು ಬಂದು ಜಗತ್ತಿನ

ಶ್ರೇಷ್ಠ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳಂತೆ ಓಡಾಡುವುದನ್ನು ನಾನು ನೋಡಬಯಸಿದ್ದೇನೆ' ಎಂದು ಅವರು ಕನಸುಕಾಣುತ್ತಿದ್ದರು.

ತಮ್ಮ ಈ ಉದ್ದೇಶ ಸಾಧನೆಗಾಗಿ ಅವರು ಕಾಲೇಜಿನಲ್ಲಿ ತಂತ್ರಜ್ಞಾನಕ್ಕೆ ಆದ್ಯತೆ ನೀಡಿದರು. ಕಾಲೇಜನ್ನು ಡಿಜಿಟಲೈಸ್ಡ್ ಕ್ಯಾಂಪಸ್ ಮಾಡಿದರು. ಪೇಪರ್‌ಲೇಸ್ ಆಡಳಿತವನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದರು. ಇನ್ ಹೌಸ್ ಡೆವಲಪ್ಡ್ ಸಾಫ್ಟ್ ವೇರ್ ಅಭಿವೃದ್ಧಿ ಪಡಿಸಿ ವಿದ್ಯಾರ್ಥಿಗಳ ಸಮಗ್ರ ಚಟುವಟಿಕೆಗಳನ್ನು ದಾಖಲಿಸುವ ವ್ಯವಸ್ಥೆ ಮಾಡಿದರು. ಸಂಖ್ಯಾಶಾಸ್ತ್ರ ಲ್ಯಾಬ್, ಗಣಿತ ಲ್ಯಾಬ್ ಹಾಗೂ ಲಾಂಗ್ವೇಜ್ ಲ್ಯಾಬ್‌ಗಳನ್ನು ಸ್ಥಾಪಿಸಿದರು. ಇವುಗಳ ಮೂಲಕ ವೀಡಿಯೋ ಕಾನ್ಫರೆನ್ಸಿಂಗ್ ಸೌಲಭ್ಯವನ್ನು ಹಾಗೂ ಎಜುಸ್ಯಾಟ್ ಸೌಲಭ್ಯವನ್ನು ಕಲ್ಪಿಸಿದರು. ಯೂಟ್ಯೂಬ್ ವೀಡಿಯೋ, ಗೂಗಲ್ ಕ್ಲಾಸ್ ರೂಮ್, ಟೆಡ್ ಉಪನ್ಯಾಸಗಳು, ಖಾನ್ ಅಕಾಡೆಮಿಯ ಉಪನ್ಯಾಸಗಳ ವೀಡಿಯೋಗಳನ್ನು ನಿಯಮಿತವಾಗಿ ತರಗತಿಗಳಲ್ಲಿ ತೋರಿಸುವ ವ್ಯವಸ್ಥೆ ಮಾಡಿದರು. ರಾಜ್ಯದಲ್ಲಿಯೇ ಮೊದಲ ಬಾರಿಗೆ ಆನ್‌ಲೈನ್ ಪರೀಕ್ಷೆಯನ್ನು ಜಾರಿಗೆ ತಂದರು. ಪಾಠ–ಪ್ರವಚನಗಳನ್ನು ವಿದ್ಯಾರ್ಥಿಗಳಿಗೆ ಆನ್‌ಲೈನ್‌ನಲ್ಲಿ ಒದಗಿಸುವ ಇ–ಲರ್ನಿಂಗ್, ಇ–ಪ್ರಾಕ್ಟಿಕಲ್ಸ್‌ನ್ನು ಕಲ್ಪಿಸಿಕೊಟ್ಟರು. ಪ್ರತಿಯೊಬ್ಬ ಅಧ್ಯಾಪಕರಿಂದಲೂ ಇ–ಲೆಕ್ಚರಿಂಗ್‌ಗಳನ್ನು ತಯಾರಿಸಿ ಯುಟ್ಯೂಬ್‌ಗೆ ಅಳವಡಿಸಿದರು. ಈ ಎಲ್ಲದರ ಪರಿಣಾಮವಾಗಿ ಕೊರೋನಾ ಸಂದರ್ಭದಲ್ಲಿ ನಮ್ಮ ಅಧ್ಯಾಪಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಗಳಿಗೆ ಹೊಂದಿಕೊಳ್ಳುವುದಕ್ಕೆ ಕಷ್ಟವಾಗಲೇ ಇಲ್ಲ.

ಭಾವಕೋಶ ವಿಸ್ತರಣೆ

'ವಿದ್ಯಾರ್ಥಿಗಳು ಕೇವಲ ಮಾಹಿತಿಯ ಕೋಶವಾಗಬಾರದು, ಕೇವಲ ಜ್ಞಾನಿಗಳು ಮಾತ್ರ ಆಗಬಾರದು. ಅವರು ಮಾನವೀಯ ಮೌಲ್ಯಗಳನ್ನು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡು ಯೋಗ್ಯ ನಾಗರಿಕರಾಗಬೇಕು' ಎಂಬುದು ಪೂಜ್ಯ ಡಾ. ಡಿ. ವೀರೇಂದ್ರ ಹೆಗ್ಗಡೆಯವರ ಆಶಯ. ಪೂಜ್ಯರ ಆಶಯಗಳನ್ನು ಈಡೇರಿಸುವುದಕ್ಕಾಗಿ ಡಾ. ಯಶೋವರ್ಮ ಅವರು ಕಾಲೇಜಿನಲ್ಲಿ ಸಾಹಿತ್ಯ ಹಾಗು ಸಾಂಸ್ಕೃತಿಕ ಚಟುವಟಿಕೆಗಳಿಗೆ ವಿಶೇಷ ಪ್ರೋತ್ಸಾಹ ನೀಡಿದರು. ಕಾಲೇಜಿನಲ್ಲಿ ನಿರಂತರವಾಗಿ ಸಾಹಿತ್ಯ ಅಧ್ಯಯನ ಶಿಬಿರಗಳು, ಕಮ್ಮಟಗಳನ್ನು ನಡೆಸಿದರು. ಚಿಂತನಸಿರಿ, ನಮ್ಮ ಕಾವ್ಯ ನಮ್ಮ ಹೆಮ್ಮೆ, ನುಡಿಸಂಭ್ರಮ ಮೊದಲಾದ ಉಪನ್ಯಾಸ ಸರಣಿಗಳ ಮೂಲಕ ನಾಡಿನ ಶ್ರೇಷ್ಠ ಸಾಹಿತಿಗಳನ್ನು, ಚಿಂತಕರನ್ನು ಕಾಲೇಜಿಗೆ ಕರೆಸಿಕೊಂಡು ಉಪನ್ಯಾಸಗಳನ್ನು ಏರ್ಪಡಿಸಿದರು. ಮಾತೃಶ್ರೀ ಹೇಮಾವತಿ ಹೆಗ್ಗಡೆಯವರ ಕನಸಿನ ಕೂಸಾದ 'ವನರಂಗ'ದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದರು. ಎಸ್.ಡಿ.ಎಮ್. ಕಲಾಕೇಂದ್ರದ ಸ್ಥಾಪನೆ ಈ ನಿಟ್ಟಿನಲ್ಲಿ ಮಹತ್ವದ ಹೆಜ್ಜೆ. ದೇಶದ ವಿವಿಧ ರಾಜ್ಯಗಳ ನಾಟ್ಯ, ನೃತ್ಯಗಳ ತರಬೇತಿಗಾಗಿ ಪರಿಣತರನ್ನು ನೇಮಿಸಿ ರಾಜ್ಯದಾದ್ಯಂತ ಪ್ರದರ್ಶನ ಏರ್ಪಡಿಸಿದರು. ಯಕ್ಷಗಾನ, ನಾಟಕ, ನೃತ್ಯ ಕಲಿಕೆಗೆ ಗುರುಗಳನ್ನು ನೇಮಿಸಿದರು. ಚಿತ್ರಕಲೆ, ಸಂಗೀತ ಮೊದಲಾದವುಗಳ ಕಲಿಕೆಗೆ Foraಗಳನ್ನು ಸ್ಥಾಪಿಸಿದರು. ಇದರ ಪರಿಣಾಮವಾಗಿ ವಿದ್ಯಾರ್ಥಿಗಳು ವಿವಿಧ ರಾಷ್ಟ್ರಮಟ್ಟದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಾಗವಹಿಸಿ ಬಹುಮಾನ ಪಡೆಯಲು ಸಾಧ್ಯವಾಯಿತು.

ಪರಿಸರ ಪ್ರೇಮಿ

ಡಾ. ಯಶೋವರ್ಮ ಅವರು ಮೂಲತಃ ಓರ್ವ ಸಸ್ಯಶಾಸ್ತ್ರಜ್ಞರು. ಕಾಲೇಜಿನ ಆವರಣವನ್ನು ಹಸಿರುಮಯಗೊಳಿಸಿದವರು ಅವರು. ಉಜಿರೆ ಪೇಟೆಯಿಂದ ನೀರಚಿಲುಮೆಯವರೆಗಿನ ಇಕ್ಕೆಲಗಳಲ್ಲಿ ಸುಂದರವಾದ ಸಸ್ಯಗಳನ್ನು ಬೆಳೆಸಿ ಅವುಗಳಿಗೆ ತ್ಯಾಜ್ಯ ಸಂಸ್ಕರಣ ಘಟಕದ ನೀರನ್ನು ಹರಿಸಿ ಹಸಿರನ್ನು ಬೆಳೆಸಿ ಪೋಷಿಸಿಕೊಂಡು ಬಂದರು. ಸರ್ಕಾರದ ನೆರವಿನೊಂದಿಗೆ 10 ಎಕರೆ ವಿಸ್ತೀರ್ಣದ ಪ್ರದೇಶದಲ್ಲಿ ಔಷಧೀಯ ಸಸ್ಯಗಳ ಆರ್ಬೋರೇಟಂ ಅನ್ನು ಸ್ಥಾಪಿಸಿದರು. ಅಲ್ಲಿ 'ಕುವೆಂಪುವನ' ಹಾಗೂ 'ಪಂಪವನ'ಗಳನ್ನು ನಿರ್ಮಿಸಿದರು. ಆಹಾರ ಪದಾರ್ಥಗಳನ್ನು, ನೀರನ್ನು ಹಿತಮಿತವಾಗಿ ಬಳಸುವಂಥಾಗಬೇಕು ಎಂಬ ಉದ್ದೇಶದಿಂದ ಶಿಕ್ಷಣ ಸಂಸ್ಥೆಗಳಲ್ಲಿ ಅಭಿಯಾನವನ್ನು ಆರಂಭಿಸಿದರು. ಅವುಗಳ ಕುರಿತು ಅರಿವು ಮೂಡಿಸುವಂಥ ಬರೆಹಗಳನ್ನು ಬರೆಸಿ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಿ ಜಾಗೃತಿ ಮೂಡಿಸಿದರು. ಅವರ ಈ ಸಾಧನೆಗಾಗಿ ರಾಜ್ಯ ಸರಕಾರವು ಕಾಲೇಜಿಗೆ 'ಹಸಿರು ಪ್ರಶಸ್ತಿ' ನೀಡಿ ಗೌರವಿಸಿತು.

ಸ್ವಚ್ಛತೆಯೇ ದೇವರು

ಡಾ. ಯಶೋವರ್ಮ ಅವರು ಶಿಸ್ತು ಹಾಗೂ ಸ್ವಚ್ಛತೆಗೆ ಆದ್ಯತೆ ನೀಡಿ ಸಂಸ್ಥೆಯ ಕಣಕಣದಲ್ಲೂ ಇದು ಅನುರಣನಗೊಳ್ಳುವಂತೆ ನೋಡಿಕೊಂಡರು. ಶ್ರೀಕ್ಷೇತ್ರ ಧರ್ಮಸ್ಥಳದ ಈ ಮಾದರಿಯನ್ನು ಎಸ್.ಡಿ.ಎಮ್.ನ ಎಲ್ಲ ಸಂಸ್ಥೆಗಳಲ್ಲೂ ಕಾಣುವಂತಾಗಬೇಕು ಎಂಬುದು ಅವರ ಹಂಬಲವಾಗಿತ್ತು. ತರಗತಿ ಕೋಣೆಗಳು, ಅಧ್ಯಾಪಕರ ಕೊಠಡಿಗಳು, ವಿದ್ಯಾರ್ಥಿಗಳ ವಿಶ್ರಾಂತಿ ಕೊಠಡಿ, ಶೌಚಾಲಯ, ಕಾಲೇಜು ಕ್ಯಾಂಟೀನ್–ಹೀಗೆ ಎಲ್ಲದರ ಉಸ್ತುವಾರಿಗೆ ಮೇಲ್ವಿಚಾರಕರನ್ನು ನೇಮಿಸಿ ಅವರು ನಿಯಮಿತವಾಗಿ ಅಲ್ಲಿಗೆ ಭೇಟಿ ನೀಡಿ ಪರಿಶೀಲಿಸಿ ತಮಗೆ ವರದಿ ನೀಡುವಂತೆ ಮಾಡುತ್ತಿದ್ದರು. ವಿದ್ಯಾರ್ಥಿಗಳು ಎಲ್ಲೆಂದರಲ್ಲಿ ಕಸಕಡ್ಡಿಗಳನ್ನು ಬಿಸಾಡಬಾರದು ಹಾಗೂ ಬೆಂಚ್‌ಗಳ ಮೇಲೆ ಏನನ್ನೂ ಬರೆಯಬಾರದು, ಗೋಡೆಗಳ ಮೇಲೆ ಕಾಲಿಟ್ಟು ನಿಲ್ಲಬಾರದು, ಕಾರಿಡಾರ್‌ನಲ್ಲಿ ದಂಡೆಗಳ ಮೇಲೆ ಕುಳಿತುಕೊಳ್ಳಬಾರದು, ತರಗತಿಗಳು ಇಲ್ಲದಾಗ ಕೊಠಡಿಗಳಲ್ಲಿ ಕುಳಿತು ಹರಟದೆ ಗ್ರಂಥಾಲಯದ ಸದುಪಯೋಗ ಮಾಡಿಕೊಳ್ಳಬೇಕು–ಮೊದಲಾದ ಜಾಗೃತಿಯನ್ನು ಮೂಡಿಸಿದರು. 'ಶಿಕ್ಷಿತರು ಎಸೆದ ಕಸವನ್ನು ಅಶಿಕ್ಷಿತರು ಎತ್ತುತ್ತಾರೆಂದರೆ, ಶಿಕ್ಷಿತರ ವಿದ್ಯೆಗೆ ಏನು ಬೆಲೆ ಬಂದಂತಾಯಿತು' ಎಂಬಂಥ ಬರೆಹಗಳ ಮೂಲಕ ಅರಿವು ಮೂಡಿಸುವ ಪ್ರಯತ್ನ ಮಾಡಿದರು. ತ್ಯಾಜ್ಯ ವಿಲೇವಾರಿ ಘಟಕಗಳನ್ನು ಸ್ಥಾಪಿಸಿ ತ್ಯಾಜ್ಯವಸ್ತುಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವ ವ್ಯವಸ್ಥೆ ಮಾಡಿದರು. ನೀರನ್ನು ಮರುಬಳಕೆ ಮಾಡುವ ಉದ್ದೇಶದಿಂದ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಿದರು. ಹಾಗೆ ಸಂಸ್ಕರಿಸಿದ ನೀರನ್ನು ಸಂಸ್ಥೆಯ ಉದ್ಯಾನವನಗಳಿಗೆ ಸದ್ಬಳಕೆ ಮಾಡಿಕೊಂಡರು. ಉಜಿರೆಯ ಸೌಂದರ್ಯವರ್ಧನೆಗೆ ಇದು ಮಹತ್ವದ ಕೊಡುಗೆಯಾಯಿತು.

ವ್ಯಕ್ತಿಯಲ್ಲ ಶಕ್ತಿ

ಡಾ. ಯಶೋವರ್ಮರು ತಮನಂಗಡಿ ಶ್ರೀ ರಘುಚಂದ್ರ ಶೆಟ್ಟಿ ಹಾಗೂ ಶ್ರೀಮತಿ ಪುಷ್ಪಾವತಿ ಅಮ್ಮನವರೆಂಬ ಸದಾಚಾರ ಸಂಪನ್ನ ದಂಪತಿಯ ಸುಪುತ್ರರು.

ಶ್ರೀ ರಘುಚಂದ್ರ ಶೆಟ್ಟಿ ದಂಪತಿಗೆ ಶ್ರೀ ನಿರ್ಮಲ ಕುಮಾರ, ಶ್ರೀ ರಾಜೇಂದ್ರ ಕುಮಾರ, ಶ್ರೀ ಪ್ರೇಮಚಂದ್ರ, ಶ್ರೀ ಯಶೋವರ್ಮ, ಶ್ರೀ ಹಂಸರಾಜ ಎಂಬ ಐವರು ಗಂಡು ಮಕ್ಕಳು ಹಾಗೂ ಶ್ರೀಮತಿ ಹೇಮಾವತಿ, ಶ್ರೀಮತಿ ಪ್ರಿಯದರ್ಶಿನಿ ಎಂಬ ಇಬ್ಬರು ಹೆಣ್ಣು ಮಕ್ಕಳು. ಸ್ನೇಹ, ಸಜ್ಜನಿಕೆ, ಸುಸಂಸ್ಕೃತ ನಡೆವಳಿಕೆಗಳಿಂದ ಇಡೀ ಕುಟುಂಬ ಸಮಾಜದಲ್ಲಿ ಗೌರವದ ಸ್ಥಾನ ಪಡೆದುಕೊಂಡಿರುವುದು ವೇದ್ಯವೇ ಆಗಿದೆ. ಡಾ. ಬಿ. ಯಶೋವರ್ಮರ ಮಡದಿ ಶ್ರೀಮತಿ ಸೋನಿಯಾವರ್ಮ, ಮಕ್ಕಳು ಪೂರನ್‌ವರ್ಮ ಹಾಗೂ ಕೇಯೂರ್‌ವರ್ಮ ಯಶೋವರ್ಮರ ಯಶಸ್ಸಿನ ಹಿಂದಿನ ಶಕ್ತಿ ಹಾಗೂ ಸ್ಫೂರ್ತಿಯಾಗಿದ್ದರು.

ಡಾ. ಯಶೋವರ್ಮ ಅವರದ್ದು ಬಹುಮುಖ ವ್ಯಕ್ತಿತ್ವ. ಓರ್ವ ಶಿಕ್ಷಣತಜ್ಞರಾಗಿ, ಆಡಳಿತಗಾರರಾಗಿ, ಉತ್ತಮ ಸಂಘಟಕರಾಗಿ, ಕೃಷಿಕರಾಗಿ, ಎಲ್ಲಕ್ಕಿಂತ ಮುಖ್ಯವಾಗಿ ಓರ್ವ ಸಂವೇದನಾಶೀಲ ಮಾನವೀಯ ಅಂತಃಕರಣದ ಸುಸಂಸ್ಕೃತ ವ್ಯಕ್ತಿಯಾಗಿ ಗುರುತಿಸಿಕೊಂಡವರು. ಅಂದು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿಯಾಗಿ ಅವರು ಯು.ಕೆ.ಜಿ.ಯಿಂದ ತೊಡಗಿ ಸ್ನಾತಕೋತ್ತರ ಪದವಿಯವರೆಗಿನ ಎಲ್ಲ ಬಗೆಯ ಶಿಕ್ಷಣ ಸಂಸ್ಥೆಗಳನ್ನು ಮುನ್ನಡೆಸಬೇಕಾಗಿತ್ತು. ಆ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಿದಾಗ, ಅಲ್ಲಿನ ಅಧ್ಯಾಪಕರೊಂದಿಗೆ ಸಮಾಲೋಚನೆ ಮಾಡುವಾಗ ಆಯಾ ಶಿಸ್ತುಗಳ ಜ್ಞಾನವಿಲ್ಲದೇ ಇದ್ದರೆ ಹೇಗೆ? ಹೀಗಾಗಿ ಅವರು ಕಲೆ, ಸಾಹಿತ್ಯ, ಸಂಸ್ಕೃತಿ, ವಿಜ್ಞಾನ, ತಂತ್ರಜ್ಞಾನ, ಮಾನವಿಕ–ಹೀಗೆ ಎಲ್ಲ ಬಗೆಯ ಜ್ಞಾನಶಿಸ್ತುಗಳ ಕುರಿತು ನಿಖರವಾದ ಅರಿವನ್ನು ಬೆಳೆಸಿಕೊಂಡವರಾಗಿದ್ದರು ಮತ್ತು ಅದರ ಜ್ಞಾನದಿಂದ ಅವರಿಗೆ ಸೂಕ್ತ ಮಾರ್ಗದರ್ಶನ ಮಾಡಬಲ್ಲವರಾಗಿದ್ದರು. ತಾವು ಯಾವುದೇ ವಿಷಯವನ್ನು ತಿಳಿದುಕೊಳ್ಳದೇ ಇನ್ನೊಬ್ಬರಿಗೆ ಹೇಳುವ ಜಾಯಮಾನ ಅವರದಾಗಿರಲಿಲ್ಲ. ಕಾರ್ಯದರ್ಶಿಗಳಾಗಿ ಅವರು ವಿವಿಧ ಶಿಕ್ಷಣ ಸಂಸ್ಥೆಗಳಿಗೆ ಭೇಟಿ ನೀಡಬೇಕಾಗಿತ್ತು. ಆ ಸಂದರ್ಭದಲ್ಲಿ ಅವರು ಅಲ್ಲಿನ ಜ್ಞಾನಶಿಸ್ತುಗಳ ಕುರಿತು ಮಾತನಾಡುತ್ತಿದ್ದರು ಮತ್ತು ಮಾರ್ಗದರ್ಶನ ನೀಡುತ್ತಿದ್ದರು. ಯಾರು ಏನೇ ಪ್ರಶ್ನೆ ಕೇಳಿದರೂ ತಕ್ಷಣ ಅದಕ್ಕೆ ಸೂಕ್ತ ಉತ್ತರಕೊಡಬಲ್ಲ ಪ್ರತ್ಯುತ್ಪನ್ನಮತಿಗಳು ಅವರಾಗಿದ್ದರು ಹಾಗೂ ಪ್ರತಿಯೊಬ್ಬ ವ್ಯಕ್ತಿಯಲ್ಲಿದ್ದ ಗುಣಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಗುಣಗ್ರಾಹಿಗಳೂ ಆಗಿದ್ದರು.

ಓದುವ ಅಭಿರುಚಿ

ಓದು ಅವರ ನಿರಂತರ ಹವ್ಯಾಸಗಳಲ್ಲಿ ಒಂದಾಗಿತ್ತು. ಕನ್ನಡ ಸಾಹಿತ್ಯವನ್ನೂ ಒಳಗೊಂಡಂತೆ ಜಗತ್ತಿನ ಅತ್ಯುತ್ತಮ ಕೃತಿಗಳನ್ನು ತರಿಸಿಕೊಂಡು ತಮ್ಮ ಮನೆಯಲ್ಲಿ ಒಂದು ಸುಂದರವಾದ ಗ್ರಂಥಾಲಯವನ್ನು ನಿರ್ಮಾಣ ಮಾಡಿಕೊಂಡು ಅವುಗಳನ್ನು ಓದುತ್ತಿದ್ದರು. ನನ್ನ ಮೂಲಕವೇ ಅವರು ಕನ್ನಡ ವಿ. ವಿ. ದ 'ಸಮಗ್ರ ವಚನ ಸಂಪುಟ'ಗಳನ್ನೂ, ಕುವೆಂಪು ಅವರ 'ಸಮಗ್ರ ಕಾವ್ಯ ಸಂಪುಟ'ವನ್ನೂ, ನೀನಾಸಂ ಸಂಸ್ಥೆಯ 'ಮೊದಲ ಓದು' ಮಾಲೆಯ 40 ಸಂಪುಟಗಳನ್ನೂ ತರಿಸಿಕೊಂಡಿದ್ದನ್ನು ನಾನಿಲ್ಲಿ ನೆನಪಿಸಿಕೊಳ್ಳಬೇಕು. ಯಾರಾದರೂ 'ನನ್ನ ಹವ್ಯಾಸ ಓದು' ಎಂದರೆ ಅವರ ಬಳಿ 'ಇತ್ತೀಚೆಗೆ ಯಾವ ಕೃತಿ ಓದಿದ್ದೀರಿ' ಎಂದು ಕೇಳುತ್ತಿದ್ದರು. ಅವರು ಇಂಥ ಕೃತಿ ಓದಿದ್ದೇನೆ ಎಂದರೆ ಸಾಕು. ಅವರ ಜೊತೆ ಆ ಕೃತಿಯ ಅನೇಕ ವಿಚಾರಗಳ ಕುರಿತು ಚರ್ಚಿಸುತ್ತಿದ್ದರು. ನಾನೊಮ್ಮೆ ಪಂಪನ ಆದಿಪುರಾಣದ ಕುರಿತು

ಮಾತನಾಡಿದಾಗ, ಆ ಕೃತಿಯಲ್ಲಿನ ತಮ್ಮ ಓದಿನ ಅನುಭವವನ್ನು ನನ್ನೊಂದಿಗೆ ಹಂಚಿಕೊಂಡು ಹಳಗನ್ನಡದ ಕೆಲವು ಸಂದೇಹಗಳನ್ನು ಪರಿಹರಿಸಿಕೊಂಡಿದ್ದರು. ಬೊಪ್ಪಣ ಪಂಡಿತನು ಬಾಹುಬಲಿಯನ್ನು ಕುರಿತು ಬರೆದ ಅತಿ ಪ್ರಸಿದ್ಧ ಪದ್ಯ 'ಅತಿತುಂಗಾಕೃತಿಯಾದೊಡಂ ಆಗದು' ಎಂಬ ಪದ್ಯದ ಸ್ವಾರಸ್ಯವನ್ನು ಕೇಳಿ ಚರ್ಚೆ ಮಾಡಿ ಸಂತೋಷಪಟ್ಟಿದ್ದರು. ಅದನ್ನು ನನಗೆ ಧ್ವನಿಮುದ್ರಣ ಮಾಡಿಕೊಡುವಂತೆ ಕೇಳಿ ಪಡೆದಿದ್ದರು.

ಸಮಚಿತ್ತದ ಸಮದರ್ಶಿ

ಡಾ. ಯಶೋವರ್ಮ ಅವರನ್ನು ಭೇಟಿಯಾದ ಯಾರೇ ಆದರೂ ಅವರಿಗೆ ಅವರ ವ್ಯಕ್ತಿತ್ವ ಅಯಸ್ಕಾಂತದಂತೆ ಆಕರ್ಷಕವಾಗಿ ಕಾಣುತ್ತಿತ್ತು. ಸ್ಫುರದ್ರೂಪಿಯಾಗಿದ್ದ ಅವರು ಸುಂದರವಾದ ವಸ್ತ್ರಗಳಿಂದ ಭೂಷಿತರಾಗಿ ಸಂಸ್ಥೆಗಳಿಗೆ ಭೇಟಿ ನೀಡುತ್ತಿದ್ದರು. ಸ್ನೇಹ, ಸಜ್ಜನಿಕೆ, ಮಿತಭಾಷಿತ್ವ, ಗುರುಹಿರಿಯರ ಕುರಿತ ಅಪಾರ ಗೌರವ, ಕಿರಿಯರೊಂದಿಗೆ ಪ್ರೀತಿಯಿಂದ ಮಾತಾಡಿ ಅವರನ್ನು ಪ್ರೋತ್ಸಾಹಿಸುತ್ತಿದ್ದ ರೀತಿ ಅವರ ವ್ಯಕ್ತಿತ್ವದ ಪ್ರಮುಖ ಅಂಶಗಳು. ಕಾರ್ಯದರ್ಶಿಯಾಗಿ ಅಧಿಕಾರ ವಹಿಸಿಕೊಂಡ ಮೇಲೆ ಅವರಿಗೆ ಸಾಕಷ್ಟು ಬಗೆಯ ಒತ್ತಡಗಳಿರುತ್ತಿದ್ದವು. ಆದರೆ ಅವರು 'ನನಗೆ ಕಷ್ಟವಾಗುತ್ತಿದೆ, ತುಂಬಾ ಒತ್ತಡದಲ್ಲಿದ್ದೇನೆ' ಎಂದು ಯಾವತ್ತೂ ಹೇಳಿಕೊಂಡವರಲ್ಲ. ತಮ್ಮ ವೈಯಕ್ತಿಕ ಸಮಸ್ಯೆಗಳನ್ನು ದೊಡ್ಡದು ಮಾಡಿ ಇನ್ನೊಬ್ಬರ ಅನುಕಂಪ ಬಯಸುವುದು ಅವರ ಜಾಯಮಾನವಾಗಿರಲಿಲ್ಲ. ಹೀಗಾಗಿಯೇ, ಪೂಜ್ಯ ಹೆಗ್ಗಡೆಯವರು 'ಅವನು ಯಾವತ್ತೂ ಕೂಲ್ ಕೂಲ್' ಎಂದು ಅವರ ವ್ಯಕ್ತಿತ್ವವನ್ನು ಬಣ್ಣಿಸುತ್ತಿದ್ದರು. ಯಶೋವರ್ಮ ಅವರನ್ನು ನೋಡಿದಾಗ 'ಜಗತ್ತಿನ ಎಲ್ಲ ಬಗೆಯ ಸುಖ, ಸಂತೋಷಗಳನ್ನೂ ಭಗವಂತ ಇವರಿಗೇ ಕೊಟ್ಟಿದ್ದಾನೇನೋ' ಎಂಬ ಭಾವನೆ ಬರುವಂತೆ ನಡೆದುಕೊಳ್ಳುತ್ತಿದ್ದರು. ಎಂಥದೇ ವಿಷಮಗಳಿಗೆಯಾದರೂ ಅದನ್ನು ನಗುನಗುತ್ತ, ತಾಳ್ಮೆ, ಸಂಯಮಗಳಿಂದ ನಿಭಾಯಿಸಿಕೊಂಡು ಹೋಗುವ ಅದಮ್ಯ ಶಕ್ತಿ ಅವರಿಗಿತ್ತು. ಇದಕ್ಕೆಲ್ಲ ಕಾರಣ ಅವರು ರೂಢಿಸಿಕೊಂಡು ಬಂದಿದ್ದ ಸಂಯಮ, ಸಮಚಿತ್ತವೇ ಕಾರಣ. ಲೌಕಿಕ ಜೀವನದ ಕುರಿತು ಅವರಿಗೆ ಎಷ್ಟು ಶ್ರದ್ಧೆ, ಆಸ್ಥೆ ಇತ್ತೋ ಅಷ್ಟೇ ಶ್ರದ್ಧೆ ಹಾಗೂ ಆಸ್ಥೆ ಅಧ್ಯಾತ್ಮದಲ್ಲೂ ಇತ್ತು. ಧಾರ್ಮಿಕ ಗ್ರಂಥಗಳ ಓದು ಮತ್ತು ಅದರ ಅನುಷ್ಠಾನ ಅವರ ನಿತ್ಯದ ಅಭ್ಯಾಸವಾಗಿತ್ತು. ಪ್ರತಿದಿನ ಬೆಳಿಗ್ಗೆ ತಮ್ಮ ಮನೆಯ ದೇವರ ಕೊಠಡಿಯಲ್ಲಿ ಜೈನಧರ್ಮದ ಶಾಸ್ತ್ರಗ್ರಂಥಗಳನ್ನು ಪಠಣ ಮಾಡುತ್ತಿದ್ದರು. ಅಲ್ಲಿನ ಸಂದೇಹಗಳ ಬಗ್ಗೆ ವಿದ್ವಾಂಸರಲ್ಲಿ ಚರ್ಚಿಸುತ್ತಿದ್ದರು. ಈ ಬಗೆಯ ಅನುಷ್ಠಾನ ಅವರಲ್ಲಿ ಒಂದು ಬಗೆಯ ವಿರಕ್ತಿಯನ್ನೂ ಬೆಳೆಸಿತ್ತು. 'ಭಕ್ತಿ ಬೇಕು, ವಿರಕ್ತಿ ಬೇಕು ಮುಕ್ತಿಯ ಬಯಸುವವಗೆ' ಎಂಬ ಮಾತಿನಂತೆ ಹೊರಗೆ ತೀರಾ ಲೌಕಿಕರಂತೆ ಕಂಡರೂ, ಒಳಗೊಳಗೆ ತಮ್ಮೊಳಗೊಂದು ನಿರಾಳತೆಯನ್ನು, ವೈರಾಗ್ಯಭಾವವನ್ನು, ಸ್ಥಿತಪ್ರಜ್ಞತೆಯನ್ನು ಗಟ್ಟಿಯಾಗಿಸುವಂಥ ಅಧ್ಯಾತ್ಮದ ಸಮದರ್ಶಿತ್ವವನ್ನೂ ಅವರು ಬೆಳೆಸಿಕೊಂಡು ಬಂದಿದ್ದರು. ಆದ್ದರಿಂದಲೇ ಅವರು ಯಾವತ್ತೂ ಶಾಂತರಾಗಿರಲು ಸಾಧ್ಯವಾಗುತ್ತಿತ್ತು ಎಂಬುದು ನನ್ನ ಅನಿಸಿಕೆ.

ಅಗಾಧವಾದ ಜೀವನ ಪ್ರೀತಿ

'ಯಾರು ತಮ್ಮನ್ನು ಪ್ರೀತಿಸುತ್ತಾರೋ ಅವರು ಇತರರನ್ನೂ ಅಷ್ಟೇ ಪ್ರೀತಿಸಬಲ್ಲರು' ಎಂಬುದಕ್ಕೆ ಯಶೋವರ್ಮ ಅವರು ಉತ್ತಮ ನಿದರ್ಶನ. ಬದುಕಿನ ಎಲ್ಲ ಬಗೆಯ ಒಳಿತನ್ನೂ

ಅವರು ಮೆಚ್ಚಿಕೊಳ್ಳುತ್ತಿದ್ದರು ಹಾಗೂ ಅವುಗಳನ್ನು ಇತರರಲ್ಲಿ ಕಾಣಲು ಪ್ರಯತ್ನಿಸುತ್ತಿದ್ದರು. ಹಾಸುಹೊಕ್ಕಾಗಿದ್ದ ಅವರ ಅಪಾರವಾದ ಸೌಂದರ್ಯಪ್ರಜ್ಞೆ ತನ್ನನ್ನೂ ಇತರರನ್ನೂ, ಸಂಸ್ಥೆಗಳನ್ನೂ ಪ್ರಭಾವಿಸಿದ್ದು ವಿಶೇಷ. ಕಾಲೇಜಿನ ಗೋಡೆಯ ಬಣ್ಣ ಹೇಗಿರಬೇಕು, ವಿದ್ಯಾರ್ಥಿಗಳ ಸಮವಸ್ತ್ರದ ಬಣ್ಣ ಹೇಗಿರಬೇಕು, ಎಲ್ಲಿ ಯಾವ ಬಗೆಯ ಹೂಗಿಡಗಳಿರಬೇಕು, ಉದ್ಯಾನವನ ಹೇಗಿರಬೇಕು, ಅಧ್ಯಾಪಕರ ವಸ್ತ್ರ ಸಂಹಿತೆ ಹೇಗಿರಬೇಕು, ತರಗತಿಗಳು, ಕಾರಿಡಾರ್‌ಗಳು ಹೇಗಿರಬೇಕು ಎಂಬ ವಿಷಯಗಳ ಕುರಿತೂ ಅವರಿಗೆ ಸ್ಪಷ್ಟ ಚಿಂತನೆಗಳಿದ್ದವು. ಸಿಬ್ಬಂದಿಗಳನ್ನು ಆತ್ಮೀಯತೆಯಿಂದ, ಸಭ್ಯತೆ, ಗೌರವಗಳಿಂದ ನಡೆಸಿಕೊಳ್ಳುತ್ತಿದ್ದದ್ದು ಅವರ ವಿಶೇಷ ಗುಣ. ಸಮಯ ಸಿಕ್ಕಾಗ ಅವರೊಂದಿಗೆ ಹರಟೆ ಹೊಡೆದು ಹಾಸ್ಯ ಚಟಾಕಿ ಸಿಡಿಸಿ ಸಂತೋಷ ಪಡಿಸುತ್ತಿದ್ದರು. ಸಭೆ, ಸಮಾರಂಭಗಳಲ್ಲಿ, ಮಾತುಕತೆಗಳಲ್ಲಿ, ಸೌಹಾರ್ದ ಭೇಟಿಗಳಲ್ಲಿ ಅವರು ತಿಳಿಹಾಸ್ಯದ ಮಾತುಗಳಿಂದ ತಮ್ಮೆದುರಿಗೆ ಇರುವವರನ್ನು ಸೆಳೆದುಬಿಡುವ ಹಾಗು ಕ್ಲಿಷ್ಟಕರ ಸನ್ನಿವೇಶಗಳನ್ನು ಹಗುರಗೊಳಿಸಿಬಿಡುವ ವಿಶಿಷ್ಟ ವ್ಯಕ್ತಿತ್ವ ಅವರಿಗಿತ್ತು. ಸಿಬ್ಬಂದಿಗಳ ಹುಟ್ಟುಹಬ್ಬದಂದು ತಮ್ಮ ಕಚೇರಿಗೆ ಅವರನ್ನು ಕರೆಸಿಕೊಂಡು ಶುಭಾಶಯ ಪತ್ರ ನೀಡಿ ಅವರೊಂದಿಗೆ ಚಹಾ ಸೇವಿಸಿ ಅಭಿನಂದಿಸುವ ಪರಿಪಾಠವನ್ನು ಇಟ್ಟುಕೊಂಡಿದ್ದರು. ಕಷ್ಟದಲ್ಲಿರುವ ಸಿಬ್ಬಂದಿಗಳ ನೆರವಿಗೆ ಧಾವಿಸುತ್ತಿದ್ದರು. ಕೆಲವೊಮ್ಮೆ ಸಿಬ್ಬಂದಿವರ್ಗದವರ ಮನೆಗೇ ತೆರಳಿ ಅವರ ಆರೋಗ್ಯ ವಿಚಾರಿಸಿಕೊಳ್ಳುತ್ತಿದ್ದರು. ವರ್ಷದ ಕೊನೆಯಲ್ಲಿ ಸಿಬ್ಬಂದಿಗಳಿಗೆ ಪ್ರವಾಸ ಹೋಗಲು ಬಸ್ ವ್ಯವಸ್ಥೆ ಮಾಡುತ್ತಿದ್ದರು. ಶೈಕ್ಷಣಿಕ ವರ್ಷದ ಕೊನೆಯಲ್ಲಿ ಸಿಬ್ಬಂದಿಗಳೆಲ್ಲರೂ ಸೇರಿ ಕ್ಷೇತ್ರದ ಶ್ರೀ ಮಂಜುನಾಥ ಸ್ವಾಮಿಗೆ, ಉಜಿರೆಯ ಜನಾರ್ದನ ಸ್ವಾಮಿಗೆ ವಿಶೇಷ ಪೂಜೆ ಮಾಡಿಸುವ ಸಂಪ್ರದಾಯ ಹಾಗೂ ಪೂಜ್ಯ ಹೆಗ್ಗಡೆಯವರನ್ನೂ ಅವರ ಕುಟುಂಬದವರನ್ನೂ ಸಂಸ್ಥೆಗೆ ಬರಮಾಡಿಕೊಂಡು ಸಿಬ್ಬಂದಿಗಳೆಲ್ಲರೂ ಒಟ್ಟಿಗೆ ಸೇರಿ 'ಸ್ನೇಹಕೂಟ' ಏರ್ಪಡಿಸುವ ಸಂಪ್ರದಾಯವಿದೆ. ಈ ಉಪಕ್ರಮಗಳಿಗೆ ನಾಂದಿ ಹಾಡಿದವರು ಡಾ. ಯಶೋವರ್ಮ ಅವರು. ಎಸ್.ಡಿ.ಎಮ್. ಎನ್ನುವುದು ಒಂದು ಕುಟುಂಬ ಎಂಬ ಭಾವನೆ ಬಲವಾಗುವಂತೆ ಮಾಡಲು ಇದು ಸಹಾಯಕ ಎಂಬುದು ಅವರ ಅಭಿಪ್ರಾಯವಾಗಿತ್ತು.

ಕರ್ತವ್ಯನಿಷ್ಠೆ ಹಾಗೂ ಸಮರ್ಪಣಾ ಭಾವ

'ಪೂಜ್ಯ ಹೆಗ್ಗಡೆಯವರು ನನ್ನ ಭಾವ, ಶ್ರೀಮತಿ ಹೇಮಾವತಿ ವೀ. ಹೆಗ್ಗಡೆಯವರು ನನ್ನ ಅಕ್ಕ' ಎಂದು ಎಂದೂ ಹೇಳಿಕೊಳ್ಳದ, 'ಕೊಟ್ಟ ಜವಾಬ್ದಾರಿಯನ್ನು ನಿರ್ವಹಿಸಲು ನೇಮಕಗೊಂಡ ಒಬ್ಬ ಕಾರ್ಯಕರ್ತ ನಾನು' ಎಂಬ ಎಚ್ಚರ ಅವರಲ್ಲಿ ಸದಾ ಇತ್ತು. ಈ ವಿನಮ್ರ ಭಾವನೆಯೇ ಅವರು ಉನ್ನತಿಕೆಯನ್ನು ಸಾಧಿಸಲು ಸಾಧ್ಯವಾದ ಪ್ರಮುಖ ಅಂಶ ಎಂಬುದು ನನ್ನ ಭಾವನೆ. ತನ್ನ ಬಳಿ ಎಂದೂ ಅಹಂ ತಲೆಹಾಕದ ಹಾಗೆ, ದರ್ಪ, ಅಧಿಕಾರ, ಅಂತಸ್ತುಗಳು ಪ್ರದರ್ಶನಗೊಳ್ಳದ ಹಾಗೆ ನೋಡಿಕೊಂಡವರು ಅವರು. ತಮ್ಮ ಶಿಸ್ತು, ಸರಳತೆ, ಸಭ್ಯತೆ, ಶಿಷ್ಟಾಚಾರಗಳಿಂದ ಅವರು ಎಲ್ಲರ ಪ್ರೀತಿಗೆ ಪಾತ್ರರಾಗುತ್ತ ಹೋದರು. ಆಡಳಿತ ಮಂಡಳಿ ತನಗೆ ವಹಿಸಿದ ಕೆಲಸಗಳನ್ನು ಅತ್ಯಂತ ಶ್ರದ್ಧೆಯಿಂದ ಅವರು ನಿರ್ವಹಿಸಿದರು. 'ಪೂಜ್ಯ ಹೆಗ್ಗಡೆಯವರಿಗೆ ಅಪಾರವಾದ ಕಾರ್ಯಬಾಹುಳ್ಯವಿದೆ. ನಮಗೆ ಬೇಕಾದುದನ್ನೆಲ್ಲ ಅವರು ನೀಡುತ್ತ ಬಂದಿದ್ದಾರೆ. ಹೀಗಿರುವಾಗ ಅವರ ಬಳಿ ನಾವು ಸಮಸ್ಯೆಗಳನ್ನು ತೆಗೆದುಕೊಂಡು ಹೋಗದೆ ಸಾಧನೆಯ ಪಟ್ಟಿಯನ್ನು ಮಾತ್ರ ತೆಗೆದುಕೊಂಡು ಹೋಗಬೇಕು, ನಾವೆಲ್ಲರೂ

ಅವರಿಗೆ ಶಾಕ್ ಅಬ್ಸರ್‌ವರ್ಸ್‌ಗಳಾಗಿ ಕಾರ್ಯನಿರ್ವಹಿಸುತ್ತಿರಬೇಕು' ಎಂದು ಅವರು ಯಾವಾಗಲೂ ಹೇಳುತ್ತಿದ್ದರು. ಪೂಜ್ಯ ಹೆಗ್ಗಡೆಯವರಿಂದ ಯಾವಾಗಲೇ ಕರೆ ಬರಲಿ ಅವರು ತಮ್ಮ ಎಲ್ಲ ಕೆಲಸವನ್ನು ಬದಿಗಿಟ್ಟು ತಕ್ಷಣ ಹೊರಟು ಹೋಗುತ್ತಿದ್ದರು. 'ಅದು ನನ್ನ ಪ್ರಥಮ ಆದ್ಯತೆ' ಎಂದು ಅವರು ಭಾವಿಸಿದ್ದರು.

ಡಾ. ಯಶೋವರ್ಮ ಅವರ ಯಶಸ್ಸಿನ ಹಿಂದೆ ಪೂಜ್ಯ ಹೆಗ್ಗಡೆಯವರ ಹಾಗೂ ಆಡಳಿತ ಮಂಡಳಿಯ ಪೂರ್ಣ ಆಶೀರ್ವಾದ ಇರುವುದನ್ನು ನಾನು ನೆನಪಿಸಿಕೊಳ್ಳಲೇಬೇಕು. 'ನನ್ನ ವ್ಯಕ್ತಿತ್ವ ಹಾಗೂ ಚಿಂತನೆಗಳ ಹಿಂದೆ ಪೂಜ್ಯ ಹೆಗ್ಗಡೆಯವರ ಮಾರ್ಗದರ್ಶನ ಹಾಗೂ ಕರ್ತೃತ್ವ ಶಕ್ತಿ ಇದೆ' ಎಂದು ಅವರು ಭಾವಿಸಿದ್ದರು. ಸಂಸ್ಥೆಯ ಸಮರ್ಪಣಾಭಾವದ ಪ್ರಾಧ್ಯಾಪಕರ ಹಾಗೂ ಸಿಬ್ಬಂದಿಗಳ ಅನುಭವವನ್ನು, ಕಾರ್ಯದಕ್ಷತೆಯನ್ನು ಸಮರ್ಥವಾಗಿ ಬಳಸಿಕೊಂಡಿದ್ದು ಸಂಸ್ಥೆಯ ಏಳಿಗೆಗೆ ಕಾರಣವಾದ ಇನ್ನೊಂದು ಅಂಶ. ಇವುಗಳನ್ನು ಡಾ. ಯಶೋವರ್ಮ ಅವರು ಪ್ರೀತಿಯಿಂದ ನೆನಪಿಸಿಕೊಳ್ಳುತ್ತಿದ್ದರು.

ತಾವು 23 ವರ್ಷಗಳ ಕಾಲ ಪ್ರಾಂಶುಪಾಲರಾಗಿ ಕಾರ್ಯನಿರ್ವಹಣೆ ಮಾಡಿ ಸಂಸ್ಥೆಗೆ ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ಸ್ಥಾನಮಾನ ತಂದುಕೊಟ್ಟಿದ್ದ ಉಜಿರೆ ಕಾಲೇಜಿನ ಬಗ್ಗೆಯಂತೂ ಅವರಿಗೆ ಅಪಾರವಾದ ಪ್ರೀತಿಯಿತ್ತು. ಆ ಸಂಸ್ಥೆಯ ಏಳಿಗೆಗೆ ಅವರು ಅನವರತ ಚಿಂತಿಸುತ್ತಿದ್ದರು. 'ಖಾವಂದರು ಅನುಮತಿ ಕೊಟ್ಟರೆ ನಾನು ಕಾಲೇಜಿನ ಮೇಲೆಯೇ ಒಂದು ಕೊಠಡಿ ಕಟ್ಟಿಸಿಕೊಂಡು ಇದ್ದುಬಿಡುತ್ತಿದ್ದೆ' ಎಂದು ತಮಾಷೆಯಾಗಿ ಹೇಳುತ್ತಿದ್ದರು. ಕಾಲೇಜು ಬೇರೆ ತನ್ನ ಮನೆ ಬೇರೆ ಎಂದು ಅವರು ಎಂದೂ ಭಾವಿಸಿದವರಲ್ಲ. ಕಾಲೇಜಿಗೆ ಯಾರಾದರೂ ಮುಖ್ಯವಾದ ಅತಿಥಿಗಳು ಬಂದಾಗ ಅವರನ್ನು ತಮ್ಮ ಮನೆಗೆ ಭೋಜನಕ್ಕೆ ಕರೆದುಕೊಂಡು ಹೋಗಿ ಆತಿಥ್ಯ ನೀಡುತ್ತಿದ್ದರು. ಕಳೆದ ಏಳೆಂಟು ತಿಂಗಳಿನಿಂದ ಅವರಿಗೆ ಅಸೌಖ್ಯವಾಗಿದ್ದರೂ ಪ್ರತಿದಿನ ಆನ್‌ಲೈನ್‌ನಲ್ಲಿ ಅಧ್ಯಾಪಕರೊಂದಿಗೆ ಮಾತಾಡುತ್ತ ನ್ಯಾಕ್ ಪುನರ್ ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಸಂಪೂರ್ಣ ತೊಡಗಿಸಿಕೊಂಡು ಮಾರ್ಗದರ್ಶನ ನೀಡುತ್ತಿದ್ದರು. ಮನೆಯವರು 'ನಿಮಗೆ ವಿಶ್ರಾಂತಿ ಬೇಕು' ಎಂದು ಎಚ್ಚರಿಸುತ್ತಿದ್ದರೂ ಕೇಳದೆ ಹಠದಿಂದ ಸಂಸ್ಥೆಯೇ ತನ್ನ ಜೀವನಾಡಿ ಎಂದು ಅದನ್ನೇ ಉಸಿರಾಡುತ್ತಿದ್ದರು. ಸಿಂಗಾಪುರದ ಹಾಸಿಗೆಯಲ್ಲಿ ಮಲಗಿ ಚಿಕಿತ್ಸೆ ಪಡೆಯುತ್ತಿದ್ದ ತಮ್ಮ ಕೊನೆಯ ದಿನಗಳಲ್ಲೂ ಪ್ರತಿದಿನ ಕಾಲೇಜಿನ ಚಟುವಟಿಕೆಗಳಿಗೆ ಮೇಲ್ ಹಾಕುತ್ತ, ಅದಕ್ಕೆ ಉತ್ತರ ತರಿಸಿಕೊಂಡು ಮಾರ್ಗದರ್ಶನ ಮಾಡುತ್ತಿದ್ದರು. ವೈದ್ಯರು 'ನೀವು ಲ್ಯಾಪ್‌ಟಾಪ್, ಮೊಬೈಲ್ ಬಳಸುವಂತಿಲ್ಲ' ಎಂದು ಎಷ್ಟೇ ಎಚ್ಚರಿಸಿದ್ದರೂ, ಮಕ್ಕಳನ್ನು ಹತ್ತಿರ ಕರೆದು ಒಮ್ಮೆ ಲ್ಯಾಪ್‌ಟಾಪ್‌ಕೊಡಿ, ಕಾಲೇಜಿಗೆ ಒಂದು ಮೈಲ್ ಕಳಿಸಲಿಕ್ಕಿದೆ' ಎನ್ನುತ್ತಿದ್ದರಂತೆ. ಇದು ಅವರ ಸಮರ್ಪಣಾಭಾವಕ್ಕೆ, ಕಾಲೇಜಿನ ಕುರಿತು ಅವರಿಗಿದ್ದ ಕಾಳಜಿ, ಪ್ರೀತಿಗಳಿಗೆ ಜ್ವಲಂತ ನಿದರ್ಶನ. ದೀಪ ತಾನು ಬೆಳಗಿ ಇತರರಿಗೆ ಬೆಳಕು ಕೊಡುವಂತೆ ಡಾ. ಯಶೋವರ್ಮ ಅವರು ಸಂಸ್ಥೆಗೆ ಬೆಳಕುಕೊಟ್ಟು ಮರೆಯಾದವರು. ಶಿವನನ್ನು ಜನಪದರು ಪದ್ಯವೊಂದರಲ್ಲಿ ಹೀಗೆ ಕಟ್ಟಿದ್ದಾರೆ: 'ಹೂವಾಗ ಹುದುಗ್ಯಾನ, ಮಾಲ್ಯಾಗ ಮಲಗ್ಯಾನ, ಮೊಗ್ಗಾಗ ಕಣ್ಣು ತೆರೆದಾನ' ಎಂದು. ಯಶೋವರ್ಮ ಅವರು ಇಂದು ಕಾಲೇಜಿನ ಪ್ರತಿಯೊಂದು ಗಿಡಗಳಲ್ಲಿ, ಮರಗಳಲ್ಲಿ, ಅಂದ, ಚಂದಗಳಲ್ಲಿ, ವಿನೂತನ ಪ್ರಯೋಗಗಳಲ್ಲಿ, ಶಿಸ್ತು, ಸಂಭ್ರಮಗಳಲ್ಲಿ ಹುದುಗಿದ್ದಾರೆ, ಮಾತ್ರವಲ್ಲದೆ ಅರಳಿದ್ದಾರೆ.

***



ಯಶಣ್ಣ–ಸೋದರ ಪ್ರೇಮಕ್ಕೊಂದು ಭಾಷ್ಯ

■ ಶ್ರೀಮತಿ ಪ್ರಿಯದರ್ಶಿನಿ, ಪಂಜ

'Good behavior does'not have any monetary value. But it has the power to purchase millions of hearts' ಈ ಮಾತು ನಮ್ಮ ಯಶಣ್ಣನ ವ್ಯಕ್ತಿತ್ವಕ್ಕೆ ಅಕ್ಷರಶ: ಅನ್ವಯಿಸುತ್ತದೆ. ತನ್ನ ಪ್ರಾಮಾಣಿಕ, ನೇರ ಮತ್ತು ಹಿತ–ಮಿತ ನಿಷ್ಕಲ್ಮಶ ನುಡಿ, ತನ್ನ ಸಂಸ್ಥೆಯ ಬಗ್ಗೆ ಅವರಿಗಿದ್ದ ಅಪರಿಮಿತ ಪ್ರೀತಿ, ಅಭಿಮಾನ, ಸೃಜನಶೀಲತೆ, ಸರಳ, ಸುಂದರ, ವ್ಯಕ್ತಿತ್ವ, ಪರರ ಕಷ್ಟಗಳಿಗೆ ಸ್ಪಂದಿಸುವ ಗುಣ ಮತ್ತು ಯಾರಲ್ಲೂ ಭೇದ ಭಾವ ಮಾಡದೆ ಎಲ್ಲರನ್ನು ಸಮಾನವಾಗಿ ಪ್ರೀತಿಸುವ ಅವರ ಹೃದಯ ಶ್ರೀಮಂತಿಕೆ ಈ ಕಾರಣಗಳಿಂದಲೇ ಅವರು ಸಾವಿರಾರು ಜನರ ಪ್ರೀತಿ ವಿಶ್ವಾಸ ಗಳಿಸಿದ್ದಾರೆ.

ಸಾಮಾನ್ಯವಾಗಿ ಒಬ್ಬರ ಶ್ರೀಮಂತಿಕೆಯನ್ನು ಅವರು ಸಂಪಾದಿಸಿದ ದುಡ್ಡು, ಆಸ್ತಿ, ಲಭಿಸಿದ ಸನ್ಮಾನಗಳಿಂದ ಅಳೆಯುತ್ತಾರೆ. ಆದರೆ ನಮ್ಮ ಯಶಣ್ಣ ಯಾವತ್ತೂ ಅದರ ಹಿಂದೆ ಬಿದ್ದವರಲ್ಲ. ಅವರು ಬೇರೆ ಎಲ್ಲಿಯೂ ಆಸ್ತಿ ಪಾಸ್ತಿ ಮಾಡಲಿಲ್ಲ ಅಥವಾ ಪ್ರಶಸ್ತಿ, ಸನ್ಮಾನದ ಹಿಂದೆ ಬೀಳಲಿಲ್ಲ. ವೈಯಕ್ತಿಕವಾಗಿ ಅವರಿಗೆ ಪ್ರಶಸ್ತಿಗಳು ಬಂದಾಗ ಅದನ್ನು ಸ್ವೀಕರಿಸಲೊಪ್ಪದೆ ಇದ್ದದ್ದನ್ನು ನೋಡಿದ್ದೇನೆ. ನಾನೇನಾದರೂ ಒಳ್ಳೆಯ ಕೆಲಸ ಮಾಡಿದ್ದರೆ ಅದು ಈ ಕಾಲೇಜಿಗೋಸ್ಕರ ಎನ್ನುತ್ತಿದ್ದರು. ಕಾಲೇಜಿಗೇನಾದರೂ ಪ್ರಶಸ್ತಿ ಬಂದರೆ ಅದಕ್ಕೆ ಸಂಬಂಧಪಟ್ಟವರನ್ನು ಕರೆದು ಅವರ ಬೆನ್ನುತಟ್ಟಿ ಪ್ರೋತ್ಸಾಹಿಸಿ ಸಂತೋಷಪಡುತ್ತಿದ್ದರು. ಯಾವುದೇ ಕಾಲೇಜು ಇರಲಿ ಅಥವಾ ಸಂಸ್ಥೆಯೇ ಇರಲಿ ಅಲ್ಲಿ ಯಶಣ್ಣನಂತಹ ನಿಷ್ಕಳಂಕ ಮನಸ್ಸಿನವರು ಇದ್ದರೆ ಆ ಸಂಸ್ಥೆ ಉದ್ಧಾರವಾಗುವುದು ಖಂಡಿತ. 'ಇವನಾರವ ಇವನಾರವ' ಎನ್ನದೆ ಎಲ್ಲರನ್ನೂ 'ಇವ ನಮ್ಮವ'ನೆಂದು ಕರೆದು ಅಭಿಮಾನ ತೋರುತ್ತಿದ್ದರು. ವಿದ್ಯಾರ್ಥಿಗಳ ಏನೇ ಸಮಸ್ಯೆಗಳಿರಲಿ. ವೈಯಕ್ತಿಕವಾಗಿ ಅಥವಾ ಕಾಲೇಜು, ಹಾಸ್ಟೆಲ್‌ನಲ್ಲಾಗಲಿ ಅದಕ್ಕೆ ತಕ್ಷಣ ಸ್ಪಂದಿಸುತ್ತಿದ್ದರು. ಪ್ರತಿ ವಾರ ದಂಪತಿಗಳಿಬ್ಬರೂ ಎಲ್ಲಾ ಹಾಸ್ಟೆಲ್‌ಗಳಿಗೆ ಹೋಗಿ ಅಲ್ಲಿಯ ಊಟದ ವ್ಯವಸ್ಥೆ, ಶುಚಿ, ರುಚಿ, ಗುಣಮಟ್ಟವನ್ನು ಸ್ವತಃ ಪರೀಕ್ಷಿಸುತ್ತಿದ್ದರು. ದೂರದ ಊರಿನಿಂದ ಬಂದ ಮಕ್ಕಳಿಗೆ ಮನೆ ಊಟ ನೆನಪಾಗಬಾರದು ಎಂದು ಅವರಿಗೆ ಬೇಕಾದ ಹಾಗೆ ಅಡುಗೆ ಮಾಡಿಸುತ್ತಿದ್ದರು. ಕ್ರೀಡಾ ಪ್ರೇಮಿಯಾದ ಅವರಿಗೆ ಕ್ರೀಡಾಳುಗಳ ಮೇಲೆ ವಿಶೇಷ ಒಲವು, ಅಭಿಮಾನ ಇತ್ತು. ಅವರಿಗೆ ಒಳ್ಳೆಯ ಊಟ, ಹಾಲು, ಹಣ್ಣುಗಳ ವ್ಯವಸ್ಥೆ ಮಾಡಿದ್ದರು. ಅವರಲ್ಲಿ ಪ್ರೀತಿ, ಹೃದಯ ಶ್ರೀಮಂತಿಕೆ ಎನ್ನುವುದು ಹಂಚಿದಷ್ಟೂ ಮುಗಿಯದ ಅಕ್ಷಯ ಪಾತ್ರೆಯಾಗಿ ನಮ್ಮ ಎಲ್ಲಾ ಕಷ್ಟ ಸುಖಗಳಿಗೂ ಅವರು ಬೆನ್ನೆಲುಬಾಗಿ ನಿಲ್ಲುತ್ತಿದ್ದರು. ಅವರೊಂದು ವಿಶಾಲವಾದ ಆಲದ ಮರದ ಹಾಗೆ ಇದ್ದರು. ಅದರ ಅಡಿಗೆ ಬಂದವರೆಲ್ಲರೂ ಅದರ ನೆರಳಿನ ಸುಖ ಅನುಭವಿಸುತ್ತಿದ್ದೆವು.

'ಸ್ವರ್ಗಕ್ಕೆ ಕಿಚ್ಚು ಹಚ್ಚು' ಎನ್ನುವ ಮಾತಿದೆ. ನಮಗೆ ಉಜಿರೆಯಲ್ಲಿರುವ ಯಶಣ್ಣ ಅತ್ತಿಗೆಯ ಮನೆಯೇ ಸ್ವರ್ಗದ ಹಾಗೆ ಅನ್ನಿಸುತಿತ್ತು. ಊಟ ತಿಂಡಿಯ ಹೊತ್ತಿಗೆ ಎಲ್ಲರೂ ಕೂಡಿ ಊಟ ಮಾಡುವುದೇ ಒಂದು ಸಂಭ್ರಮ. ಮಧ್ಯಾಹ್ನದ ಊಟವಂತೂ ಮುಗಿಯುವಾಗ ಕೆಲವೊಮ್ಮೆ ಎರಡೂವರೆ–ಮೂರು ಗಂಟೆ ಆಗಿರುತ್ತಿತ್ತು. ಊಟದ ಮೇಜು ಅನ್ನುವುದು ರೌಂಡ್ ಟೇಬಲ್ ಕಾನ್ಫರೆನ್ಸ್‌ನಂತೆ ಇರುತ್ತಿತ್ತು. ಅಲ್ಲಿ ಬರದ ವಿಷಯಗಳೇ ಇಲ್ಲ. ಅವರು ತುಳು ನಾಟಕ ಪ್ರೇಮಿ. ಸಿನೆಮಾದಿಂದ ಹಿಡಿದು ರಾಜಕೀಯ, ಕಾಲೇಜಿನಲ್ಲಿ ನಡೆಯುವ ಘಟನೆಗಳು, ಸಭೆ–ಸಮಾರಂಭಗಳಿಗೆ ಹೋದರೆ ಅಲ್ಲಿಯ ಸುದ್ದಿ, ತಾನು ಓದಿದ ಪುಸ್ತಕದ ವಿಷಯಗಳ ಬಗ್ಗೆ ಚರ್ಚೆಯಾಗುವ ಜೊತೆಗೆ ಮಕ್ಕಳಿಗೆ ಕೀಟಲೆ ಮಾಡುತ್ತಾ ಎಲ್ಲರು ಸರಿಯಾಗಿ ತಿನ್ನುತ್ತಿದ್ದಾರಾ ಎಂದು ಗಮನಿಸುತ್ತಿದ್ದರು. ಬರೀ ಗಂಜಿ ಉಪ್ಪಿನಕಾಯಿ ತಿಂದರೂ ಅದನ್ನೇ ಹೊಟ್ಟೆ ತುಂಬಾ ತಿಂದು ಬಾಯಿ ತುಂಬಾ ಹೊಗಳುತ್ತಿದ್ದರು.

ನಾವು ಸಣ್ಣದಿರುವಾಗ ನಮಗೆ ಹಬ್ಬಗಳೆಂದರೆ ಬರೀ ಪಾಯಸ ತಿನ್ನುವುದಕಷ್ಟೇ ಸೀಮಿತವಾಗಿರುತ್ತಿತ್ತು. ಆದರೆ ಯಶಣ್ಣ ಅತ್ತಿಗೆ ಉಜಿರೆಗೆ ಬಂದ ನಂತರ ಹಬ್ಬದ ನಿಜವಾದ ಅರ್ಥ ನಮಗೆ ಗೊತ್ತಾಯ್ತು. ದೀಪಾವಳಿ, ನವರಾತ್ರಿ, ನಾಗರ ಪಂಚಮಿ ಹಬ್ಬಗಳನ್ನಂತೂ ನಾವು ಮನಃಪೂರ್ತಿ ಆನಂದಿಸಿ ಅನುಭವಿಸಿದ್ದೇವೆ. ನಾವು ಸಣ್ಣದಿರುವಾಗ ನಾಗರ ಪಂಚಮಿ ಬಗ್ಗೆ ಪಠ್ಯ ಪುಸ್ತಕದಲ್ಲಿ ಒಂದು ಲೇಖನ ಇತ್ತು. "ಅಣ್ಣ ಬರತಾನೆ ಪಂಚಮಿಗೆ ಕರೆಯಾಕ" ಎಂದು ಸಹೋದರಿಯರು ಹೇಳುತ್ತಿದ್ದರು. ಅಂದು ನಾವು ಬರೀ ಪಾಠದಲ್ಲಿ ಓದುತ್ತಿದ್ದೆವು ಹಾಗೆ ಮರೆತು ಬಿಡುತ್ತಿದ್ದೆವು.

ನಮ್ಮ ಅತ್ತಿಗೆ ಹುಬ್ಬಳ್ಳಿಯವರು. ಹಾಗಾಗಿ ಒಂದು ವಾರ ಮೊದಲೆ ಅಣ್ಣ ಅತ್ತಿಗೆಯಿಂದ ಹಬ್ಬಕ್ಕೆ ಕರೆ ಬರುತ್ತಿತ್ತು. ನಾನಂತು ಎರಡು ದಿನ ಮೊದಲೇ ಹಾಜರಾಗುತ್ತಿದ್ದೆ. ನಾನು ಯಾವುದೇ ಹಬ್ಬಕ್ಕೆ ಬರಲಿ ಬಂದ ತಕ್ಷಣ "ಹಾ! ಹಬ್ಬ ಬಂತು ಎಂದು ಸಂಭ್ರಮಿಸುತ್ತಿದ್ದರು. ಆಗಲೇ ಅಲ್ಲಿ ಉಂಡೆಗಳ ತಯಾರಿ ನಡೆಯುತ್ತಿತ್ತು. ಎಲ್ಲರು ಸೇರಿ ಉಂಡೆ ಕಟ್ಟುವುದೇ ಸಂಭ್ರಮ.

ನಾಗರ ಪಂಚಮಿಯ ದಿನ ಬೆಳಿಗ್ಗೆ ತೋಟದಲ್ಲಿದ್ದ ನಾಗನಿಗೆ ಹಾಲೆರೆದು ಬಂದರೆ ಮತ್ತೆ ಮನೆಯಲ್ಲಿರುವ ಬೆಳ್ಳಿ ನಾಗನಿಗೆ ಹಾಲು–ತಂಬಿಟ್ಟು–ಉಂಡೆಗಳ ನೈವೇದ್ಯವಾಗುತ್ತಿತ್ತು. ನಾವೂ 'ಮಲ್ಲಿಗೆ ಬಳ್ಳಿ ಹಂಗ ಬೆಳೆಯಲಿ ನಮ್ಮ ತವರೂರ" ಎಂದು ನಾಗನಿಗೆ ಹಾಲೆರೆಯುತ್ತಿದ್ದೆವು. ನಂತರ ನನಗೂ, ನನ್ನ ಅಕ್ಕನಿಗೂ ದೇವರ ಎದುರು ಕೂರಿಸಿ ಉಡುಗೊರೆ ಕೊಡುತ್ತಿದ್ದರು. ಅದೊಂದು ನಮ್ಮ ಪಾಲಿಗೆ ತುಂಬಾ Emotional Moment. ನಂತರ 5–6 ಬಗೆ ಉಂಡೆ, ತಾಲಿಪಟ್ಟು, ಕಡಲೆ ಪಲ್ಯದ ಭರ್ಜರಿ ಊಟ. ಪಂಚಮಿ ಮುಗಿದ ಮರುದಿನ ಹತ್ತಿರ ಇದ್ದ ಎಲ್ಲಾ ಬಂಧುಗಳಿಗೆ, ಕಾಲೇಜಿನ ಕೆಲ ಸಿಬ್ಬಂದಿಗಳಿಗೆ. ಊರಿನ ಕೆಲ ಪರಿಚಯದವರಿಗೆಲ್ಲ ರವಾನೆ ಆಗುತ್ತಿತ್ತು. ಅತ್ತಿಗೆ ಉಂಡೆ ಮಾಡುವಷ್ಟೇ ಸಂಭ್ರಮದಿಂದ ಹಂಚುತ್ತಿದ್ದರು ಕೂಡಾ.

ಕಾಲೇಜಿಗೆ ಯಾರೇ ಅತಿಥಿಗಳು ಬಂದರೂ ಅವರನ್ನು ಮನೆಗೆ ಕರೆಯದೆ ಹಾಗೇ ಅಲ್ಲಿಂದಲೇ ಕಳುಹಿಸುತ್ತಿರಲಿಲ್ಲ. ಆ ಮನೆಯಲ್ಲಿ ಇಷ್ಟರವರೆಗೂ ಎಷ್ಟೋ ಅತಿಥಿಗಳು ಬಂದು ಉಂಡು ಹೋಗಿದ್ದಾರೆ, ಎಷ್ಟೋ ಹಬ್ಬ ಹರಿದಿನಗಳು ನಡೆದಿವೆ. ಎಷ್ಟೋ ಹುಟ್ಟುಹಬ್ಬಗಳು, ಎಷ್ಟೋ ಅನಿವರ್ಸರಿಗಳು ನಡೆದಿವೆ. ಬಹಳಷ್ಟು ಕೇಕ್ ಕಟ್ ಆಗಿದೆ, ಹೋಳಿಗೆ–ಪಾಯಸದ ಊಟಗಳಾಗಿವೆ. ಪಾರ್ಟಿಗಳು ನಡೆದಿವೆ. ಪೂಜೆ– ಪುನಸ್ಕಾರಗಳಾಗಿವೆ. ಗಣ್ಯ ವ್ಯಕ್ತಿಗಳು ಬಂದು ಹೋಗಿದ್ದಾರೆ. ಹಾಗೇ ಎಷ್ಟೋ ಮುನಿಗಳು, ಸ್ವಾಮೀಜಿಗಳು ಬಂದು ದೇವರ ದರ್ಶನ ಮಾಡಿ ಆಶೀರ್ವದಿಸಿ ಹೋಗಿದ್ದಾರೆ. ಇದನ್ನೆಲ್ಲಾ ಲೆಕ್ಕ ಇಟ್ಟವರು ಯಾರೂ ಇಲ್ಲ. ನಮಗೆ ಎಲ್ಲರಿಗೂ ಸುಖದಲ್ಲೂ, ದುಃಖದಲ್ಲೂ ನೆನಪಾಗುತ್ತಿದ್ದದ್ದು ಉಜಿರೆಯಲ್ಲಿರುವ ಯಶಣ್ಣ ಮತ್ತು ಅತ್ತಿಗೆ. ಅವರು ದೊಡ್ಡ ಆಲದ ಮರದಂತಿದ್ದು, ಅದರ ಅಡಿಯಲ್ಲಿ ನಾವೆಲ್ಲರೂ ನೆರಳಿನ ಸುಖವನ್ನು ಅನುಭವಿಸುತ್ತಿದ್ದೆವು.

ಮೊನ್ನೆ ನಾನು ಲೇಖನ ಬರೆಯುತ್ತಿದ್ದಾಗ ನನ್ನವರು ಹೇಳುತ್ತಿದ್ದರು "ನೀನು ನಿನ್ನ ಯಶಣ್ಣನ ಬಗ್ಗೆ ಲೇಖನ ಅಲ್ಲ, ಕಾದಂಬರಿಯೇ ಬರೆಯಬೇಕಾದೀತು. ಯಾಕೆಂದರೆ ನೀನು ಅಲ್ಲಿಗೆ ಹೋದಷ್ಟು ಯಾರೂ ಹೋಗಿರಲಿಕ್ಕಿಲ್ಲ, ಮಾತ್ರವಲ್ಲ ನಮ್ಮ ಮಕ್ಕಳಾದ ಸ್ಮಿತಾ, ಸಾತ್ವಿಕ್‌ರ ಮದುವೆಯ ಮಂಟಪ, ಮೆನು, ಸೀರೆ, ಆಮಂತ್ರಣ ಪತ್ರಿಕೆ ಇತ್ಯಾದಿಗಳಿಂದ ಹಿಡಿದು ಎಲ್ಲವನ್ನೂ ಮುಂದೆ ನಿಂತು ನಿಭಾಯಿಸಿದವರು ಅವರು. ಹಾಗಾಗಿ ಅವರ ಬಗ್ಗೆ, ನೀನು ಬರೆವ ಲೇಖನ ತೀರಾ ಚಿಕ್ಕದಾಯಿತು" ಅನ್ನುತ್ತಿದ್ದರು. ಅದು ನನಗೂ ಗೊತ್ತಿದೆ, ಆದರೆ ಮನಸ್ಸು ಭಾರವಾದಾಗ ಭಾವನೆಗಳಿಗೆ ಅಕ್ಷರ ರೂಪ ಕೊಡುವುದು ಕಷ್ಟವಾಗುತ್ತದೆ. ಇಂಥಾ ಅಣ್ಣಂದಿರು ಎಲ್ಲಾ ಹೆಣ್ಣು ಮಕ್ಕಳ ಬದುಕಿಗೂ ಸಿಗಲಿ. ಹೆಣ್ಣಿಗೆ ಇದಕ್ಕಿಂತ ದೊಡ್ಡ ಭಾಗ್ಯವಿಲ್ಲ. ನಾವಿರುವವರೆಗೆ ಆತನ ನೆನಪು ನಮ್ಮೊಳಗೆ ಇರುವುದಂತೂ ಸತ್ಯ.

***



ತುಂಬಿದ ಮನೆ ಮನ

■ ಶ್ರೀಮತಿ ಶ್ರದ್ಧಾ ಅಮಿತ್

ಉಜಿರೆಯ "ನಿನಾದ" ಎಲ್ಲಾ ರೀತಿಯಲ್ಲೂ ತುಂಬಿದ ಮನೆ. Abundance ಎನ್ನುವ ಶಬ್ದ ಇಲ್ಲಿ ನೆನಪಾಗುತ್ತದೆ. ಅಲ್ಲಿ ನಗುವೂ ಹೆಚ್ಚು, ತಮಾಷೆ, ಹಾಸ್ಯವೂ ಹೆಚ್ಚು, ಊಟ, ತಿಂಡಿ, ಉಪಚಾರಗಳೂ ಹೆಚ್ಚು, ಜೊತೆಗೆ ಮಾಮ–ಮಾಮಿಯವರ ಪ್ರೀತಿ ಅಕ್ಕರೆಯೂ ಹೆಚ್ಚೇ. ಊರಿಗೆ ರಜೆಯಲ್ಲಿ ಬರುವ ಸಂಭ್ರಮಕ್ಕೆ ಒಂದು ಕಾರಣ ಉಜಿರೆಯಲ್ಲಿ ಎಲ್ಲರೂ ಒಟ್ಟು ಸೇರುವ ತವಕವೂ ಹೌದು. ನಮ್ಮ ಏನೇ ಯೋಚನೆ, ಯೋಜನೆಗಳಿದ್ರೂ ಅದು ಉಜಿರೆಯಲ್ಲಿ. ಅದಕ್ಕೆ ಮಾಮ–ಮಾಮಿಯರ ಸಹಕಾರ, ಹೇಗೆ ಕೇಳುವುದು ಎಂಬ ಅಳುಕಿಲ್ಲ. ಹೇಗೆ ನಡೆಯುತ್ತೆ ಎಂಬ ಯೋಚನೆ ಇಲ್ಲ. ಇಲ್ಲಿ ಯಾವ ಹೊತ್ತಿಗೆ ಹೋದರೂ ಎದುರುಗೊಳ್ಳುವ ನಗು ಮುಖಗಳೇ.

ಸಂಜೆ ಮಾಮ ಕಾಲೇಜಿನಿಂದ ಮನೆಗೆ ಬಂದರೆಂದರೆ, ಹೊಸ ಉಲ್ಲಾಸ ಬರುತ್ತಿತ್ತು, ಹಾಸ್ಯ, ನಗೆ ಚಟಾಕಿಗಳು, ತಮಾಷೆ, ಮುಗಿಯುತ್ತಿರಲಿಲ್ಲ. ಯಶಮಾಮನಿಗೆ ಎಲ್ಲವೂ ಸಂಭ್ರಮವೇ ಬೆಳಗ್ಗೆ ಬಿಸಿ–ಬಿಸಿ ಚಹಾ ಕುಡಿಯುವುದರಿಂದ ಹಿಡಿದು, ಮನೆ ಮೆಟ್ಟಲಿನ ಮೇಲೆ ಕುಳಿತು ಉದ್ದನೆ ಕಬ್ಬು ಜಗಿಯುವುದು, ಎಲ್ಲರೊಡನೆ ಸೇರಿ ಮಾಡೋ ಗಂಜಿ ಊಟ, ದೇವರ ಭಜನೆ, ಒಂದು ಒಳ್ಳೆ ಪುಸ್ತಕ ಓದಿದ್ದನ್ನು ಹಂಚಿಕೊಳ್ಳುವುದು, ಹೀಗೆ ಪ್ರತಿಕ್ಷಣವೂ ಸಂತೋಷ, ಸಂತೃಪ್ತಿಯಿಂದ ಕಳೆಯುತ್ತಿದ್ದೆವು. ಬಾಲ್ಯದಲ್ಲಿ ಪೆರಾಡಿಯ ಅಜ್ಜಿಮನೆಗೆ ಹೋಗುವ ನಮ್ಮ ಹಂಬಲ ಕಂಡು, ಆ ಕರೆಂಟಿಲ್ಲದ, ಟೀವಿ ಇಲ್ಲದ ಹಳ್ಳಿಗೆ ಯಾಕೆ ಹೋಗ್ತೀರಿ? ಎಂದು ಎಲ್ಲರಿಗೂ ಆಶ್ಚರ್ಯವಾಗುತ್ತಿತ್ತು. ಆದರೆ ಅಲ್ಲಿ ಎಲ್ಲಾ ಮಾವನವರು, ಮಾಮಿಯರು, ಚಿಕ್ಕಮ್ಮನವರು, ಅವರ ಮಕ್ಕಳೆಲ್ಲ ಜೊತೆ ಸೇರುವ ಸಂಭ್ರಮ. ಜೊತೆಗೆ ಯಶ ಮಾಮನವರ ತರಹೇವರಿ ಆಟಗಳು, ಸ್ಪರ್ಧೆಗಳು, ಜೊತೆಗೆ ನಾವು ಆಡುತ್ತಿದ್ದ ಹುಚ್ಚುನಾಟಕಗಳಿಗೆ ಅವರ ಸಲಹೆ. ಸಂಜೆಯಾದ್ರು ಗಂಜಿ ದೋಸೆ ಪಾತ್ರೆ ಹೊತ್ತು ಪಾದೆ ಏರಿ ಊಟ ಹೀಗೆ ಪ್ರತಿ ಕ್ಷಣವೂ ಸಂಭ್ರಮ.

ನಾನು ಕಾಲೇಜು ಸೇರುವ ಹೊತ್ತಿಗೆ ಮಾವ ಪ್ರಾಂಶುಪಾಲರಾಗಿ ಉಜಿರೆಗೆ ಬಂದಿದ್ರು. ಅವರ ಮನೆ ಒಂದು ಮಿನಿ ಹಾಸ್ಟೆಲ್ ಆಗಿಬಿಟ್ಟಿತ್ತು. ಓದುವ ಕೆಲವು ಮಕ್ಕಳು ಅವರ ಮನೆಯಲ್ಲಿದ್ದರೆ, ಮಧ್ಯಾಹ್ನ ಊಟಕ್ಕೆ ಬರುವವರಿಗೆ ಲೆಕ್ಕವೇ ಇರಲಿಲ್ಲ. ಆ ಪುಟ್ಟ ಅಡುಗೆ ಮನೆಯ ತಯಾರಿ ಮಾಮಿಯ ಕೈಯಲ್ಲಿ ಅಕ್ಷಯ ಪಾತ್ರೆಯಾಗುತ್ತಿತ್ತು. ಯಶಮಾಮ ಬಂದ ನಂತರ ಕಾಲೇಜಿನಲ್ಲಿ ಅನೇಕ ಬದಲಾವಣೆಗಳಾದವು. ಅವರ ಕಾರು ಕಾಲೇಜಿನ Portico ಕೆಳಗೆ ನಿಂತಿದೆ ಎಂದರೆ ಎಲ್ಲರೂ ಚುರುಕಾಗುತ್ತಿದ್ದರು. ನಂತರದ ದಿನಗಳಲ್ಲಿ ಅವರ ಕಾರ್ಯವೈಖರಿ ನೋಡಿ ನಮಗೆ ಇದೆಲ್ಲಾ ಸಿಗಲಿಲ್ಲವಲ್ಲ ಎಂದು ಬೇಸರವಾಗುತ್ತಿತ್ತು.

ಯಶ ಮಾಮನವರಿಗೆ ಓದುವ ಹವ್ಯಾಸ ನಿಧಾನವಾಗಿ ಬಂದರೂ ಮುಂದೆ ಅದನ್ನು ಅಗಾಧವಾಗಿ ಬೆಳೆಸಿಕೊಂಡರು. ರೋಟರಿ, ಜೈನ್ ಮಿಲನ್ ಹಾಗೂ ಕಾಲೇಜಿನ ಅನೇಕ

ಕಾರ್ಯಕ್ರಮಗಳಿಗೆ ಭಾಷಣಕ್ಕೆಂದು ವಿಷಯ ಕಲೆ ಹಾಕಲು ಆರಂಭವಾದ ಅವರ ಓದು ನಂತರ ಅವರ ನೆಚ್ಚಿನ ಸಂಗಾತಿಯಾಯ್ತು. ಅವರಿಗೆ ಬೇಡವಾದ ವಿಷಯವೇ ಇರಲಿಲ್ಲ. ಒಂದು ಎಳೆ ಸಿಕ್ಕರೂ ಕೂಡ ಅದರ ಪರಿಪೂರ್ಣ ಜ್ಞಾನ ದೊರೆಯುವವರೆಗೆ ಬಿಡುತ್ತಿರಲಿಲ್ಲ. ಒಮ್ಮೆ ಯಾವುದೋ ಸಂದರ್ಭದಲ್ಲಿ ರೂಮಿ ಎಂಬ ಸೂಫಿಸಂತನ ಒಂದು ವಾಕ್ಯ ಹೇಳಿದ್ದೆ, ಅದನ್ನವರು ತಮ್ಮ ಪುಸ್ತಕದಲ್ಲಿ ಬರೆದುಕೊಂಡರು. ಮುಂದೆ ವರ್ಷ ತುಂಬುವುದರೊಳಗೆ ರೂಮಿಯ ಕತೆಗಳು, ಅವನ ಎಲ್ಲಾ ಪುಸ್ತಕಗಳನ್ನು ಅವರು ಓದಿಯಾಗಿತ್ತು.

ನಿಮ್ಮ ನೆಚ್ಚಿನ ವಿಷಯ ಯಾವುದು? ಎಂದು ಕೇಳಿದರೆ ಉತ್ತರಿಸಲು ಅವರಿಗೆ ತುಂಬಾ ಕಷ್ಟವೆನಿಸುತ್ತಿತ್ತು. ಎಷ್ಟೊಂದು ವಿಷಯಗಳಿವೆ, ಹೇಗೆ ಹೇಳಲಿ? ಎನ್ನುತ್ತಿದ್ದರು. ವ್ಯರ್ಥ ಮಾತಿನಲ್ಲಿ ಕಾಲ ಕಳೆಯುವುದು, ನಿಂದಿಸುವುದು ಎಂದೂ ಇಷ್ಟವಾಗುತ್ತಿರಲಿಲ್ಲ, 'ಸಮಯ ವ್ಯರ್ಥವಾಗುತ್ತದೆ' ಎಂದು ಎದ್ದು ಹೋಗುತ್ತಿದ್ದರು. ಅನಾರೋಗ್ಯದ ಸಂದರ್ಭದಲ್ಲೂ ಏನು ಓದಿದರೂ ಬರೆದಿಟ್ಟುಕೊಳ್ಳುವ ಆಸಕ್ತಿ, ಹುಷಾರಾಗಿ ಉಜಿರೆಗೆ ಬಂದ ಮೇಲೆ ಮಾಡಬೇಕೆನ್ನುವ ಸಂಕಲ್ಪ. ಯಶ ಮಾವನವರ ಮಾತಿಗೆ ಮರುಳಾಗದವರು ಕಮ್ಮಿ. ಅವರಿದ್ದಲ್ಲಿ ನಗೆ, ಹಾಸ್ಯಗಳ ಹಬ್ಬ ಯಾವ ವಯಸ್ಸಿನವರಾದರೂ ಸರಿ, ಅವರನ್ನ ಮಾತಿಗೆಳೆದು ಬಿಡುತ್ತಿದ್ದರು. ಮಕ್ಕಳೊಡನೆ ಸಮಯ ಕಳೆಯುವುದೆಂದರೆ ಬಹಳ ಇಷ್ಟ. ಮನೆ ತುಂಬಾ ಜನ ಬರಬೇಕು. ಜೊತೆಗೆ ಕೂತು ಮಾತಾಡಬೇಕು. ಊಟದ ಮೇಜಿನ ತುಂಬಾ ಸೇರಿ ನಗು, ಹಾಸ್ಯ, ಹೊಟ್ಟೆ ತುಂಬಾ ಊಟ ಎಲ್ಲವೂ ಇರಬೇಕು.

ಮೊಮ್ಮಕ್ಕಳೊಡನೆ ಸಮಯ ಕಳೆಯುವುದೇ ಅವರಿಗೆ ತುಂಬಾ ಇಷ್ಟ. ಮಧ್ಯಾಹ್ನ ಮನೆಯವರೆಲ್ಲಾ ಮಲಗಿದ್ದರೆ ಪುಟ್ಟ ಮಗು ಮಹಿರಾಳನ್ನು ಪಕ್ಕದಲ್ಲಿ ಮಲಗಿಸಿಕೊಂಡು ಫೈಲ್‌ಗಳನ್ನು ಪರಿಶೀಲಿಸುತ್ತಿದ್ದರು. ಮಾನ್ಯಳ ಜೊತೆಗೆ ಅವಳ ಪ್ರೀತಿಯ ಪುಸ್ತಕಗಳ ಬಗ್ಗೆ ಮಾತಾದರೆ, ಮಹಿತ್, ದಿವಿತ್‌ರ ಜೊತೆಗೆ ಮನೆಯ ಮೆಟ್ಟಿಲಿನಲ್ಲಿ ಕುಳಿತು ಪ್ರಪಂಚದ ಆಗು-ಹೋಗುಗಳ ಬಗ್ಗೆ ಗಂಭೀರ ಚರ್ಚೆ ನಡೆಯುತ್ತಿತ್ತು. ಬೆಂಗಳೂರಿನಿಂದ 'ಬಾನಿ' ಬಂದರೂ ಸಂಭ್ರಮಿಸುತ್ತಿದ್ದರು. ಚರ್ಚೆ ನಡೆದು ಸುಸ್ತಾದಾಗ ಸೋನಿ ಮಾಮಿ ಬಳಿ ಐಸ್‌ಕ್ರೀಮ್‌ನ ಬೇಡಿಕೆಯೂ ಬರುತ್ತಿತ್ತು. ಉತ್ತಮ್‌ನಿಗೆ ಅವನ ದೊಡ್ಡಯ್ಯ ಬೆಳಗ್ಗಿನ 5.00 ಗಂಟೆಯ ಚಹಾದ ಸಂಗಾತಿ. ಪಾಪ ಓದಲು ಬೇಗ ಏಳುತ್ತಾನೆಂದು, ಅವರೇ 5.00 ಗಂಟೆಗೆ ಎದ್ದು ಚಹಾ ಮಾಡಿ ಓದಲು ಅನುಕೂಲ ಮಾಡಿಕೊಡುತ್ತಿದ್ದರು. 'ಎಲ್ಲರೂ ಪುಸ್ತಕ ಬರೆದು ಮುಗಿಸಿದರೆ, ನಮ್ಮ ಉತ್ತಮ್ ಪೆನ್ನಿನ ಶಾಯಿಯನ್ನೇ ಮುಗಿಸುತ್ತಾನೆಂದು' ಅವನ ಶ್ರಮದ ಬಗ್ಗೆ ಇನ್ನಿಲ್ಲದ ಹೆಮ್ಮೆ ಪಡುತ್ತಿದ್ದರು. ನಮಗೆ ನಮ್ಮ ತವರುಮನೆ, ಮಾವನಮನೆ, ಅಲ್ಲಿನ ಪ್ರೀತಿ, ಒಗ್ಗಟ್ಟು, ಮಮತೆಗಳ ಬಗ್ಗೆ ಹೆಮ್ಮೆಗಿಂತ ಹೆಚ್ಚಾಗಿ ಒಂದು ರೀತಿಯ ಅಹಂಕಾರವೇ ಇತ್ತು. ಹೇಳುತ್ತಾ ಹೋದರೆ 'ಮುಗಿಯಲಾರದ ನೆನಪುಗಳು'. ಇನ್ನವರು 'ನೆನಪು ಮಾತ್ರ' ಎಂದರೆ ನಂಬಲಾಗದ ವಿಷಯ. ವಚನವೊಂದರಲ್ಲಿ...

ಭಕ್ತಿಯೆಂಬ ಪೃಥ್ವಿಯ ಮೇಲೆ, ಗುರುವೆಂಬ ಬೀಜವಂಕುರಿಸಿ
ಲಿಂಗವೆಂಬ ಎಲೆಯಾಯಿತ್ತು, ವಿಚಾರವೆಂಬ ಹೂವಾಯಿತ್ತು
ಆಚಾರವೆಂಬ ಕಾಯಾಗಿತ್ತು, ನಿಷ್ಪತ್ತಿಯೆಂಬ ಹಣ್ಣಾಯಿತ್ತು,
ನಿಷ್ಪತ್ತಿಯೆಂಬ ಹಣ್ಣು ತೊಟ್ಟು ಬಿಟ್ಟು ಕಳಚಿ ಬೀಳುವಲ್ಲಿ
ಕೂಡಲಸಂಗಮದೇವ ತನಗೆ ಬೇಕೆಂದು ಎತ್ತಿಕೊಂಡ'

ದೇವರು ಎತ್ತಿಕೊಂಡ ಎಂಬ ಈ ಮಾತು ನಿಜವೇ ಸರಿ.



‘ಅಯ್ಯ’ ಅಂದ್ರೆ...

■ **ಪೂರನ್‌ವರ್ಮ**

ಧಾರವಾಡದ ಬೀದಿ... ತಣ್ಣನೆ ಗಾಳಿಯನ್ನು ಸೀಳಿಕೊಂಡು ಬೈಕ್ ಸಾಗ್ತಾ ಇದ್ರೂ ಮುಂದಿನ ಸೀಟಲ್ಲಿ ಕೂತ ನನಗೆ ಚಳಿಯಾಗುತ್ತಿರಲಿಲ್ಲ... ಯಾಕಂದ್ರೆ ಹಿಂದೆ ಬೆಚ್ಚನೆ ಅನುಭೂತಿ ನೀಡುವ ನೀವಿದ್ರಿ...

ನಂಗಾಗ ಮೂರೋ, ನಾಲ್ಕೋ ಹರೆಯ... ಕಾರ್ಟೂನ್ ಕ್ಯಾಸೆಟ್ ತರೋಕೆ ಅಂಗಡಿಗೆ ಹೋದ್ರೆ ಯಾವ ಕಾರ್ಟೂನ್ ಆಯ್ದುಕೊಳ್ಳಬೇಕು ಅನ್ನೋದ್ರಲ್ಲಿ ನಂಗೆ ಗೊಂದಲ ಇರ್ಲಿಲ್ಲ. ಯಾಕಂದ್ರೆ ಸೆಲೆಕ್ಟ್ ಮಾಡ್ಕೊಡೋಕೆ ನೀವೇ ಮುಂದೆ ನಿಲ್ತಿದ್ರಿ...

‘ಕಾಲು ನೆಲಕ್ಕೆ ತಾಗುವಷ್ಟು ಬೆಳೆದಿದ್ರೂ ನೀವು ಮಗನನ್ನು ಎತ್ತಿಕೊಂಡೇ ತಿರುಗುತ್ತೀರಿ’ ಅಂತಾ ಎಲ್ರೂ ಹೇಳ್ತಾ ಇದ್ರೂ ನಾನು ದೊಡ್ಡವನಾಗ್ತಿದ್ದೀನಿ ಅಂತಾ ನಿಮ್ಗೆ ಅನ್ನಿಸ್ಲೇ ಇಲ್ಲ. ಯಾಕಂದ್ರೆ ಮತ್ತಷ್ಟು ಮುತುವರ್ಜಿಯಿಂದ ನನ್ನ ಬಾಲ್ಯದ ಪ್ರತೀ ಕ್ಷಣವನ್ನು ಸುಂದರವಾಗಿಸೋದ್ರಲ್ಲಿ ನೀವು ಬ್ಯುಸಿಯಾಗಿದ್ರಿ...

ಮಕ್ಕಳ ಬಾಲ್ಯವನ್ನು ಸುಂದರವಾಗಿಸೋದು ಪ್ರತಿಯೊಬ್ಬ ತಂದೆಯ ಕನಸು. ಆದ್ರೆ ಅದನ್ನು ನಿಮ್ಮಷ್ಟು ಸಮರ್ಥವಾಗಿ ನನಸಾಗಿಸಿದವ್ರು ಯಾರೂ ಇಲ್ಲ... ಅದಕ್ಕೆ ’ಅಯ್ಯ...’ ಅಂದ್ರೆ ನನ್ನ ಪಾಲಿಗೆ ಪ್ರೀತಿಯ ಪ್ರತಿರೂಪ.

***

ಧಾರವಾಡ ಬಿಟ್ಟು ಉಜಿರೆಗೆ ಬಂದಾಗಿನ ದಿನಗಳವು. ಶಾಲೆ ಬಿಟ್ಟು ಮನೆಗೆ ಬರೋದೆ ನಂಗೆ ಸಂಭ್ರಮ. ಯಾಕಂದ್ರೆ ನಂಗಾಗಿ ಕಾಯೋಕೆ ನೀವಿದ್ರಿ... ಇಡೀ ದಿನ ಏನೇನಾಯ್ತು ಅಂತಾ ನಾನು ಹೇಳೋದನ್ನೆಲ್ಲಾ ಕೇಳೋಕೆ ರೆಡಿಯಾಗಿ ನಿಂತಿರುತ್ತಿದ್ರಿ...

ಕೇಯೂರ್ ಬೆಳೆಯುವ ಹೊತ್ತಿಗೆ ನಿಮ್ಮ ಜವಾಬ್ದಾರಿಗಳು ಹೆಚ್ಚಾಗಿದ್ವು. ಔದ್ಯೋಗಿಕ ಬದ್ಧತೆಗಳು ನಿಮ್ಮನ್ನು ಆವರಿಸಿದ್ವು. ಅದಿಕ್ಕೇ ಕೇಯೂರ್‌ನನ್ನೇ 5 ಗಂಟೆಯ ಬಳಿಕ ಆಫೀಸ್‌ಗೆ ಕರೆಸಿ 8 ಗಂಟೆಯವರೆಗೂ ಅಲ್ಲೇ ಅವನಿಗೆ ಬೋರ್ ಆಗದ ಹಾಗೆ ಮಾತಾಡಿಸ್ತಾ, ಅವ್ನ ತುಂಟ–ತರ್ಲೆ ಪ್ರಶ್ನೆಗಳಿಗೆ ಒಂಚೂರೂ ಬೇಜಾರು ಮಾಡ್ಕೊಳ್ಳದೇ ಉತ್ರ ನೀಡ್ತಾ ಕಚೇರಿ ಕೆಲಸಗಳನ್ನೆಲ್ಲಾ ಮುಗಿಸ್ತಾ ಇದ್ರಿ...

ಎಷ್ಟೇ ಕೆಲಸದ ಒತ್ತಡಗಳಿದ್ರೂ ಮಕ್ಕಳಿಗೆ ಸಮಯ ಕೊಡಬೇಕು ಅನ್ನೋದು ಪ್ರತಿಯೊಬ್ಬ ತಂದೆಯ ತುಡಿತ. ಆದ್ರೆ ಅದನ್ನು ನಿಮ್ಮಷ್ಟು ಬದ್ಧತೆಯಿಂದ ನಿರ್ವಹಿಸಿದವರು ಯಾರೂ ಇಲ್ಲ. ಅದಕ್ಕೆ ’ಅಯ್ಯ’ ಅಂದ್ರೆ ನನ್ನ ಪಾಲಿಗೆ ಮಮತೆಯ ಮಹಾರೂಪ.

***

ಕಾಲೇಜು ದಿನಗಳವು... ಹೊರಗಡೆ ಸುತ್ತಾಡೋಕೆ, ಶಾಪಿಂಗ್ ಹೋಗೋಕೆ ನಾನು ಸ್ನೇಹಿತರನ್ನು ಕಾಯಬೇಕಿರಲಿಲ್ಲ. ಯಾಕಂದ್ರೆ ನನ್ನೊಬ್ಬನನ್ನೇ ಮಂಗಳೂರಿಗೆ ಕರೆದುಕೊಂಡು ಹೋಗಿ ಸುತ್ತಾಡಿಸೋಕೆ ನೀವಿದ್ರಿ...

‘ಇವತ್ತು ನಾನು ಮತ್ತು ಪೂರಿ ಇಬ್ರೇ ‘ಚೈನಿ’ಗೆ ಹೋಗ್ತೀವಿ’ ಅಂತಾ ಅಮ್ಮನಿಗೆ ಹೇಳಿ ಶಾಪಿಂಗ್ ಮಾಲ್‌ಗೆ ಕರೆದುಕೊಂಡು ಹೋಗ್ತಿದ್ರಿ. ಸ್ನೇಹಿತನಂತೆ ಹೆಗಲ ಮೇಲೆ ಕೈ ಹಾಕಿ ನಡೆಸುತ್ತಾ ಸಿನೆಮಾ ತೋರಿಸಿ, ಹೋಟೆಲ್‌ನಲ್ಲಿ ತಿಂಡಿ ತಿನ್ನಿಸಿ, ಅದ್ರ ಮೇಲೆ ಮತ್ತೆ ಐಸ್‌ಕ್ರೀಂ ಕೊಡಿಸಿ ದಿನವೆಲ್ಲಾ ನಗುತ್ತಲೇ ಇರುವಂತೆ ಮಾಡ್ತಿದ್ರಿ...

ಬೆಳೆದ ಮಕ್ಕಳನ್ನು ಸ್ನೇಹಿತರಂತೆ ನೋಡಿಕೊಳ್ಳಬೇಕು ಅನ್ನೋದು ತಂದೆಯ ಆಶಯ. ಆದ್ರೆ ಅದನ್ನು ನಿಮ್ಮಷ್ಟು ಅಚ್ಚುಕಟ್ಟಾಗಿ ಪೂರೈಸಿದವ್ರು ಯಾರೂ ಇಲ್ಲ. ಅದಕ್ಕೆ 'ಅಯ್ಯ' ಅಂದ್ರೆ ನನ್ನ ಪಾಲಿಗೆ ಸ್ನೇಹಶೀಲಗುಣದ ಪ್ರತೀಕ.

***

ಅಮ್ಮ ಅಂದ್ರೆ ನಿಮ್ಗೆ ಅದೆಷ್ಟು ಪ್ರೀತಿ... ಅಷ್ಟೇ ಗೌರವ ಕೂಡಾ. ನಿಮ್ಮ ಅಗಾಧ ಕೆಲಸಗಳ ವ್ಯಾಪ್ತಿ, ಸಾಮಾಜಿಕ ಬದುಕಿನ ಒತ್ತಡಗಳ ನಡುವೆ ನಮಗಾಗಿ ಅಮ್ಮ ಮಾಡುತ್ತಿದ್ದ ಸೇವೆಯನ್ನು ನೀವು ಮರೆಯಲೇ ಇಲ್ಲ...

ಮನೆಗೆ ಯಾರೇ ಅತಿಥಿ-ಗಣ್ಯರು ಬಂದ್ರೂ ನಿಮ್ಮ ಮೊದಲ ಕೆಲಸ ಅವರಿಗೆ ಅಮ್ಮನನ್ನು ಪರಿಚಯ ಮಾಡಿಸೋದು. 'ಇವ್ರು ಸೋನಿಯಾವರ್ಮ, ನನ್ನ ಹೆಂಡ್ತಿ' ಅಂತಾ ನೀವು ಅತಿಥಿಗಳಿಗೆ ಹೇಳಿದ್ರೆ ಆ ನಂತ್ರ ಹೇಳೋ ವಾಕ್ಯ, 'ಇವ್ರು ಮನೆ-ತೋಟ ಮತ್ತೆ ಮಕ್ಕಳ ಜವಾಬ್ದಾರಿನಾ ಪರ್ಫೆಕ್ಟಾಗಿ ನಿಭಾಯಿಸ್ತಿರೋದ್ರಿಂದ ನಾನು ಕಾಲೇಜು ಕೆಲಸಗಳನ್ನ ನಿಶ್ಚಿಂತೆಯಿಂದ ಮಾಡ್ತಿದ್ದೀನಿ' ಅನ್ನೋದೆ ಆಗಿರ್ತಿತ್ತು...

ದಿನಕ್ಕೆ ನೂರು ಬಾರಿ ಅಮ್ಮನ ಹೆಸರು ಹೇಳುತ್ತಾ, ಮನೆಗೆ ಬಂದಾಕ್ಷಣ ಕೆಲಸದ ಒತ್ತಡಗಳನ್ನೆಲ್ಲಾ ಬಾಗಿಲಲ್ಲೇ ಬಿಟ್ಟು ಅಮ್ಮನ ಜೊತೆ ಮಾತನಾಡುತ್ತಾ, ಅವರ ಬೇಕು-ಬೇಡಗಳನ್ನು ಅವರಿಗಿಂತ ಮೊದಲೇ ಅರ್ಥಮಾಡಿಕೊಂಡು ಪೂರೈಸೋದೆ ನಿಮಗೆ ಖುಷಿ ಕೊಡ್ತಿತ್ತು. ಪ್ರತಿದಿನವೂ ಅಮ್ಮ ಮಾಡಿದ ಅಡುಗೆಯನ್ನು ಹೊಗಳಿ ಹೊಗಳಿ ಅದನ್ನು ಆಸ್ವಾದಿಸುವುದರಲ್ಲಿ ನಿಮ್ಮನ್ನು ಮೀರಿಸಲು ಯಾರೂ ಇರಲಿಲ್ಲ...

ಹೆಂಡತಿಗೆ ಗಂಡ ನೀಡಬಹುದಾದ ಅತಿದೊಡ್ಡ ಉಡುಗೊರೆ ಆತನ ಪ್ರೀತಿ ಮತ್ತು ಸಮಯ ಅನ್ನುತ್ತಾರೆ ಹಿರಿಯರು. ಆದರೆ ಈ ಮಾತಿನ ತಾತ್ಪರ್ಯವನ್ನು ನಿಮ್ಮಷ್ಟು ಸೂಕ್ಷ್ಮವಾಗಿ ಅರ್ಥಮಾಡಿಕೊಂಡು ಮಡದಿಯ ಬದುಕನ್ನು ಪರಿಪೂರ್ಣವಾಗಿಸೋಕೆ ಶ್ರಮಿಸಿದ ವ್ಯಕ್ತಿ ಮತ್ತೊಬ್ಬರಿಲ್ಲ. ಅದಕ್ಕೆ 'ಅಯ್ಯ' ಅಂದ್ರೆ ನನ್ನ ಪಾಲಿಗೆ ಆದರ್ಶ ಪತಿಯ ಶ್ರೇಷ್ಠರೂಪ.

***

ಅತಿಥಿಗಳನ್ನು ಮನೆಗೆ ಊಟಕ್ಕೆ ಕರೆದುಕೊಂಡು ಬರೋದು ನಿಮ್ಗೆ ಖುಷಿ ಕೊಡೋ ವಿಚಾರ. ನೀವು ಕರ್ಕೊಂಡುಬಂದ ಅತಿಥಿಗಳನ್ನು ಸತ್ಕರಿಸೋದಂದ್ರೆ ಅಮ್ಮನಿಗೂ ಅಷ್ಟೇ ಪ್ರೀತಿಯ ಕೆಲಸ...

ಕುಟುಂಬದ ಸದಸ್ಯರು, ಸ್ನೇಹಿತರು, ಪರಿಚಿತರು, ವಿಶ್ವಾಸದ ಪರಿಧಿಯಲ್ಲಿರುವವರು ಹೀಗೆ ಎಲ್ಲರ ಮೇಲಿನ ನಿಮ್ಮ ಪ್ರೀತಿ ವ್ಯಕ್ತವಾಗುತ್ತಿದ್ದದ್ದು ಮನೆಯ ಡೈನಿಂಗ್ ಟೇಬಲ್ ಮೇಲೆ. ಊಟ, ಊಟದಷ್ಟೇ ರುಚಿಯಾದ ಮಾತು... ಅತಿಥಿಗಳ ಖುಷಿಗೆ ಮತ್ತೇನು ಬೇಕು?

'ಅತಿಥಿ ಸತ್ಕಾರ' ಗೃಹಸ್ಥನ ಪ್ರಮುಖ ಕರ್ತವ್ಯ ಅನ್ನುತ್ತೆ ಶಾಸ್ತ್ರ-ಧರ್ಮ. ಆದ್ರೆ ಅದನ್ನು ನಿಮ್ಮಷ್ಟು ಹೃದಯಪೂರ್ವಕವಾಗಿ ಮಾಡಿದ ಮತ್ತೊಬ್ಬರನ್ನು ನಾನು ನೋಡಿಲ್ಲ. ಅದಕ್ಕೆ 'ಅಯ್ಯ' ಅಂದ್ರೆ ನನ್ನ ಪಾಲಿಗೆ ಧರ್ಮಪಾಲಕನ ಜ್ಯೇಷ್ಠರೂಪ.

***

ಶ್ರೀ ಹೆಗ್ಗಡೆಯವರು ಅಂದ್ರೆ ನಿಮಗದೆಷ್ಟು ಭಕ್ತಿ-ಪ್ರೀತಿ. ನಿಮ್ಮ ರೋಲ್ ಮಾಡೆಲ್ ಯಾರು? ಅಂತಾ ಯಾರಾದ್ರೂ ಕೇಳಿದ್ರೆ ಅವ್ರ ಪ್ರಶ್ನೆ ಮುಗಿಯುವ ಮೊದ್ಲೇ ನೀವು 'ಖಾವಂದರು' ಅಂತ ಉತ್ತರ ಹೇಳಿಬಿಡ್ತಿದ್ರಿ... ಖಾವಂದರ ದೂರದೃಷ್ಟಿ ನಮಗ್ಯಾರಿಗೂ ಬರೋದಿಕ್ಕೆ ಸಾಧ್ಯವೇ ಇಲ್ಲ ಅಂತಿದ್ರಿ ನೀವು...

ನಿಮ್ಮ ಕೆಲಸ ಮೆಚ್ಚಿ ದೊಡ್ಡವರು ಏನಾದ್ರೂ ಬೆನ್ನುತಟ್ಟಿದ್ರೆ ನಿಮಗಾಗುತ್ತಿದ್ದ ಸಂಭ್ರಮ ಹೇಳಲಾಗದಷ್ಟು. ಮನೆಗೆ ಬಂದಾಕ್ಷಣ ಖಾವಂದರು ಹೇಳಿದ ಮಾತುಗಳನ್ನು ಹೇಳಿ ಅದೆಷ್ಟು ಬಾರಿ ಖುಷಿಪಡುತ್ತಿದ್ರಿ, ನಮಗೂ ನಿಮ್ಮ ಭಕ್ತಿಪೂರ್ವಕ ಪ್ರೀತಿಯ ಸವಿ ಉಣಿಸ್ತಿದ್ರಿ ಅನ್ನೋದು ನಂಗಿನ್ನೂ ನೆನಪಿದೆ...

ನಾಯಕನೊಬ್ಬನ ಆದರ್ಶವನ್ನು ಪ್ರತಿಯೊಬ್ಬರೂ ಪಾಲಿಸಿದರೆ ಯಶಸ್ಸು ಸಾಧ್ಯ ಅನ್ನುತ್ತಾರೆ. ಆದರೆ ಮುನ್ನಡೆಸುವ ಶಕ್ತಿಯ ಧ್ಯೇಯಗಳನ್ನು ಅರಿತುಕೊಂಡು, ಅವರ ಯೋಚನೆಯಂತೆಯೇ ಪ್ರತಿಯೊಂದು ಕಾರ್ಯಗಳನ್ನೂ ಮಾಡಿ ಯಶಸ್ಸು ದೊರಕಿಸಲು ಪ್ರಯತ್ನಿಸುತ್ತಿದ್ದ ಪ್ರಾಮಾಣಿಕ ಪ್ರಯತ್ನವನ್ನು ನಿಮ್ಮಂತೆ ಮಾಡಿದ ಮತ್ತೊಬ್ಬರಿಲ್ಲ. ಅದಕ್ಕೆ 'ಅಯ್ಯ' ಅಂದ್ರೆ ನನ್ನ ಪಾಲಿಗೆ ಕರ್ತವ್ಯನಿಷ್ಠೆಯ ಮೂರ್ತರೂಪ.

***

ಅಕ್ಕ–ತಮ್ಮನ ಬಾಂಧವ್ಯ ಹೇಗಿರಬೇಕು ಅನ್ನೋದಕ್ಕೆ ಬದುಕಿನುದ್ದಕ್ಕೂ ಉದಾಹರಣೆಯಾದವ್ರು ನೀವು. ಅವರು 'ಅಕ್ಕನಿಗಿಂತ ಮಿಗಿಲಾಗಿ ನನ್ನ ಅಮ್ಮ' ಎಂದೇ ಭಾವುಕರಾಗಿ ನುಡಿಯುತ್ತಿದ್ದವ್ರು ನೀವು.

ಜ್ಞಾನಾನುರಾಗಿಯಾಗಿ ಓದಿದ ಪ್ರತಿಯೊಂದು ವಿಷಯಗಳನ್ನೂ ಅಷ್ಟೇ ಆಸ್ಥೆಯಿಂದ ಬರೆದಿಟ್ಟು, 'ಇದನ್ನು ಅಕ್ಕನಿಗೆ ಹೇಳಬೇಕು. ಅವರೊಂದಿಗೆ ಈ ವಿಚಾರ ಚರ್ಚೆ ಮಾಡಬೇಕು' ಅನ್ನುವ ಮುಗ್ಧ ವಿದ್ಯಾರ್ಥಿಯ ಅಕ್ಷರಪ್ರೀತಿ ನಿಮ್ಮದು. ಸಾಹಿತ್ಯದ ಕುರಿತಾದ ನಿಮ್ಮಿಬ್ಬರ ಸಮಾನಾಸಕ್ತಿ ಪರಿಣಾಮ ನಮ್ಮ ಮನೆ ಆಗಾಗ ಸಾಹಿತ್ಯಾರಾಧನೆಯ ತಾಣವಾಗಿ ಬದಲಾಗುತ್ತಿತ್ತು...

60ನೇ ವರ್ಷಕ್ಕೆ ಅಕ್ಕ ಉಡುಗೊರೆಯಾಗಿ ಕೊಟ್ಟ ಉಂಗುರದಲ್ಲಿ ಅವರ ಪ್ರೀತಿಯಿದ್ದರೆ, ಅದರಲ್ಲಿ ಬರೆದಿದ್ದ 'ಅಕ್ಕ' ಅನ್ನುವ ಪದವನ್ನು ಪದೇ ಪದೇ ನೋಡುತ್ತಾ, ಖುಷಿಪಡುತ್ತಾ ಮಗುವಿನಂತೆ ಸಂಭ್ರಮಿಸುತ್ತಿದ್ದ ನಿಮ್ಮ ಪ್ರೀತಿಗೆ ನೀವೇ ಸಾಟಿ...

ಅಕ್ಕನಷ್ಟೇ ಅಲ್ಲದೆ ಅಣ್ಣ, ತಮ್ಮ, ತಂಗಿ, ಅವರ ಮಕ್ಕಳು, ಮೊಮ್ಮಕ್ಕಳು ಹೀಗೆ ನಿಮ್ಮ ಪ್ರೀತಿಯೆಂಬ ಸರಪಣಿಯಲ್ಲಿ ಎಲ್ಲರನ್ನೂ ಬಂಧಿಸುತ್ತಿದ್ರಿ ನೀವು.

ಅಕ್ಕ–ತಮ್ಮಂದಿರ ನಡುವೆ ಪ್ರೀತಿಯ ಬೆಸುಗೆ ಇರುವುದು ಸಹಜ. ಆದರೆ ಒಡಹುಟ್ಟಿದವರ ಮೇಲೆ ಪ್ರೀತಿ, ಅದಕ್ಕೂ ಮಿಗಿಲಾಗಿ ಭಕ್ತಿಯ ಭಾವ ಹೊಂದಿದ್ದ ಮತ್ಯಾರನ್ನೂ ನಾನು ನೋಡಿಲ್ಲ. ಅದಕ್ಕೆ 'ಅಯ್ಯ' ಅಂದ್ರೆ ನನ್ನ ಪಾಲಿಗೆ ಪ್ರೇಮದ ಸಂಕೇತ.

***

ಅಯ್ಯ...

ನೀವು ನಮಗಾಗಿ ಕಟ್ಟಿಕೊಟ್ಟಿದ್ದು ಪ್ರೀತಿಯ ಸುಂದರ ಪ್ರಪಂಚ. ನಿಮ್ಮ ವ್ಯಕ್ತಿತ್ವ ಈ ಜಗತ್ತಿನ ಜೀವಸೆಲೆ. ಇಲ್ಲಿ ಎಲ್ಲರ ಬದುಕು ರೂಪಿಸಿದ ಶಕ್ತಿ ನೀವು. ಪೊರೆದ ಪ್ರಕೃತಿ ನೀವು. ನಿಮ್ಮದು ಬಹುಮುಖಿ ಪಾತ್ರ. ಪ್ರೇಮದ ಸೋದರನಾಗಿ, ಆದರ್ಶ ಪತಿಯಾಗಿ, ವಾತ್ಸಲ್ಯದ ತಂದೆಯಾಗಿ, ನಿಷ್ಠೆಯ ಕಾಯಕಯೋಗಿಯಾಗಿ, ದಾರಿ ತೋರೋ ಗುರುವಾಗಿ, ಮುನ್ನಡೆಸೋ ನಾಯಕನಾಗಿ ಎಲ್ಲಾ ಪಾತ್ರಗಳಿಗೂ ನ್ಯಾಯ ನೀಡಿದ್ದೀರಿ. ಹೇಗೆ ಬದುಕಬೇಕು ಅನ್ನೋದಕ್ಕೆ ನಿಮ್ಮ ಬದುಕನ್ನೇ ಉದಾಹರಣೆಯಾಗಿಸಿದ್ದೀರಿ. ನೀವೀಗ ಪರಿಪೂರ್ಣರು...

ಆದರೆ, ನಿಮ್ಮ ಜೀವಂತಿಕೆಯ ನೆನಪುಗಳನ್ನಷ್ಟೇ ಉಳಿಸಿಕೊಳ್ಳಬೇಕಾದ ಅನಿವಾರ್ಯತೆ ನಮ್ಮದು. ಮನೆ ಮುಂದಿನ ಗಾರ್ಡನ್‌ನಲ್ಲಿ ನೀವು ನನ್ನ ಕೈ ಹಿಡಿದು ನಡೆಸ್ತಿದ್ದ ಹಾದಿಯೀಗ ಹಾಗೇ ಇದೆ. ಆದ್ರೆ ಅಲ್ಲಿ ನಿಮ್ಮ ಹೆಜ್ಜೆ ಗುರುತುಗಳು ಮಾತ್ರ ಕಾಣೆಯಾಗಿವೆ. ನಿಮ್ಮ ಅಕ್ಕರೆಯ ಮಾತು, ಪ್ರೀತಿಯ ನೋಟ ನೆನಪಿನಾಳದಲ್ಲಿ ಹಸಿರಾಗಿವೆ. ಆದ್ರೆ ಗೆದ್ದಾಗ ಬೆನ್ನು ತಟ್ಟುವ, ಸೋತಾಗ ಕೈ ಹಿಡಿಯುವ ನಿಮ್ಮ ಕೈಗಳ ಬಿಸುಪು ಮಾತ್ರ ಮರೆಯಾಗಿದೆ...

ಒಚಿದೊಮ್ಮೆ ನಿಮ್ಮ ಹುಟ್ಟುಹಬ್ಬಕ್ಕೆ ಕೊಟ್ಟ ಗಿಫ್ಟ್ ಒಂದರಲ್ಲಿ ಬರೆದ 'Greatest gift I ever had came from God and I call him Dad' ಎಂದಿದ್ದ ಆ ಸಾಲುಗಳು ಮತ್ತೆ ನೆನಪಾಗುತ್ತಿದೆ. ಇಂದು ಕೊಟ್ಟ ಉಡುಗೊರೆಯನ್ನು ದೇವರು ಮರಳಿ ಪಡೆದಿರಬಹುದು. ಆದರೆ ಅದರ ನೆನಪುಗಳನ್ನಲ್ಲ...

***



ಪೂಜ್ಯ ಖಾವಂದರಿಂದ ಸನ್ಮಾನಿತರಾದಾಗ



ಸಕುಟುಂಬಿಕರಾಗಿ (ಡಾ. ಸಾತ್ವಿಕ್ ವಿವಾಹ ಸಂದರ್ಭ)



ಒಡಹುಟ್ಟಿದವರೊಂದಿಗೆ

परस्परोपग्रहो जीवानाम्

ತನುವಂ ಸಂಘದ ಸೇವೆಯೊಳ್
ಮನಮನಾತ್ಮಧ್ಯಾನದಭ್ಯಾಸದೊಳ್
ಧನಮಂ ದಾನಸುಪೂಜೆಯೊಳ್
ದಿನಮರ್ಹದ್ಧರ್ಮಕಾರ್ಯ ಪ್ರವರ್ತನೆಯೊಳ್ ಪರ್ವಮನೊಲ್ದು
ನೋಂಪಿಗಳೊಳಿರ್ದಾಯುಷ್ಯಮಂ ಮೋಕ್ಷ ಚಿಂತನೆಯೊಳ್
ತೀರ್ಚುವ ಸದ್ಗೃಹಸ್ಥನನಘಂ ರತ್ನಾಕರಾಧೀಶ್ವರಾ॥

@ ಮಂಜುಶ್ರೀ ಪ್ರಿಂಟರ್ಸ್, ಉಜಿರೆ